ಶುಕ್ರವಾರ, ಆಗಸ್ಟ್ 16, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 228 | ಪುಟ 14
www.prajavani.net
prajavani.net prajavani prajavani prajavani



ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ವಿಶೇಷ ಲೇಖನ 11
ವರಮಹಾಲಕ್ಷ್ಮೀ ಹಬ್ಬದ ಶುಭಾಶಯಗಳು
ಬಾಂಗ್ಲಾದೇಶ: ನರಮೇಧ ಆರೋಪದ ತನಿಖೆ ಶುರು 10
ಕೋಲ್ಕತ್ತ: ಆರ್.ಜಿ.ಕರ್ ಆಸ್ಪತ್ರೆ ಮೇಲೆ ದಾಳಿ 9
ಸಿನಿಮಾ ಪುರವಣಿ
'ಕೃಷ್ಣಂ ಪ್ರಣಯ ಸಖಿ' ಎಂಬ ಕಲರ್‌ಫುಲ್ ಸಿನಿಮಾದೊಂದಿಗೆ ಬಂದಿದ್ದಾರೆ ಗೋಲ್ಡನ್ ಸ್ಟಾರ್



ಸ್ವಾತಂತ್ರ್ಯೋತ್ಸವ ಭಾಷಣದಲ್ಲಿ ಪ್ರಧಾನಿ ಮೋದಿ ಪ್ರತಿಪಾದನೆ: ವಿರೋಧ ಪಕ್ಷಗಳ ಆಕ್ರೋಶ

'ಜಾತ್ಯತೀತ ಸಂಹಿತೆ: ತುರ್ತು ಅಗತ್ಯ'

ಪ್ರಜಾವಾಣಿ ವಾರ್ತೆ/ಪಿಟಿಐ

ನವದೆಹಲಿ: ದೇಶದಲ್ಲಿ 'ಜಾತ್ಯತೀತ ನಾಗರಿಕ ಸಂಹಿತೆ' ಜಾರಿಗೊಳಿಸುವ ಅಗತ್ಯವಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಗುರುವಾರ ಸ್ಪಷ್ಟವಾಗಿ ಪ್ರತಿಪಾದಿಸಿದ್ದಾರೆ.

'ಸದ್ಯದ ನಾಗರಿಕ ಸಂಹಿತೆ 'ಕೋಮುವಾದಿ ಮತ್ತು ತಾರತಮ್ಯ' ಸ್ವರೂಪದಿಂದ ಕೂಡಿದ್ದು, ದೇಶವನ್ನು ಧರ್ಮದ ಆಧಾರದಲ್ಲಿ ವಿಭಜನೆ ಮಾಡಿದೆ.



ಬೆಂಗಳೂರಿನಲ್ಲಿ ಮಾಣೆಕ್ ಶಾ ಪರೇಡ್ ಮೈದಾನದಲ್ಲಿ ನಡೆದ ಕಾರ್ಯಕ್ರಮದಲ್ಲಿ ಶಾಲಾ ಮಕ್ಕಳು ದೇಶಭಕ್ತಿ ಗೀತೆಗೆ ಹೆಜ್ಜೆ ಹಾಕಿದರು
–ಪಿಟಿಐ ಚಿತ್ರ



ಪ್ರಧಾನಿ ಮೋದಿ

ಇಂತಹ ಸಂಹಿತೆಯೊಂದಿಗೆ ನಾವು 75 ವರ್ಷ ಜೀವಿಸಿದ್ದೇವೆ. ಆದರೆ, ಜಾತ್ಯತೀತ ನಾಗರಿಕ ಸಂಹಿತೆ ಇಂದಿನ ತುರ್ತು' ಎಂದು ಹೇಳಿದ್ದಾರೆ.

78ನೇ ಸ್ವಾತಂತ್ರ್ಯೋತ್ಸವದ ಅಂಗವಾಗಿ ಕೆಂಪು ಕೋಟೆಯಿಂದ ಮಾಡಿದ ಭಾಷಣದಲ್ಲಿ ಮೋದಿ ಅವರು ಪ್ರಸ್ತಾಪಿಸಿರುವ ಈ ವಿಚಾರ ವಿವಾದ ಸೃಷ್ಟಿಸಿದೆ. ವಿರೋಧ ಪಕ್ಷಗಳು ಈ ಹೇಳಿಕೆಯನ್ನು ಖಂಡಿಸಿದ್ದು, ತೀಕ್ಷ್ಣ ಪ್ರತಿಕ್ರಿಯೆ ನೀಡಿವೆ.

'ಏಕರೂಪ ನಾಗರಿಕ ಸಂಹಿತೆ' ಜಾರಿ ವಿಚಾರವು ಬಿಜೆಪಿಯ ಚುನಾವಣಾ ಪ್ರಣಾಳಿಕೆಯಲ್ಲಿನ ಪ್ರಮುಖ ಭರವಸೆ. ಪ್ರಣಾಳಿಕೆಯಲ್ಲಿನ ಮತ್ತೊಂದು ಭರವಸೆಯಾದ 'ಒಂದು ದೇಶ–ಒಂದು ಚುನಾವಣೆ' ಬಗ್ಗೆಯೂ ಮೋದಿ ತಮ್ಮ ಭಾಷಣದಲ್ಲಿ ಪ್ರಸ್ತಾಪಿಸಿದ್ದಾರೆ.

ಸತತ 11ನೇ ಬಾರಿ ಸ್ವಾತಂತ್ರ್ಯ ದಿನಾಚರಣೆ ಭಾಷಣ ಮಾಡಿದ ಅವರು, ದೇಶದಾದ್ಯಂತ ಏಕರೂಪ ನಾಗರಿಕ ಸಂಹಿತೆ ಜಾರಿ ಕುರಿತು ಶಿಫಾರಸುಗಳನ್ನು ಒಳಗೊಂಡಿರುವ ಸಂವಿಧಾನದ ನಿರ್ದೇಶಕ ತತ್ವಗಳನ್ನು ಉಲ್ಲೇಖಿಸಿದರು.

ಸುಪ್ರೀಂ ಕೋರ್ಟ್‌ನ ತೀರ್ಪುಗಳನ್ನೂ ಉಲ್ಲೇಖಿಸಿ, ಏಕರೂಪ ನಾಗರಿಕ ಸಂಹಿತೆಯ ಅಗತ್ಯವನ್ನು ಬಲವಾಗಿ ಪ್ರತಿಪಾದಿಸಿದ್ದಾರೆ.

9ನೇ ಪುಟ ನೋಡಿ

ನಾವು 'ಕೋಮುವಾದಿ ನಾಗರಿಕ ಸಂಹಿತೆ' ಹೊಂದಿದ್ದೇವೆ ಎಂಬ ಹೇಳಿಕೆ ಅಂಬೇಡ್ಕರ್‌ಗೆ ಮಾಡಿದ ಭಾರಿ ಅವಮಾನ. ಅಂಬೇಡ್ಕರ್, ಹಿಂದೂ ವೈಯಕ್ತಿಕ ಕಾನೂನುಗಳಲ್ಲಿ ಸುಧಾರಣೆ ಬಯಸಿದ್ದರು. 1950ರಲ್ಲಿ ಅವರ ಆಶಯ ಈಡೇರಿತ್ತು. ಆದರೆ, ಈ ಸುಧಾರಣೆಗಳನ್ನು ಆರ್‌ಎಸ್‌ಎಸ್ ಹಾಗೂ ಜನಸಂಘ ವಿರೋಧಿಸಿದ್ದವು
ಜೈರಾಮ್ ರಮೇಶ್, ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ

ಯುಸಿಸಿ ಹೆಸರಿನಲ್ಲಿ ಚರ್ಚೆ ಹುಟ್ಟು ಹಾಕಿ ಸಾಮರಸ್ಯ ಕೆಡಿಸುವುದು ಮೋದಿ ಅವರ ಏಕೈಕ ಗುರಿ. ಈ ಸಂಹಿತೆ ಜಾರಿ ಆರ್‌ಎಸ್‌ಎಸ್‌ನ ಕಾರ್ಯಸೂಚಿಯೂ ಆಗಿದೆ. ಮೋದಿ ಅವರಿಗೆ ಮುಸ್ಲಿಮರ ವಿರುದ್ಧ ಹಿಂದೂಗಳನ್ನು ಎತ್ತಿಕಟ್ಟುವುದೊಂದೇ ಗೊತ್ತಿದೆ
ಸೀತಾರಾಮ್ ಯೆಚೂರಿ, ಸಿಪಿಎಂ ಪ್ರಧಾನ ಕಾರ್ಯದರ್ಶಿ

ಇದು 'ಜಾತ್ಯತೀತ' ಸಂವಿಧಾನದ ಮೇಲೆ ಬಿಜೆಪಿ ನಡೆಸುತ್ತಿರುವ ದಾಳಿ. ಜನರಿಗೆ ಸ್ಫೂರ್ತಿ ನೀಡುವ ವಿಷಯಗಳು ಮೋದಿ ಅವರಲ್ಲಿ ಇಲ್ಲ. ಹೀಗಾಗಿಯೇ ಅವರು ಕೋಮುವಾದಿ ಕಾರ್ಯಸೂಚಿ ಮೊರೆ ಹೋಗಿದ್ದಾರೆ. ಅವರು ಮಾತುಗಳು ಆರ್‌ಎಸ್‌ಎಸ್‌ನ ವಿಭಜಕ ಕಾರ್ಯಸೂಚಿಗೆ ಅನುಗುಣವಾಗಿ ಇರುತ್ತವೆ
ಡಿ.ರಾಜಾ, ಸಿಪಿಐ ಪ್ರಧಾನ ಕಾರ್ಯದರ್ಶಿ

ಚುನಾವಣೆಗಳ ಪ್ರಚಾರ ವೇಳೆ, 'ಮಂಗಳಸೂತ್ರ' ಹಾಗೂ ಇಸ್ಲಾಂ ಕುರಿತು ಭಯ ಹುಟ್ಟಿಸುವಂಥ ಹೇಳಿಕೆಗಳನ್ನು ನೀಡಿದ್ದ ಮೋದಿ ಅವರು ಈಗ 'ಜಾತ್ಯತೀತ ನಾಗರಿಕ ಸಂಹಿತೆ' ಕುರಿತು ಮಾತನಾಡಿದ್ದಾರೆ. ಜಾತ್ಯತೀತತೆ ಎಂಬುದು ಒಂದು ಪ್ರಕ್ರಿಯೆ. ತಮ್ಮ ಸಂಕುಚಿತ ಮನೋಭಾವದಿಂದಾಗಿ ಮೋದಿ ನಮ್ಮ ನಿರೀಕ್ಷೆಯನ್ನು ಹುಸಿಗೊಳಿಸುತ್ತಾರೆ
ಮನೋಜ್ ಝಾ, ಆರ್‌ಜೆಡಿ ಸಂಸದ



ಚಿನಕುರುಳಿ
ಪ್ರಕಾಶ್ ಶೆಟ್ಟಿ



ಯೋಜನೆಗಳ ಪರಿಷ್ಕರಣೆ, ಮಿತಿ ಹೇರುವ ಕುರಿತ ಗೊಂದಲಕ್ಕೆ ತೆರೆ

'ಗ್ಯಾರಂಟಿ'ಗೆ ಇನ್ನಷ್ಟು ಬಲ: ಸಿ.ಎಂ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕಾಂಗ್ರೆಸ್ ನೇತೃತ್ವದ ರಾಜ್ಯ ಸರ್ಕಾರ ಜಾರಿಗೆ ತಂದಿರುವ 'ಐದು ಗ್ಯಾರಂಟಿ' ಯೋಜನೆಗಳು ಯಥಾಪ್ರಕಾರವೇ ಮುಂದುವರಿಯಲಿವೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಇಲ್ಲಿ ಗುರುವಾರ ಘೋಷಿಸಿದರು.

ನಗರದ ಫೀಲ್ಡ್ ಮಾರ್ಷಲ್ ಮಾಣೆಕ್ ಷಾ ಪರೇಡ್ ಮೈದಾನದಲ್ಲಿ ನಡೆದ ಸ್ವಾತಂತ್ರ್ಯ ದಿನಾಚರಣೆಯಲ್ಲಿ ಧ್ವಜಾರೋಹಣ ನೆರವೇರಿಸಿ ಅವರು ಮಾತನಾಡಿ, 'ಗ್ಯಾರಂಟಿ ಯೋಜನೆಗಳನ್ನು ಸ್ಥಗಿತಗೊಳಿಸುವ ಪ್ರಶ್ನೆಯೇ ಇಲ್ಲ' ಎಂದು ಹೇಳಿ ಗೊಂದಲಕ್ಕೆ ತೆರೆ ಎಳೆದರು.

'ಗ್ಯಾರಂಟಿ ಯೋಜನೆಗಳ ವ್ಯಾಪ್ತಿಯೊಳಗೆ ಹೊಸ ಆವಿಷ್ಕಾರಗಳನ್ನು ನಡೆಸಿ ಅವುಗಳು ಫಲಾನುಭವಿಗಳಿಗೆ ಇನ್ನಷ್ಟು ನೆರವಾಗುವಂತೆ ಯೋಜನೆ ರೂಪಿಸಲಾಗುತ್ತಿದೆ' ಎಂದು ಅವರು ಹೇಳಿದರು.

4ನೇ ಪುಟ ನೋಡಿ

'ಗ್ಯಾರಂಟಿ' ದೇಶದ ಅಭಿವೃದ್ಧಿಗೆ ಕೊಡುಗೆ: ಗೆಹಲೋತ್

ಮಹಿಳೆಯರು, ಬಡ ಮತ್ತು ಮಧ್ಯಮ ವರ್ಗದ ಕುಟುಂಬಗಳ ಆರ್ಥಿಕ ಸಬಲೀಕರಣಕ್ಕಾಗಿ ಮತ್ತು ನಿರುದ್ಯೋಗಿ ಯುವಕರಿಗೆ ಸಹಾಯ ಮಾಡಲು ರಾಜ್ಯ ಸರ್ಕಾರವು ಐದು ಗ್ಯಾರಂಟಿ ಯೋಜನೆಗಳನ್ನು ಯಶಸ್ವಿಯಾಗಿ ಜಾರಿಗೊಳಿಸಿದೆ. ಇದು ದೇಶದ ಸರ್ವಾಂಗೀಣ ಅಭಿವೃದ್ಧಿಗೆ ಉತ್ತಮ ಕೊಡುಗೆ ಎಂದು ರಾಜ್ಯಪಾಲ ಥಾವರಚಂದ್ ಗೆಹಲೋತ್ ಶ್ಲಾಘಿಸಿದರು.

ರಾಜಭವನದ ಅಂಗಳದಲ್ಲಿ ಗುರುವಾರ ಧ್ವಜಾರೋಹಣ ನೆರವೇರಿಸಿ ಅವರು ಮಾತನಾಡಿದರು.

4ನೇ ಪುಟ ನೋಡಿ



ಚರ್ಚೆಗೆ ಮುಂದಾದ ಎಸ್‌ಬಿಐ, ಪಿಎನ್‌ಬಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಸ್‌ಬಿಐ ಮತ್ತು ಪಿಎನ್‌ಬಿ ಬ್ಯಾಂಕ್‌ಗಳೊಂದಿಗೆ ವ್ಯವಹಾರ ಸ್ಥಗಿತಗೊಳಿಸಿ ಎಂದು ಎಲ್ಲ ಇಲಾಖೆಗಳಿಗೆ ರಾಜ್ಯ ಸರ್ಕಾರ ಆದೇಶಿಸಿದ ಬೆನ್ನಲ್ಲೇ, ಎರಡೂ ಬ್ಯಾಂಕ್‌ಗಳು ಸರ್ಕಾರದ ಜೊತೆ ಮಾತುಕತೆಗೆ ಮುಂದಾಗಿವೆ. ಸಮಸ್ಯೆಗೆ ಸೌಹಾರ್ದವಾಗಿ ಪರಿಹಾರ ಕೊಂಡುಕೊಳ್ಳಲು ಸಿದ್ಧ ಎಂದು ಹೇಳಿವೆ.

ನಿಶ್ಚಿತ ಠೇವಣಿಗಳ ವಂಚನೆ ಪ್ರಕರಣಗಳಲ್ಲಿ ಪರಿಹಾರ ನೀಡದ ಈ ಎರಡೂ ಬ್ಯಾಂಕ್‌ಗಳಲ್ಲಿನ ಖಾತೆಗಳನ್ನು ಸ್ಥಗಿತಗೊಳಿಸಿ ಹಾಗೂ ನಿಶ್ಚಿತ ಠೇವಣಿ/ಹೂಡಿಕೆಗಳನ್ನು ವಾಪಸ್ ಪಡೆಯಿರಿ ರಾಜ್ಯ ಸರ್ಕಾರ ಈಚೆಗೆ ಆದೇಶಿಸಿತ್ತು.

ಈ ಬಗ್ಗೆ ಮಾಧ್ಯಮಗಳಲ್ಲಿ ಪ್ರಕಟವಾದ ಸುದ್ದಿಗಳನ್ನು ಗಮನಿಸಿ ಎರಡೂ ಬ್ಯಾಂಕ್‌ಗಳು ಗುರುವಾರ ಹೇಳಿಕೆ ನೀಡಿವೆ.

ನಿಶ್ಚಿತ ಠೇವಣಿಗಳ ವಂಚನೆ ಪ್ರಕರಣಗಳು ನ್ಯಾಯಾಲಯದಲ್ಲಿ ಇರುವ ಕಾರಣ ಆ ಬಗ್ಗೆ ಯಾವುದೇ ಹೇಳಿಕೆ ನೀಡಲು ಸಾಧ್ಯವಿಲ್ಲ. ಆದರೆ, ಪರಿಹಾರ ಕುರಿತು ರಾಜ್ಯ ಸರ್ಕಾರದೊಂದಿಗೆ ಮಾತುಕತೆ ನಡೆಸಲು ಸಿದ್ಧರಿದ್ದೇವೆ ಎಂದು ಎರಡೂ ಬ್ಯಾಂಕ್‌ಗಳು ಪ್ರತ್ಯೇಕ ಪ್ರಕಟಣೆಗಳಲ್ಲಿ ತಿಳಿಸಿವೆ.

‘ತಮ್ಮಿಂದಲೇ ಆಗಿರುವ ವಂಚನೆ ಪ್ರಕರಣಗಳಲ್ಲಿ ಪರಿಹಾರ ನೀಡಲು ಈ ಬ್ಯಾಂಕ್‌ಗಳು ನಿರಾಕರಿಸುತ್ತಿವೆ. ಹೀಗಾಗಿ ಅವುಗಳೊಂದಿಗೆ ವ್ಯವಹಾರ ನಿಲ್ಲಿಸಿ ಎಂದು ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿ ಹೇಳಿದೆ’ ಎಂದು ಸರ್ಕಾರ ತನ್ನ ಆದೇಶದಲ್ಲಿ ಉಲ್ಲೇಖಿಸಿತ್ತು.

ನಮ್ಮ ಮೆಟ್ರೊ: ದಾಖಲೆ 9.17 ಲಕ್ಷ ಪ್ರಯಾಣಿಕರ ಸಂಚಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಮ್ಮ ಮೆಟ್ರೊದಲ್ಲಿ ಬುಧವಾರ 9.17 ಲಕ್ಷ ಪ್ರಯಾಣಿಕರು ಸಂಚರಿಸಿದ್ದು, ಇದು ಒಂದು ದಿನದ ಪ್ರಯಾಣಿಕರ ಸಂಖ್ಯೆಯಲ್ಲಿ ಸಾರ್ವಕಾಲಿಕ ದಾಖಲೆಯಾಗಿದೆ.

ಹಿಂದೆ ಆಗಸ್ಟ್ 6ರಂದು 8.26 ಲಕ್ಷ ಜನರು ಪ್ರಯಾಣಿಸಿದ್ದು ದಾಖಲೆಯಾಗಿತ್ತು. ಫಲಪುಷ್ಪ ಪ್ರದರ್ಶನ ವೀಕ್ಷಣೆಗೆ ತೆರಳುವವರು, ಭಾನುವಾರದವರೆಗೆ ಸಾಲು ಸಾಲು ರಜೆ ಇರುವುದರಿಂದ ಊರಿಗೆ, ಪ್ರವಾಸಕ್ಕೆ ಹೊರಟವರ ಸಂಖ್ಯೆ ಹೆಚ್ಚಿರುವುದು ಕೂಡ ಇದಕ್ಕೆ ಕಾರಣವಾಗಿದೆ.

ಬುಧವಾರ ನೇರಳೆ ಮಾರ್ಗದಲ್ಲಿ 4.43 ಲಕ್ಷ, ಹಸಿರು ಮಾರ್ಗದಲ್ಲಿ 3.01 ಲಕ್ಷ ಜನ ಪ್ರಯಾಣಿಸಿದ್ದರೆ, 1.72 ಲಕ್ಷ ಪ್ರಯಾಣಿಕರು ಇಂಟರ್‌ಚೇಂಜ್ ಮಾಡಿ ಎರಡೂ ಮಾರ್ಗಗಳಲ್ಲಿ ಸಂಚರಿಸಿದ್ದಾರೆ.

ವಾಹನದಟ್ಟಣೆ ಕಾರಣದಿಂದ ಹೆಚ್ಚಿನವರು ಮೆಟ್ರೊದಲ್ಲಿ ಸಂಚರಿಸಲು ಬಯಸುತ್ತಿದ್ದಾರೆ. ಮುಂದೆ ಹೆಚ್ಚಿನ ಜನರು ಮೆಟ್ರೊ ಅವಲಂಬಿತರಾಗಲಿದ್ದಾರೆ ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ತಿಳಿಸಿದ್ದಾರೆ.

ಹೆಚ್ಚುವರಿ ಕೋಚ್, ರೈಲುಗಳ ಸೇರ್ಪಡೆಗೆ ಕಾಯಬೇಕು ಇನ್ನೂ 10 ತಿಂಗಳು

ಮೆಟ್ರೊ ರೈಲು: ನಿತ್ಯ ನೂಕುನುಗ್ಗಲು

ಬಾಲಕೃಷ್ಣ ಪಿ.ಎಚ್.

ಬೆಂಗಳೂರು: ‘ನಮ್ಮ ಮೆಟ್ರೊ’ ನೇರಳೆ ಮತ್ತು ಹಸಿರು ಮಾರ್ಗದಲ್ಲಿ ಪ್ರಯಾಣಿಕರ ದಟ್ಟಣೆ ದಿನೇ ದಿನೇ ಏರುತ್ತಿದೆ. ಆದರೆ, ರೈಲುಗಳ ಸಂಖ್ಯೆಯಲ್ಲಿ ಹೆಚ್ಚಳ ಆಗದಿರುವುದರಿಂದ ನಿತ್ಯ ನೂಕುನುಗ್ಗಲು ಏರ್ಪಟ್ಟಿದೆ. ಹೆಚ್ಚುವರಿ ರೈಲುಗಳ ಸೇರ್ಪಡೆಗೆ ಇನ್ನೂ 10 ತಿಂಗಳು ಕಾಯಬೇಕಿದೆ.

‘ನಮ್ಮ ಮೆಟ್ರೊ’ದಲ್ಲಿ ಆರಂಭದಲ್ಲಿ ತಿಂಗಳಿಗೆ 5 ಲಕ್ಷ ಜನ ಪ್ರಯಾಣಿಸುತ್ತಿದ್ದರು. 2020ರ ಹೊತ್ತಿಗೆ ನಿತ್ಯ ಪ್ರಯಾಣಿಕರ ಸಂಖ್ಯೆ ಸರಾಸರಿ 1.28 ಲಕ್ಷಕ್ಕೆ ಏರಿತ್ತು. 2022ರಲ್ಲಿ ಸರಾಸರಿ 4.32 ಲಕ್ಷ, 2023ರಲ್ಲಿ ಸರಾಸರಿ 6.04 ಲಕ್ಷಕ್ಕೆ ಏರಿತ್ತು. ವಾಹನದಟ್ಟಣೆ ಹೆಚ್ಚಿದಂತೆ ಪ್ರಯಾಣಕ್ಕೆ ಮೆಟ್ರೊ ರೈಲು ಸೇವೆ ಅವಲಂಬಿಸುವವರ ಸಂಖ್ಯೆಯೂ ಹೆಚ್ಚುತ್ತಿದೆ. ಕಳೆದ ಎರಡು ವರ್ಷಗಳಿಂದ ಪ್ರಯಾಣಿಕರ ಸಂಖ್ಯೆಯಲ್ಲಿನ ಹೆಚ್ಚಳಕ್ಕೆ ಅನುಗುಣವಾಗಿ ಮೆಟ್ರೊ ರೈಲುಗಳ ಸಂಖ್ಯೆ ಜಾಸ್ತಿಯಾಗಿಲ್ಲ.

‘ಜನದಟ್ಟಣೆ ಆಧರಿಸಿ ಬೆಳಿಗ್ಗೆ, ಸಂಜೆ ಮೆಜೆಸ್ಟಿಕ್‌ನಿಂದ ವೈಟ್‌ಫೀಲ್ಡ್ ಕಡೆಗೆ ಮೆಟ್ರೊ ರೈಲುಗಳ ಸಂಖ್ಯೆ ಹೆಚ್ಚಿಸಿದ್ದಾರೆ. ಮೈಸೂರು ರಸ್ತೆಯಿಂದ ಪ್ರಯಾಣಿಸುವವರಿಗೆ ಇದರ ಪ್ರಯೋಜನವಾಗಿಲ್ಲ.


ಮೆಜೆಸ್ಟಿಕ್‌ನ ನಾಡಪ್ರಭು ಕೆಂಪೇಗೌಡ ಮೆಟ್ರೊ ನಿಲ್ದಾಣದಲ್ಲಿ ಜನಸಂದಣಿ

ಒಂದು ಮೆಟ್ರೊ ತಪ್ಪಿದರೆ ಇನ್ನೊಂದಕ್ಕೆ 10 ನಿಮಿಷ ಕಾಯಬೇಕು. ಪ್ರಯಾಣಿಕರ ದಟ್ಟಣೆ ಆಧರಿಸಿ ಚಲ್ಲಘಟ್ಟ ಕಡೆಗೂ 4–5 ನಿಮಿಷಕ್ಕೊಂದು ಮೆಟ್ರೊ ರೈಲು ಸೇವೆ ಕಲ್ಪಿಸಬೇಕು’ ಎಂದು ಪ್ರಯಾಣಿಕರಾದ ವಾಣಿ ಅವಿನಾಶ್ ಆಗ್ರಹಿಸುತ್ತಾರೆ.

‘ನೇರಳೆ ಮಾರ್ಗವು ವೈಟ್‌ಫೀಲ್ಡ್‌ವರೆಗೆ ವಿಸ್ತರಣೆಯಾದ ಮೇಲೆ ಪ್ರಯಾಣಿಕರ ಸಂಖ್ಯೆ ಏರಿದೆ. ಬುಧವಾರದಂದು ಹತ್ತಲೂ ಜಾಗವಿಲ್ಲದೇ ಎರಡು ರೈಲು ಸಾಗುವವರೆಗೆ ಕಾಯಬೇಕಾಯಿತು. ಮೂರನೇ ಮೆಟ್ರೊಗೆ ಹೇಗೋ ಹತ್ತಿಕೊಂಡೆ’ ಎಂದು ಖಾಸಗಿ ಕಂಪನಿಯ ಉದ್ಯೋಗಿಯೊಬ್ಬರು ಪ್ರತಿಕ್ರಿಯಿಸಿದರು.

‘ಕಡಿಮೆ ರೈಲಿನಲ್ಲಿ ಹೆಚ್ಚು ಜನರನ್ನು ಒಯ್ಯುವ ಮೂಲಕ ಅಧಿಕ ಲಾಭ ಮಾಡುವ ಉದ್ದೇಶ ಬಿಎಂಆರ್‌ಸಿಎಲ್‌ಗೆ ಇದೆಯೋ ಏನೋ ಗೊತ್ತಿಲ್ಲ. ಅಂಥ ಉದ್ದೇಶವಿದ್ದರೆ ಅದನ್ನು ಕೈಬಿಟ್ಟು ಪ್ರಯಾಣಿಕರ ಹಿತಕ್ಕಾಗಿ ರೈಲುಗಳ ಸಂಖ್ಯೆ ಹೆಚ್ಚಿಸಬೇಕು’ ಎಂದು ಆಗ್ರಹಿಸಿದರು.

ಕೋಚ್‌ಗಳನ್ನು ಪೂರೈಸುವ ಗುತ್ತಿಗೆಯನ್ನು ಚೀನಾ ರೈಲ್ವೆ ರೋಲಿಂಗ್ ಸ್ಟಾಕ್ ಕಾರ್ಪೊರೇಷನ್ (ಸಿಆರ್‌ಆರ್‌ಸಿ) ಪಡೆದಿದ್ದು, ಕೋಚ್‌ಗಳನ್ನು ಪೂರೈಸುತ್ತಿತ್ತು. ಆ ನಂತರ ಭಾರತದಲ್ಲಿಯೇ ಕೋಚ್ ತಯಾರಿಸಲು ಹೈದರಾಬಾದ್‌ನಲ್ಲಿ ಜಮೀನು ನೀಡಲು ಸಂಸ್ಥೆ ಕೋರಿತ್ತು. ಜಮೀನು ಒದಗಿಸಲು ಭಾರತ ಸರ್ಕಾರ ಹಿಂದೇಟು ಹಾಕಿತ್ತು. ಆನಂತರ ಕೋಚ್ ತಯಾರಿಸಲು ಕೋಲ್ಕತದ ಟಿಟಾಗರ್ ರೈಲ್ವೆ ಸಿಸ್ಟಂ ಲಿಮಿಟೆಡ್‌ಗೆ (ಟಿಆರ್‌ಎಸ್‌ಎಲ್) ಸಿಆರ್‌ಆರ್‌ಸಿ ಉಪ ಗುತ್ತಿಗೆ ನೀಡಿತ್ತು. ಈಗ ಟಿಟಾಗರ್‌ನಲ್ಲಿ ಕೋಚ್‌ಗಳು ತಯಾರಾಗುತ್ತಿವೆ. ಈ ಎಲ್ಲ ಪ್ರಕ್ರಿಯೆಗಳಿಂದಾಗಿ ಕೋಚ್‌ಗಳು ಪೂರೈಕೆ ಆಗುವುದು ಎರಡು ವರ್ಷ ತಡವಾಗಿದೆ ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ತಿಳಿಸಿದ್ದಾರೆ.

ಜೂನ್‌ಗೆ ಹೊಸ ಕೋಚ್ ಲಭ್ಯ: ಮಹೇಶ್ವರ ರಾವ್

‘ನಮ್ಮ ಮೆಟ್ರೊ’ ಕೋಚ್‌ಗಳ (ರೈಲು) ಪೂರೈಕೆಗೆ ಹಿಂದೆಯೇ ಆದೇಶ ನೀಡಲಾಗಿದೆ. 21 ಕೋಚ್‌ಗಳು ಪೂರೈಕೆಯಾಗಲಿವೆ. 2025ರ ಜೂನ್ ಒಳಗೆ 10 ಕೋಚ್‌ಗಳು ಬರಲಿವೆ’ ಎಂದು ಬಿಎಂಆರ್‌ಸಿಎಲ್ ವ್ಯವಸ್ಥಾಪಕ ನಿರ್ದೇಶಕ ಎಂ. ಮಹೇಶ್ವರ ರಾವ್ ತಿಳಿಸಿದರು.

ಡಿಸೆಂಬರ್‌ನಲ್ಲಿ ಆರ್.ವಿ. ರಸ್ತೆ–ಬೊಮ್ಮಸಂದ್ರ ಹಳದಿ ಮಾರ್ಗದಲ್ಲಿ ರೈಲು ಸಂಚಾರ ಆರಂಭಗೊಳ್ಳಲಿದ್ದು, ಅದಕ್ಕಾಗಿ ಡಿಸೆಂಬರ್ ಒಳಗೆ ಎಂಟು ಕೋಚ್‌ಪೂರೈಕೆ ಆಗಲಿದೆ. ಬಳಿಕ ಆರು ಕೋಚ್‌ಗಳು ಪೂರೈಕೆಯಾಗಲಿವೆ ಎಂದು ಮಾಹಿತಿ ನೀಡಿದರು.

ಕಾಳೇನ ಅಗ್ರಹಾರ–ನಾಗವಾರ ಮಧ್ಯೆ ಗುಲಾಬಿ ಮಾರ್ಗ 2025ರಲ್ಲಿ ಹಾಗೂ ಸೆಂಟ್ರಲ್ ಸಿಲ್ಕ್ ಬೋರ್ಡ್–ದೇವನಹಳ್ಳಿಯ ಅಂತರರಾಷ್ಟ್ರೀಯ ವಿಮಾನ ನಿಲ್ದಾಣವನ್ನು ಸಂಪರ್ಕಿಸುವ ನೀಲಿ ಮಾರ್ಗದಲ್ಲಿ ರೈಲು ಸಂಚಾರ 2026ರಲ್ಲಿ ಆರಂಭಗೊಳ್ಳಲಿದೆ ಎಂದು ಅವರು ಹೇಳಿದರು.

ನೇರಳೆ ಮಾರ್ಗ		ಹಸಿರು ಮಾರ್ಗ
32	ಮಾರ್ಗದಲ್ಲಿ ಸಂಚರಿಸುತ್ತಿರುವ ರೈಲುಗಳು	22
172	ಮಾರ್ಗದಲ್ಲಿ ಪ್ರತಿದಿನದ ಟ್ರಿಪ್‌ಗಳು	160
2	ತುರ್ತು ಸಂದರ್ಭದಲ್ಲಿ ಬಳಕೆಗೆ ಕಾಯ್ದಿರಿಸಿದ ರೈಲುಗಳು	1
12	ಮಾರ್ಗಕ್ಕೆ ಇನ್ನೂ ಬೇಕಿರುವ ರೈಲುಗಳು	9

‘ಎಕ್ಸ್’ನಲ್ಲಿ ಸಚಿವ ಕೃಷ್ಣಬೈರೇಗೌಡ ಪೋಸ್ಟ್ • ಸಾರ್ವಜನಿಕರ ಆಕ್ಷೇಪ

‘ರಸ್ತೆ ರಿಪೇರಿ ಮಾಡಿ, ಸಮಸ್ಯೆ ಪರಿಹರಿಸಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಂದಾಯ ಸಚಿವರೂ ಆಗಿರುವ ಬ್ಯಾಟರಾಯನಪುರ ಕ್ಷೇತ್ರದ ಶಾಸಕ ಕೃಷ್ಣ ಬೈರೇಗೌಡ ಅವರು ವೀರಣ್ಣನಪಾಳ್ಯದ ಬಳಿಯ ರಸ್ತೆ ಗುಂಡಿ ಮುಚ್ಚುವಂತೆ ಬಿಬಿಎಂಪಿ ಹಾಗೂ ಬಿಎಂಆರ್‌ಸಿಎಲ್ ಅಧಿಕಾರಿಗಳಿಗೆ ತಮ್ಮ ‘ಎಕ್ಸ್’ ಖಾತೆಯಲ್ಲಿ ಮನವಿ ಮಾಡಿಕೊಂಡಿದ್ದಾರೆ

ಸಾರ್ವಜನಿಕರೊಬ್ಬರು ಕಳುಹಿಸಿದ್ದ ವಿಡಿಯೊ ತುಣುಕನ್ನು ‘ಎಕ್ಸ್’ ಖಾತೆಯಲ್ಲಿ ಹಂಚಿಕೊಂಡಿದ್ದ ಸಚಿವರು, ‘ಬಿಬಿಎಂಪಿ ಆಯುಕ್ತರಾಗಲೀ ಅಥವಾ ಬಿಎಂಆರ್‌ಸಿಎಲ್ ವ್ಯವಸ್ಥಾಪಕ ನಿರ್ದೇಶಕರಾಗಲೀ ದಯವಿಟ್ಟು ಗುಂಡಿಯನ್ನು ಮುಚ್ಚಿ ರಸ್ತೆ ರಿಪೇರಿ ಮಾಡಿ’ ಎಂದು ಮನವಿ ಮಾಡಿದ್ದಾರೆ.

ಸಚಿವರೇ ಮನವಿ ಮಾಡಿಕೊಂಡಿರುವುದಕ್ಕೆ ಸಾರ್ವಜನಿಕರಿಂದ ತೀವ್ರ ಆಕ್ಷೇಪ ವ್ಯಕ್ತವಾಗಿದೆ.

ಸಚಿವರು ಬುಧವಾರ ರಾತ್ರಿ 8.20ರಲ್ಲಿ ವಿಡಿಯೊ ಪೋಸ್ಟ್ ಮಾಡಿದ್ದು, ‘ಇದನ್ನು ಸಾರ್ವಜನಿಕರು ನನಗೆ ಕಳುಹಿಸಿದ್ದಾರೆ. ಸರಿಪಡಿಸಿ, ಸಮಸ್ಯೆಯನ್ನು ಪರಿಹರಿಸಿ’ ಎಂದು ಕೋರಿದ್ದರು.

ಕೆಲವೇ ಗಂಟೆಗಳಲ್ಲಿ ಈ ಸಂದೇಶಕ್ಕೆ ನೂರಕ್ಕೂ ಹೆಚ್ಚು ಮಂದಿ ಪ್ರತಿಕ್ರಿಯೆ ನೀಡಿದ್ದು, ಅಧಿಕಾರಿಗಳನ್ನು ಬೇಡಿಕೊಳ್ಳುವಷ್ಟು ಸಚಿವರು ಅಸಹಾಯಕರಾಗಿದ್ದಾರೆ ಎಂದು ಲೇವಡಿ ಮಾಡಿದ್ದಾರೆ.



ಸಚಿವ ಕೃಷ್ಣ ಬೈರೇಗೌಡ ಅವರ ‘ಎಕ್ಸ್’ಪೋಸ್ಟ್‌ನ ಸ್ಕ್ರೀನ್‌ಶಾಟ್

ಕಾರ್ತಿಕ್ ಎಂಬುವವರು, ‘ಇದು ಬಿಬಿಎಂಪಿ ಅಥವಾ ಬಿಎಂಆರ್‌ಸಿಎಲ್ ಜವಾಬ್ದಾರಿ ಆಗಿದ್ದರೂ, ಸಚಿವರಾಗಿ ನಿಮಗೆ ಯಾವುದೇ ಅಧಿಕಾರ ವಿಲ್ಲವೇ? ಪರಿಶೀಲಿಸಲು ಸಾಧ್ಯವಿಲ್ಲವೇ? ಒಬ್ಬ ಪ್ರಜೆ ಈ ರೀತಿ ಪೋಸ್ಟ್ ಮಾಡಿದರೆ ಒಪ್ಪಬಹುದು. ಸಚಿವರೇ ಹೀಗೆ ಮಾಡುವುದು ನಗೆಪಾಟಲು’ ಎಂದಿದ್ದಾರೆ.

‘ಸಚಿವರಾಗಿದ್ದರೂ ಅಸಹಾಯಕತೆಯಿಂದ ಗುಂಡಿ ಮುಚ್ಚಿ ಎಂದು ಅಂಗಲಾಚುವ ದೈನೇಸಿ ಸ್ಥಿತಿ ಬಂದಿರುವುದು ಕಾಂಗ್ರೆಸ್‌ನ ದುರವಸ್ಥೆ, ದುರಾಡಳಿತಕ್ಕೆ ಸಾಕ್ಷಿ. ಗುಂಡಿ ಮುಚ್ಚಿ ಎಂದು ನೇರವಾಗಿ ಹೇಳಲು ಹಣ ಇಲ್ಲ. ಅದಕ್ಕೆ ‘ಎಕ್ಸ್’ನಲ್ಲಿ ಅಂಗಲಾಚುತ್ತಿದ್ದಾರೆ’ ಎಂದು ಸಮವ್ ಲೇವಡಿ ಮಾಡಿದ್ದಾರೆ.

‘ಸಚಿವರು ತಮ್ಮದೇ ಸರ್ಕಾರದ ಅಧಿಕಾರಿಗಳನ್ನು ಇಷ್ಟರಮಟ್ಟಿಗೆ ಬೇಡಿಕೊಳ್ಳಬೇಕು ಎಂದರೆ, ಇನ್ನು ಸಾಮಾನ್ಯ ಜನರನ್ನು ಅಧಿಕಾರಿಗಳು ಹೇಗೆ ನಡೆಸಿಕೊಳ್ಳುತ್ತಾರೆ ಎಂಬುದು ಗೊತ್ತಾಗುತ್ತದೆ’ ಎಂದು ಚೇತನ್ ವಾಲಿ ಎಂಬವರು ಪ್ರತಿಕ್ರಿಯಿಸಿದ್ದಾರೆ.

ಮಹಿಳೆಯ ಖಾತೆಗೆ ಪೋಸ್ಟ್ ಟ್ಯಾಗ್!

ಸಚಿವರು ತಮ್ಮ ಪೋಸ್ಟ್ ಅನ್ನು ‘@bbmpcommr’ ಅಥವಾ ‘@BMRCL’ ಹ್ಯಾಂಡಲ್‌ಗಳಿಗೆ ಟ್ಯಾಗ್ ಮಾಡಿದ್ದರು. ಇದರಲ್ಲಿ ಬಿಬಿಎಂಪಿ ಆಯುಕ್ತರ ಹೆಸರಿನ ಹ್ಯಾಂಡಲ್ ಮಾತ್ರ ಅಧಿಕೃತವಾದುದು. ‘@BMRCL’ ಹ್ಯಾಂಡಲ್ ಮಹಿಳೆಯೊಬ್ಬರ ವೈಯಕ್ತಿಕ ಖಾತೆಗೆ ಸಂಬಂಧಿಸಿದ್ದಾಗಿದೆ. ಈ ಖಾತೆಯಲ್ಲಿ ಈಚಿನ ವರ್ಷಗಳಲ್ಲಿ ನಿಷ್ಕ್ರಿಯವಾಗಿತ್ತು. ತಪ್ಪಾದ ಹ್ಯಾಂಡಲ್‌ಗೆ ಟ್ಯಾಗ್ ಮಾಡಿದ್ದರ ಬಗ್ಗೆಯೂ ಸಾರ್ವಜನಿಕರು ಲೇವಡಿ ಮಾಡಿದ್ದಾರೆ.

ಸಚಿವರು ಟ್ವೀಟ್‌ಗೆ ಬಿಬಿಎಂಪಿ ಆಯುಕ್ತರ ಖಾತೆ ಅಥವಾ ಬಿಎಂಆರ್‌ಸಿಎಲ್ ಖಾತೆಯಿಂದ ಯಾವುದೇ ಪ್ರತಿಕ್ರಿಯೆ ಬಂದಿಲ್ಲ. ಇದನ್ನೂ ಗಮನಿಸಿರುವ ಸಾರ್ವಜನಿಕರು, ‘ಈ ಪೋಸ್ಟ್‌ಗೆ ಈವರೆಗೆ ಸಂಬಂಧಿತರ ಪ್ರತಿಕ್ರಿಯೆ ಬಂದಂತೆ ಕಾಣುತ್ತಿಲ್ಲ. ಸಚಿವರ ಸಮಯ ವ್ಯರ್ಥ ಅಷ್ಟೆ’ ಎಂದಿದ್ದಾರೆ.

‘ಸರ್ಕಾರದ ದರಿದ್ರ ಸ್ಥಿತಿ ಬಹಿರಂಗ’

‘ನಗರದ ರಸ್ತೆ ಗುಂಡಿಗಳನ್ನು ಮುಚ್ಚುವಂತೆ ಕಂದಾಯ ಸಚಿವ ಕೃಷ್ಣ ಬೈರೇಗೌಡ ಅವರು ಅತ್ಯಂತ ಅಸಹಾಯಕರಾಗಿ ಬಿಬಿಎಂಪಿ ಮತ್ತು ಬಿಎಂಆರ್‌ಸಿಎಲ್ ಅಧಿಕಾರಿಗಳಿಗೆ ಸಾಮಾಜಿಕ ಜಾಲತಾಣದಲ್ಲಿ ಬೇಡಿಕೊಂಡಿದ್ದಾರೆ. ಅವರ ಪೋಸ್ಟ್ ನೋಡಿದರೆ ಕಾಂಗ್ರೆಸ್ ಸರ್ಕಾರದ ದರಿದ್ರ ಸ್ಥಿತಿ ನೆನೆದು ಮರುಕವಾಗುತ್ತದೆ’ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ ಹೇಳಿದ್ದಾರೆ.

ಈ ಕುರಿತು ‘ಎಕ್ಸ್’ನಲ್ಲಿ ಹೇಳಿಕೆ ಬಿಡುಗಡೆ ಮಾಡಿರುವ ಅವರು, ‘ಆದೇಶ ಮಾಡಿ ಕೆಲಸ ಮಾಡಿಸಬೇಕಾದರೇ ಇಷ್ಟೊಂದು ಅಸಹಾಯಕರಾಗಿ ಅಂಗಲಾಚುತ್ತಿದ್ದೀರಲ್ಲ, ಬೆಂಗಳೂರು ಅಭಿವೃದ್ಧಿ ಸಚಿವರು ತಮ್ಮ ಕೆಲಸ ಮಾಡುತ್ತಿಲ್ಲ ಎಂದು ಪರೋಕ್ಷವಾಗಿ ಟಾಂಗ್ ಕೊಡುತ್ತಿದ್ದೀರಾ ಅಥವಾ ಇದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ವಿರುದ್ಧ ಬಹಿರಂಗ ಬಂಡಾಯದ ಮುನ್ಸೂಚನೆಯೆ’ ಎಂದು ಪ್ರಶ್ನಿಸಿದ್ದಾರೆ.

ಪ್ರತಿಭಟನೆ: ಬಿಜೆಪಿಯ 28 ಮಂದಿ ವಿರುದ್ಧ ಎಫ್‌ಐಆರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅನುಮತಿಯಿಲ್ಲದೇ ಪ್ರತಿಭಟಿಸಿದ ಆರೋಪದಡಿ ಸಂಸದ ಬಸವರಾಜ ಬೊಮ್ಮಾಯಿ, ವಿಧಾನ ಸಭೆ ವಿರೋಧಪಕ್ಷದ ನಾಯಕ ಆರ್. ಅಶೋಕ ಸೇರಿ ಬಿಜೆಪಿಯ 28 ಮುಖಂಡರ ವಿರುದ್ಧ ಹೈಗ್ರೌಂಡ್ಸ್ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಿಸಲಾಗಿದೆ.

ಕಾಂಗ್ರೆಸ್ ನೇತೃತ್ವದ ಸರ್ಕಾರ ಜನ ವಿರೋಧಿಯಾಗಿದೆ ಎಂದು ಆರೋಪಿಸಿ 2023ರ ಜೂ. 20ರಂದು, ರೇಸ್‌ಕೋರ್ಸ್ ರಸ್ತೆ ಮೌರ್ಯ ವೃತ್ತದಲ್ಲಿ ಬಸವರಾಜ ಬೊಮ್ಮಾಯಿ ನೇತೃತ್ವದಲ್ಲಿ ಬಿಜೆಪಿ ಪ್ರತಿಭಟನೆ ನಡೆಸಿತ್ತು.

ವಿಧಾನ ಪರಿಷತ್‌ನಲ್ಲಿ ವಿರೋಧ ಪಕ್ಷದ ಮುಖ್ಯ ಸಚೇತಕ ಎನ್.ರವಿ ಕುಮಾರ್, ಸಂಸದ ಪಿ.ಸಿ. ಮೋಹನ್, ಶಾಸಕರಾದ ಎಂ.ಕೃಷ್ಣಪ್ಪ, ಮುನಿರಾಜು, ಮೇಲ್ಮನೆಯ ಪ್ರತಿಪಕ್ಷದ ನಾಯಕ ಚಲವಾದಿ ನಾರಾಯಣಸ್ವಾಮಿ ಸೇರಿ 28 ಮುಖಂಡರ ಹೆಸರನ್ನು ಎಫ್‌ಐಆರ್‌ನಲ್ಲಿ ಉಲ್ಲೇಖಿಸಲಾಗಿದೆ.

‘ಅನುಮತಿಯಿಲ್ಲದೇ ಪ್ರತಿಭಟಿಸುವವರ ವಿರುದ್ಧ ಕ್ರಮ ಕೋರಿ ವಸಂತ ನಗರದ ನಿವಾಸಿ ಅನಿಲ್ ಕುಮಾರ್ ಮುಳ್ಳೂರ, ನಗರದ 42ನೇ ಎಸಿಎಂಎಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು. ಕೋರ್ಟ್ ನಿರ್ದೇಶನದಂತೆ ಎಫ್‌ಐಆರ್ ದಾಖಲಿಸಿದೆ’ ಎಂದು ಪೊಲೀಸರು ತಿಳಿಸಿದ್ದಾರೆ.

ಎಲೆಕ್ಟ್ರಾನಿಕ್ ವಸ್ತು ಖರೀದಿಸಿ ₹1.45 ಕೋಟಿ ವಂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲ್ಯಾಪ್ಟೆಕ್ ಟ್ರೇಡರ್ಸ್ ಎಫ್‌ಜೆಡ್ ಕಂಪನಿಯಿಂದ ₹1.45 ಕೋಟಿ ಮೌಲ್ಯದ ಎಲೆಕ್ಟ್ರಾನಿಕ್ ವಸ್ತುಗಳನ್ನು ಖರೀದಿಸಿ, ಹಣ ನೀಡದೇ ವಂಚಿಸಲಾಗಿದೆ.

ಕಂಪನಿಯ ಅಶ್ವಿನಿ ರೈ ಅವರು ಎಂಬುವವರು ಸೈಬರೋನಿಕ್ ಕಂಪನಿಯ ಕೇರಳ ಮೂಲದ ಕಿರಣ್ ಸೆಲ್ವೋನ್ ಎನ್ನುವವರ ವಿರುದ್ಧ ಸಿಸಿಬಿ ಠಾಣೆ ಪೊಲೀಸರಿಗೆ ದೂರು ನೀಡಿದ್ದಾರೆ.

‘ಆರೋಪಿ ಕಿರಣ್ ಕಂಪನಿಗೆ ಬಂದು ದುಬೈನ ಮ್ಯಾಕ್ಸ್‌ಕ್ಲೋವ್ ಟೆಕ್ನಾಲಜೀಸ್ ಎಲ್‌ಎಲ್‌ಸಿ ಎಂಬ ಕಂಪನಿಗೆ ಎಲೆಕ್ಟ್ರಾನಿಕ್ ವಸ್ತುಗಳನ್ನು ಪೂರೈಸಲು ದರಪಟ್ಟಿ (ಕೊಟೇಷನ್) ನೀಡಿದ್ದರು. ದುಬೈನಲ್ಲಿರುವ ನಮ್ಮ ಕಂಪನಿಯ ಶಾಖೆಯ ಸಿಬ್ಬಂದಿ ಮ್ಯಾಕ್ಸ್‌ಕ್ಲೋವ್ ಕಂಪನಿಯ ಬಗ್ಗೆ ವಿಚಾರಣೆ ನಡೆಸಿದ್ದರು’ ಎಂದು ಪೊಲೀಸರಿಗೆ ನೀಡಿರುವ ದೂರಿನಲ್ಲಿ ತಿಳಿಸಿದ್ದಾರೆ.

‘ಆರೋಪಿ ಕಿರಣ್‌ನಿಂದ ಐದು ಖರೀದಿ ಆದೇಶ (ಪರ್ಚೇಸಿಂಗ್ ಆರ್ಡರ್) ಪಡೆದು ದುಬೈನ ಲ್ಯಾಪ್ಟೆಕ್ ಟ್ರೇಡರ್ಸ್ ಎಫ್‌ಜೆಡ್ ಶಾಖೆ ಹಾಗೂ ಎಲೆಕ್ಟ್ರಾನಿಕ್ ಬಜಾರ್ ಎಫ್‌ಜೆಡ್ ಕಂಪನಿಗಳ ಮೂಲಕ ₹1.45 ಕೋಟಿ ಮೌಲ್ಯದ ವಸ್ತುಗಳನ್ನು ಆರೋಪಿ ಸೂಚಿಸಿದ ಕಂಪನಿಗೆ ಪೂರೈಸಲಾಗಿತ್ತು. ಆರೋಪಿ ನೀಡಿದ್ದ ₹1.45 ಕೋಟಿ ಮೊತ್ತದ ಚೆಕ್ ತಿರಸ್ಕೃತಗೊಂಡಿವೆ’ ಎಂಬ ದೂರಿನಲ್ಲಿ ತಿಳಿಸಿದ್ದಾರೆ.

‘ಈ ಬಗ್ಗೆ ವಿಚಾರಿಸಲು ಆರೋಪಿ ಕಿರಣ್ ಸಂಪರ್ಕಿಸಲು ಪ್ರಯತ್ನಿಸಿದಾಗ ಮೊಬೈಲ್ ಸ್ವಿಚ್ ಆಫ್ ಮಾಡಿಕೊಂಡಿರುತ್ತಾನೆ. ದುಬೈನಲ್ಲಿರುವ ಅವರ ಕಂಪನಿಯ ಉಗ್ರಾಣಕ್ಕೆ ಭೇಟಿ ನೀಡಿದರೆ, ಅಲ್ಲಿಂದ ಎಲ್ಲ ವಸ್ತುಗಳನ್ನು ತೆಗೆದುಕೊಂಡು ಹೋಗಿರುವುದು ತಿಳಿದು ಬಂದಿದೆ. ಅಲ್ಲಿನ ಸಿಬ್ಬಂದಿ ಕೂಡಾ ಕಿರಣ್‌ನಿಂದ ನಾವು ವಂಚನೆ ಒಳಗಾಗಿದ್ದೇವೆ ಎಂದಿದ್ದಾರೆ’ ಎಂದು ಅಶ್ವಿನಿ ರೈ ಉಲ್ಲೇಖಿಸಿದ್ದಾರೆ.

‘ಹನಿಟ್ರ್ಯಾಪ್’ ಮೂವರ ಬಂಧನ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ಸಾಮಾಜಿಕ ಜಾಲತಾಣದಲ್ಲಿ ಯುವಕರನ್ನು ಪರಿಚಯಿಸಿಕೊಂಡು ಹನಿಟ್ರ್ಯಾಪ್ ಮಾಡುತ್ತಿದ್ದ ಮಹಿಳೆ ಸೇರಿ ಮೂವರನ್ನು ಸಂಪಿಗೆಹಳ್ಳಿ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ಅಗ್ರಹಾರ ಲೇಔಟ್‌ನ ನಿವಾಸಿ ನಜ್ಮಾ ಕೌಸರ್ (30), ಹೆಗಡೆನಗರದ ನಿವಾಸಿಗಳಾದ ಮೊಹ್ಮದ್ ಅತೀಕ್ (20), ಕರೀಂ ಉಲ್ಲಾ (24) ಬಂಧಿತರು.


ನಜ್ಮಾ ಕೌಸರ್


ಅತೀಕ್


ಕರೀಂ ಉಲ್ಲಾ

‘ಪ್ರಮುಖ ಆರೋಪಿ ನಜ್ಮಾ, ಜಾಲತಾಣಗಳಲ್ಲಿ ಯುವಕರ ಜೊತೆ ಸಲುಗೆ ಬೆಳೆಸಿಕೊಳ್ಳುತ್ತಿದ್ದಳು. ನಂತರ ಅವರ ಮೊಬೈಲ್ ಸಂಖ್ಯೆ ಪಡೆದು, ಸಲುಗೆಯಿಂದ ಮಾತನಾಡಿ, ಮನೆಗೆ ಕರೆಸಿಕೊಂಡು ಹನಿಟ್ರ್ಯಾಪ್ ಮಾಡುತ್ತಿದ್ದಳು. ಇದಕ್ಕೆ ಅತೀಕ್, ಕರೀಂ ಸಾಥ ನೀಡುತ್ತಿದ್ದರು’ ಎಂದು ಪೊಲೀಸರು ತಿಳಿಸಿದರು.

‘ಬೆಂಗಳೂರಿನ ಯುವಕರನ್ನೇ ಗುರಿಯಾಗಿಸಿಕೊಂಡಿದ್ದ ನಜ್ಮಾ, ನಂತರ ಅವರೊಂದಿಗೆ ಕಷ್ಟ-ಸುಖ ಮಾತನಾಡಿಕೊಂಡು ಆತ್ಮೀಯತೆ ಬೆಳೆಸಿಕೊಳ್ಳುತ್ತಿದ್ದಳು. ಅವರಿಂದ ಹಣ ಪಡೆದು ಹಿಂತಿರುಗಿಸುವ ಮೂಲಕ ವಿಶ್ವಾಸ ಗಳಿಸುತ್ತಿದ್ದಳು. ‘ನಮ್ಮ ಮನೆಯಲ್ಲಿ ಯಾರೂ ಇಲ್ಲ, ಮನೆಗೆ ಬನ್ನಿ’ ಎಂದು ಯುವಕರನ್ನು ಆಹ್ವಾನಿಸುತ್ತಿದ್ದಳು’ ಎಂದು ಮೂಲಗಳು ತಿಳಿಸಿವೆ.

‘ಸಂಚು ತಿಳಿಯದೇ ಮನೆಗೆ ತೆರಳುತ್ತಿದ್ದ ಯುವಕರನ್ನು ಲೈಂಗಿಕವಾಗಿ ಪ್ರಚೋದಿಸಿ ಕೋಣೆಗೆ ಕರೆದೊಯ್ಯುತ್ತಿದ್ದಳು. ಕೋಣೆಯಲ್ಲಿ ಇರುತ್ತಿದ್ದ ಉಳಿದ ಆರೋಪಿಗಳು ಯುವಕರನ್ನು ಬೆದರಿಸಿ, ಹಣ ಸುಲಿಗೆ ಮಾಡುತ್ತಿದ್ದರು. ಹಣ ನೀಡದಿದ್ದರೆ ಅತ್ಯಾಚಾರ ಮಾಡಿದ್ದಾರೆಂದು ಪೊಲೀಸರಿಗೆ ದೂರು ನೀಡುವುದಾಗಿ ಬೆದರಿಸುತ್ತಿದ್ದರು’ ಎಂದು ಪೊಲೀಸರು ತಿಳಿಸಿದ್ದಾರೆ.

ಬಿಡಿಎ ಆಯುಕ್ತರಿಗೆ ಬೆದರಿಕೆ: ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅರ್ಕಾವತಿ ಬಡಾವಣೆಗೆ ಸಂಬಂಧಿಸಿದ ಕಡತಗಳಿಗೆ ಸಹಿ ಹಾಕುವಂತೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ಆಯುಕ್ತ ಎನ್. ಜಯರಾಂ ಅವರಿಗೆ ಬೆದರಿಕೆ ಹಾಕಿದ ಆರೋಪದಡಿ ಶಿವಕುಮಾರ್ ಎಂಬುವವರನ್ನು ಶೇಷಾದ್ರಿಪುರ ಠಾಣೆ ಪೊಲೀಸರು ಬಂಧಿಸಿದ್ದಾರೆ.

‘ಎಂಟು ತಿಂಗಳಿಂದ ಬಿಡಿಎ ಕೇಂದ್ರ ಕಚೇರಿಯಲ್ಲಿ ಆಯುಕ್ತನಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ಆಗಸ್ಟ್ 8ರಂದು ರಾತ್ರಿ 12 ಗಂಟೆಗೆ ಶಿವಕುಮಾರ್ ಎಂಬ ವ್ಯಕ್ತಿ ಕರೆ ಮಾಡಿದ್ದರು. ನಾನು ಕರೆ ಸ್ವೀಕರಿಸಲಿಲ್ಲ. ಆರೋಪಿ ವ್ಯಾಟ್ಸ್‌ಆ್ಯಪ್‌ನಲ್ಲಿ ಅವಾಚ್ಯ ಶಬ್ದಗಳಿಂದ ನಿಂದಿಸಿದ್ದಾನೆ. ಬಿಡಿಎ ಕಚೇರಿಯಲ್ಲಿ ಬಾಕಿ ಇರುವ ನನ್ನ ಎಲ್ಲ ಕಡತಗಳನ್ನು ಪರಿಶೀಲಿಸಿ ವಿಲೇವಾರಿ ಮಾಡಿಕೊಡಬೇಕು ಎಂದು ಬೆದರಿಕೆ ಹಾಕಿದ್ದಾನೆ ಎಂದು ಜಯರಾಂ ದೂರು ನೀಡಿದ್ದರು’ ಎಂದು ಪೊಲೀಸರು ತಿಳಿಸಿದರು.

‘ಆರೋಪಿ ಶಿವಕುಮಾರ್ ಬಿಡಿಎ ಕಚೇರಿಗೆ ತೆರಳಿ ಅಲ್ಲಿನ ಸಿಬ್ಬಂದಿಗೂ ಅವಾಚ್ಯವಾಗಿ ನಿಂದಿಸಿದ್ದಾನೆ. ಲೋಕಾಯುಕ್ತರ ಹೆಸರಿನಲ್ಲಿ ಕಚೇರಿಯ ಸ್ಥಿರ ದೂರವಾಣಿ ಸಂಖ್ಯೆಗೆ ಕರೆ ಮಾಡಿ ಕಡತಗಳಿಗೆ ಸಹಿ ಹಾಕುವಂತೆ ಬೆದರಿಸಿದ್ದಾನೆ’ ಎಂದು ದೂರು ನೀಡಿದ್ದರು ಎಂದು ಮೂಲಗಳು ತಿಳಿಸಿವೆ.



ಗೃಹ ಸಚಿವ ಜಿ.ಪರಮೇಶ್ವರ ಅವರ ಪತ್ನಿ ಕನ್ನಿಕಾ ಪರಮೇಶ್ವರಿ (ಬಲಬದಿ) ಅವರು ವಜ್ರಾಭರಣ ಪ್ರದರ್ಶನವನ್ನು ಬುಧವಾರ ಉದ್ಘಾಟಿಸಿದರು. ಸಂಸ್ಥೆಯ ಕಾರ್ಯನಿರ್ವಾಹಕ ನಿರ್ದೇಶಕ ಥಾಮಸ್ ಮ್ಯಾಥ್ಯೂ ಇದ್ದರು –ಪ್ರಜಾವಾಣಿ ಚಿತ್ರ

ಜೋಯಾಲುಕ್ಕಾಸ್ ವಜ್ರಾಭರಣ ಪ್ರದರ್ಶನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿನ್ನಾಭರಣ ವ್ಯಾಪಾರ ಸಂಸ್ಥೆ ಜೋಯಾಲುಕ್ಕಾಸ್ ಬುಧವಾರದಿಂದ ‘ವಜ್ರಾಭರಣಗಳ ಪ್ರದರ್ಶನ’ವನ್ನು ಆರಂಭಿಸಿದೆ. ಎಂ.ಜಿ. ರಸ್ತೆಯ ಮಳಿಗೆಯಲ್ಲಿ ಸೆ. 1ರವರೆಗೂ ಪ್ರದರ್ಶನ ನಡೆಯಲಿದೆ.

‘ಸಾಂಪ್ರದಾಯಿಕ ಮತ್ತು ಆಧುನಿಕ ವಿನ್ಯಾಸದ ವಜ್ರಾಭರಣಗಳು ಮತ್ತು ವಜ್ರಗಳೂ ಈ ಪ್ರದರ್ಶನದಲ್ಲಿ ಇವೆ. ಈ ವಜ್ರಗಳು ಕುಶಲಕರ್ಮಿಗಳ ಕುಸುರಿ ಕೆಲಸಕ್ಕೆ ಕನ್ನಡಿ ಹಿಡಿದಂತಿವೆ. ಕಚ್ಚಾರೂಪದ ‘ಅನ್‌ಕಟ್’ ವಜ್ರಗಳು, ಅತ್ಯಪರೂಪದ ವಜ್ರಗಳು, ಅಪರೂಪದ ವಜ್ರಾಭರಣಗಳನ್ನು ಪ್ರದರ್ಶನದಲ್ಲಿ ಇರಿಸಲಾಗಿದೆ’ ಎಂದು ಜೋಯಾಲುಕ್ಕಾಸ್ ತಿಳಿಸಿದೆ.

‘ಪ್ರದರ್ಶನದಲ್ಲಿ ₹1 ಲಕ್ಷ ಮತ್ತು ಅದಕ್ಕಿಂತಲೂ ಹೆಚ್ಚಿನ ಮೌಲ್ಯದ ವಜ್ರಾಭರಣ ಖರೀದಿಸುವವರಿಗೆ 1 ಗ್ರಾಂನಷ್ಟು ಚಿನ್ನದ ನಾಣ್ಯ ಉಚಿತವಾಗಿ ನೀಡಲಾಗುತ್ತದೆ’ ಎಂದು ಸಂಸ್ಥೆ ಹೇಳಿದೆ.

ಗೃಹ ಸಚಿವ ಜಿ.ಪರಮೇಶ್ವರ ಅವರ ಪತ್ನಿ ಕನ್ನಿಕಾ ಪರಮೇಶ್ವರಿ ಪ್ರದರ್ಶನ ಉದ್ಘಾಟಿಸಿದರು. ‘ಸಾಂಪ್ರದಾಯಿಕ ಶೈಲಿ ಮತ್ತು ವಿನ್ಯಾಸದ ವಜ್ರಾಭರಣಗಳಿದ್ದು, ಆಕರ್ಷಕವಾಗಿವೆ’ ಎಂದರು.

ನೀರು ಪೂರೈಕೆ ವ್ಯತ್ಯಯ: ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಯಲಹಂಕ: ಕೇಂದ್ರೀಯ ಮೀಸಲು ಪೊಲೀಸ್ ಪಡೆ (ಸಿ.ಆರ್.ಪಿ.ಎಫ್) ಸಿಬ್ಬಂದಿ ಕ್ವಾರ್ಟಸ್‌ಗಳಿಗೆ ಬೆಂಗಳೂರು ಜಲಮಂಡಳಿಯಿಂದ ನೀರು ಪೂರೈಕೆಯಾಗುತ್ತಿಲ್ಲ ಎಂದು ಆರೋಪಿಸಿ, ಸಿಪಾಯಿಗಳ ಕುಟುಂಬ ಸದಸ್ಯರು ಪ್ರತಿಭಟನೆ ನಡೆಸಿದರು.

ಶುಕ್ರವಾರ ವರಮಹಾಲಕ್ಷ್ಮಿ ಹಬ್ಬವಿದ್ದು, ನೀರಿನ ಕೊರತೆ ಹಿನ್ನೆಲೆಯಲ್ಲಿ ರೊಚ್ಚಿಗೆದ್ದ ನೂರಾರು ಮಹಿಳೆಯರು, ಯಲಹಂಕ-ದೊಡ್ಡಬಳ್ಳಾಪುರ ಮುಖ್ಯರಸ್ತೆಯ ಸಿ.ಆರ್.ಪಿ.ಎಫ್ ಕೇಂದ್ರದ ಗೇಟ್‌ನ ಮುಂಭಾಗದಲ್ಲಿ ಗುರುವಾರ ಸಂಜೆ ರಸ್ತೆತಡೆ ನಡೆಸಿ ಪ್ರತಿಭಟಿಸಿದರು.

ಮುಖ್ಯರಸ್ತೆ ಪಕ್ಕದಲ್ಲಿ ಎರಡು ಗಂಟೆ ಪ್ರತಿಭಟಿಸಿದ್ದು, ವಾಹನಸಂಚಾರ ವ್ಯತ್ಯಯವಾಗಿತ್ತು. ಪೊಲೀಸರು ಪ್ರತಿಭಟನಕಾರರ ಮನವೊಲಿಸಿ, ಸಂಚಾರಕ್ಕೆ ಅನುವುಮಾಡಿಕೊಟ್ಟರು.

'ಕ್ವಾರ್ಟಸ್‌ನಲ್ಲಿ ಎರಡು ಸಾವಿರಕ್ಕೂ ಹೆಚ್ಚು ಮನೆಗಳಿವೆ. 20 ದಿನಗಳಿಂದ ಸರಿಯಾಗಿ ನೀರು ಪೂರೈಕೆ ಆಗಿಲ್ಲ' ಎಂದು ಆಕ್ರೋಶ ವ್ಯಕ್ತಪಡಿಸಿದರು.

ಬೆಂಗಳೂರು ಜಲಮಂಡಳಿ ಅಧಿಕಾರಿಗಳು, ಪೊಲೀಸ್ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ, ತಕ್ಷಣದಿಂದ ನೀರು ಪೂರೈಸುವ ಭರವಸೆ ನೀಡಿದರು.

ಶೀಘ್ರವೇ ಹೈಕೋರ್ಟ್ ಬಳಕೆಗೆ ಕಾವೇರಿ ಭವನ: ನ್ಯಾ. ಅಂಜಾರಿಯಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬಳಕೆಗೆ ಸಿದ್ಧವಾಗಿರುವ ಕಾವೇರಿ ಭವನದ ಮೂರು ಬ್ಲಾಕ್‌ಗಳನ್ನು ಒಳಗೊಂಡ 1.21 ಲಕ್ಷ ಚದರ ಅಡಿ ವಿಸ್ತೀರ್ಣದ ಕಟ್ಟಡ ಶೀಘ್ರವೇ ಹೈಕೋರ್ಟ್‌ಗೆ ಹಸ್ತಾಂತರವಾಗಲಿದೆ' ಎಂದು ಮುಖ್ಯ ನ್ಯಾಯಮೂರ್ತಿ ಎನ್‌.ವಿ.ಅಂಜಾರಿಯಾ ಗುರುವಾರ ತಿಳಿಸಿದರು.

ಸ್ವಾತಂತ್ರ್ಯೋತ್ಸವ ನಿಮಿತ್ತ ಹೈಕೋರ್ಟ್ ಆವರಣದಲ್ಲಿ ಧ್ವಜಾರೋಹಣ ನೆರವೇರಿಸಿ ಮಾತನಾಡಿದರು.

'ಸದ್ಯ ಕೆಪಿಟಿಸಿಎಲ್‌ನ ಬಳಕೆಯಲ್ಲಿರುವ ಕಾವೇರಿ ಭವನದ ಎ, ಬಿ ಮತ್ತು ಸಿ ಬ್ಲಾಕ್‌ಗಳಲ್ಲಿ ಬಳಕೆಗೆ ಸಿದ್ಧವಿರುವ ಕಚೇರಿಗಳು, ಬೋರ್ಡ್ ರೂಮ್‌ಗಳು, ಸಭಾಕೊಠಡಿಗಳು, ಸಭಾಂಗಣ ಮತ್ತು ಅತಿಥಿಗೃಹ ಹೈಕೋರ್ಟ್‌ಗೆ ಹಸ್ತಾಂತರವಾಗಲಿವೆ' ಎಂದು ಮಾಹಿತಿ ನೀಡಿದರು.

ಪದೋನ್ನತಿ: 78 ನ್ಯಾಯಾಂಗ ಅಧಿಕಾರಿಗಳಿಗೆ ಜಿಲ್ಲಾ ನ್ಯಾಯಾಧೀಶರಾಗಿ, 84 ಅಧಿಕಾರಿಗಳಿಗೆ ಹಿರಿಯ ಸಿವಿಲ್ ನ್ಯಾಯಾಧೀಶರಾಗಿ ಪದೋನ್ನತಿ ನೀಡಲಾಗಿದೆ ಎಂದರು.

'ಪ್ರಕರಣಗಳ ಮಾಹಿತಿ ವಿನಿಮಯಕ್ಕೆ ಡ್ಯಾಷ್ ಬೋರ್ಡ್ ಸ್ವರೂಪದ ರೂಪದಲ್ಲಿ ಆನ್‌ಲೈನ್ ಡಿಜಿಟಲ್ ಕೇಸ್ ಡೈರಿ ವೇದಿಕೆಯನ್ನು ರೂಪಿಸುವ ಮೂಲಕ ವಕೀಲರು, ದಾವೆದಾರರು ಮತ್ತು ಸರ್ಕಾರಿ ಇಲಾಖೆಗಳಿಗೆ ಕಾಗದ ರಹಿತ ಡೈರಿ ವ್ಯವಸ್ಥೆ ರಾಜ್ಯದಾದ್ಯಂತ ಜಾರಿಗೊಂಡಿದೆ. ಮುಂದೆ ಇ-ಫೈಲಿಂಗ್, ಕೋರ್ಟ್ ದಾಖಲೆಗಳ ಡಿಜಿಟಲೀಕರಣ, ತಂತ್ರಜ್ಞಾನ ಕೇಂದ್ರಿತ ಕ್ರಮ ಕೈಗೊಳ್ಳಲಾಗುವುದು' ಎಂದರು.

'ಬೆಂಗಳೂರು ಪ್ರಧಾನ ಪೀಠ, ಧಾರವಾಡ ಮತ್ತು ಕಲಬುರಗಿ ಪೀಠಗಳಲ್ಲಿನ ಬಾಕಿ ಪ್ರಕರಣಗಳ ಸಂಖ್ಯೆಯನ್ನು ಕಡಿಮೆ ಮಾಡಲು ಹೈಕೋರ್ಟ್ ಎಲ್ಲ ಕ್ರಮಗಳನ್ನು ಕೈಗೊಳ್ಳುತ್ತಿದೆ' ಎಂದು ಅವರು ತಿಳಿಸಿದರು.

100 ಐಐಟಿ ಪದವೀಧರರಿಗೆ ಸನ್ಮಾನ

ಬೆಂಗಳೂರು: ಐಐಟಿಗಳ ಪದವೀಧರರಾಗಿದ್ದು, ಅಸಾಧಾರಣ ಸಾಧನೆ ಮಾಡಿರುವ 100 ಮಂದಿಯ ವಿವರವುಳ್ಳ '100 ಗ್ರೇಟ್ ಐಐಟಿಯನ್ಸ್: ಡೆಡಿಕೇಟೆಡ್ ಟು ದ ಸರ್ವಿಸ್ ಆಫ್ ದ ನೇಷನ್' ಪುಸ್ತಕವನ್ನು ರಾಜ್ಯಪಾಲ ಥಾವರಚಂದ್ ಗೆಹಲೋತ್ ಆಗಸ್ಟ್ 17ರಂದು ಬಿಡುಗಡೆ ಮಾಡುವರು.

ದೆಹಲಿಯ ಎಕ್ಸೆಲ್ ಇಂಡಿಯಾ ಪಬ್ಲಿಷರ್ಸ್ ಪ್ರಕಟಿಸಿರುವ ಪುಸ್ತಕವನ್ನು 'ಐಐಟಿ ಖರಗ್‌ಪುರ್'ದ ಹಳೆಯ ವಿದ್ಯಾರ್ಥಿ ಕಮಾಂಡರ್ ವಿ.ಕೆ. ಜೈಟ್ಲಿ ಸಂಪಾದಿಸಿದ್ದಾರೆ.

ಎನ್‌.ಆರ್‌. ನಾರಾಯಣ ಮೂರ್ತಿ, ವಿ.ಆದಿಮೂರ್ತಿ, ನಂದನ್ ನಿಲೇಕಣಿ, ಸೇರಿದಂತೆ 100 ಐಐಟಿ ಪದವೀಧರರನ್ನು ಸಮಾರಂಭದಲ್ಲಿ ಸನ್ಮಾನಿಸಲಾಗುತ್ತದೆ.

ನಗರದಲ್ಲಿ ಇಂದು

ನೂತನ ಸಹಾಯಕ ಧರ್ಮಾಧ್ಯಕ್ಷರಿಗೆ ಸನ್ಮಾನ: ಅಧ್ಯಕ್ಷತೆ: ಧರ್ಮಗುರು ಪೀಟರ್ ಮಚಾಡೊ, ಸನ್ಮಾನಿತರು: ಧರ್ಮಗುರು ಆರೋಕ್ಯರಾಜ್ ಸತೀಶ್ ಕುಮಾರ್ ಮತ್ತು ಧರ್ಮಗುರು ಜೋಸೆಫ್ ಸೂಸೈನಾದನ್, ಅತಿಥಿಗಳು: ಕಾಂತರಾಜ್, ರಫಾಯಲ್ ರಾಜ್, ಐಸಾಕ್ ಆರೋಗ್ಯಸ್ವಾಮಿ, ಬರ್ತಲೋಮಿಯೊ, ಆರೋಗ್ಯಸ್ವಾಮಿ (ಚಂದ್ರು). ಆಯೋಜನೆ: ಅಖಿಲ ಕರ್ನಾಟಕ ಕಥೋಲಿಕ ಕ್ರೈಸ್ತರ ಕನ್ನಡ ಸಂಘ, ಕರ್ನಾಟಕ ಕ್ರೈಸ್ತರ ಕನ್ನಡ ಅಭಿಮಾನಿಗಳ ಸಂಘ, ಕನ್ನಡ ಮತ್ತು ಜಾಗೃತಿ ವೇದಿಕೆ, ಸ್ಥಳ: ಪಾಲನಾ ಭವನ, ಬೆಂಗಳೂರು ಮಹಾಧರ್ಮಕ್ಷೇತ್ರ, ಬಸವೇಶ್ವರ ರಸ್ತೆ, ಬೆಳಿಗ್ಗೆ 11.30

ಭಾರತದ ನೆರೆರಾಷ್ಟ್ರ ಬಾಂಗ್ಲಾದೇಶ ಮತ್ತು ಇತರ ದೇಶಗಳಲ್ಲಿನ ಬೆಳವಣಿಗೆ–ಚರ್ಚೆ: ಮಾತಾಡುವವರು: ರಾಮ್ ಮಾಧವ್, ಆಯೋಜನೆ: ಮಂಥನ ಬೆಂಗಳೂರು, ಸ್ಥಳ: ಆರ್‌ವಿ ಟೀಚರ್ಸ್ ಕಾಲೇಜು ಸಭಾಂಗಣ, ಜಯನಗರ, ಸಂಜೆ 6.30


ಬಿಎಸ್‌ಎಫ್ ಯೋಧರಿಂದ ಆಕರ್ಷಕ ಪಥ ಸಂಚಲನ


'ಸ್ವಾತಂತ್ರ್ಯ ಹೋರಾಟಗಾರ್ತಿ ರಾಣಿ ಅಬ್ಬಕ್ಕ ದೇವಿ' ನೃತ್ಯರೂಪಕ ಪ್ರದರ್ಶನ


ಯೋಧರು ಬೈಕ್‌ನಲ್ಲಿ ಸಾಹಸ ಪ್ರದರ್ಶಿಸಿದರು

ಮಾಣೆಕ್ ಷಾ ಪರೇಡ್ ಮೈದಾನದಲ್ಲಿ 78ನೇ ಸ್ವಾತಂತ್ರ್ಯ ದಿನಾಚರಣೆ ಸಂಭ್ರಮ

ಸಾಂಸ್ಕೃತಿಕ ಹೊನಲು: ಮೈನವಿರೇಳಿಸಿದ ಸಾಹಸ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಫೀಲ್ಡ್ ಮಾರ್ಷಲ್ ಮಾಣೆಕ್ ಷಾ ಪರೇಡ್ ಮೈದಾನದಲ್ಲಿ ಗುರುವಾರ ನಡೆದ 78ನೇ ಸ್ವಾತಂತ್ರ್ಯ ದಿನಾಚರಣೆ ಸಮಾರಂಭದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳ ಹೊನಲು ಹರಿಯಿತು. ಜತೆಗೆ, ಯೋಧರು ಪ್ರದರ್ಶಿಸಿದ ಬೈಕ್ ಸಾಹಸವು ಸಭಿಕರನ್ನು ರೋಮಾಂಚನಗೊಳಿಸಿತು.

ಸರ್ಕಾರದ ಪಂಚ ಗ್ಯಾರಂಟಿ ಯೋಜನೆ ಕುರಿತು ನೃತ್ಯರೂಪಕವು ವೀಕ್ಷಕರ ಗಮನ ಸೆಳೆಯಿತು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಧ್ವಜಾರೋಹಣ ನೆರವೇರಿಸಿ ಪರೇಡ್ ಪರಿವೀಕ್ಷಣೆ ಮಾಡಿ ಗೌರವ ರಕ್ಷೆ ಸ್ವೀಕರಿಸಿದರು. ಸ್ವಾತಂತ್ರ್ಯ ದಿನಾಚರಣೆ ಸಂದೇಶ ನೀಡಿದರು. ಬಳಿಕ, ಆಕರ್ಷಕ ಪಥಸಂಚಲನ ನಡೆಯಿತು.

ಬಿಎಸ್‌ಎಫ್, ಕೆಎಸ್‌ಆರ್‌ಪಿ, ಕೆಎಸ್‌ಆರ್‌ಪಿ ಮಹಿಳಾ ವಿಭಾಗ, ಗೋವಾ ರಾಜ್ಯ ಪೊಲೀಸ್, ಸಿಎಆರ್, ಬೆಂಗಳೂರು ನಗರ ಪೊಲೀಸ್, ಕಾರಾಗೃಹ ಸುಧಾರಣಾ ಇಲಾಖೆ, ಎನ್‌ಸಿಸಿ, ಶ್ವಾನದಳ, ರಾಜ್ಯ ಅಬಕಾರಿ ದಳ, ಸಂಚಾರ ವಾರ್ಡನ್, ಅಗ್ನಿಶಾಮಕ ದಳ, ಗೃಹರಕ್ಷಕ ದಳ, ರಾಷ್ಟ್ರೀಯ ಮಿಲಿಟರಿ ಶಾಲೆ, ನಂದಿನಿ ಲೇಔಟ್‌ನ ಪ್ರೆಸಿಡೆನ್ಸಿ ಸ್ಕೂಲ್, ಪೊಲೀಸ್ ಪಬ್ಲಿಕ್ ಶಾಲೆ ಸೇರಿದಂತೆ 40 ತಂಡಗಳು ಪರೇಡ್‌ನಲ್ಲಿ ಪಾಲ್ಗೊಂಡಿದ್ದವು. ಪಥಸಂಚಲನ ಆಕರ್ಷಕವಾಗಿ ನಡೆಯಿತು.

ಸಾಂಸ್ಕೃತಿಕ ವೈಭವ: ಮೈದಾನದಲ್ಲಿ ಸಾಂಸ್ಕೃತಿಕ ವೈಭವ ಮನೆ ಮಾಡಿತ್ತು. ಯಲಹಂಕದ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಪ್ರೌಢಶಾಲೆ ವಿಭಾಗದ 750ಕ್ಕೂ ಹೆಚ್ಚು ವಿದ್ಯಾರ್ಥಿಗಳು ಜಯಭಾರತಿ ನೃತ್ಯರೂಪಕ ಪ್ರಸ್ತುತ ಪಡಿಸಿದರು.

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ನೇತೃತ್ವದಲ್ಲಿ 400ಕ್ಕೂ ಹೆಚ್ಚು ವಿದ್ಯಾರ್ಥಿಗಳ ತಂಡವು ಸರ್ಕಾರದ ಐದು ಗ್ಯಾರಂಟಿ ಯೋಜನೆಗಳ ಕುರಿತ ಮಾಹಿತಿಯುಳ್ಳ ದೃಶ್ಯರೂಪಕ ಪ್ರಸ್ತುತಪಡಿಸಿತು.

ಪಿಳ್ಳಣ್ಣ ಗಾರ್ಡನ್ ಬಿಬಿಎಂಪಿ ಸಂಯುಕ್ತ ಪದವಿ ಪೂರ್ವ ಕಾಲೇಜು ತಂಡವು ಸ್ವಾತಂತ್ರ್ಯ ಹೋರಾಟಗಾರ್ತಿ ರಾಣಿ ಅಬ್ಬಕ್ಕದೇವಿ ಕುರಿತು ನೃತ್ಯವನ್ನು ಪ್ರದರ್ಶಿಸಿತು. ಈ ನೃತ್ಯರೂಪಕವು ರಾಣಿ ಅಬ್ಬಕ್ಕನ ಸಾಹಸಮಯ ಜೀವನ ಕುರಿತು ಪ್ರೇಕ್ಷಕರಿಗೆ ತಿಳಿಸಿಕೊಟ್ಟಿತು. ಪರಕೀಯರ ದಾಳಿಯನ್ನು ಧೈರ್ಯದಿಂದ ಹೇಗೆ ಎದುರಿಸಿದರು ಎಂಬುದನ್ನೂ ಪ್ರಸ್ತುತ ಪಡಿಸಲಾಯಿತು.

ಸಾಹಸ ಪ್ರದರ್ಶನ: ವಿವೇಕ್ ಪವಾರ್ ನೇತೃತ್ವದಲ್ಲಿ ಮರಾಠ ಲೈಟ್ ಇನ್‌ಫೆಂಟ್ರಿ ರೆಜಿಮೆಂಟ್ ಸೆಂಟರ್‌ನ ತಂಡ 'ಮಲ್ಲಕಂಬ' ಪ್ರದರ್ಶನ ನೀಡಿದರು. ಪ್ರತಿ ಸಾಹಸ ಪ್ರದರ್ಶನದ ವೇಳೆಯೂ ಚಪ್ಪಾಳೆಯ ಸುರಿಮಳೆ ಆಯಿತು.

ಪ್ಯಾರಚೂಟ್ ರೆಜಿಮೆಂಟ್ ಟ್ರೈನಿಂಗ್ ಸೆಂಟರ್‌ನ ಸೋಂಬೀರ್ ಮತ್ತು ಅವರ ತಂಡ 'ಪ್ಯಾರಾ ಮೋಟಾರ್' ಪ್ರದರ್ಶನ ನೀಡಿತು.

ಕೊರ್ ಆಫ್ ಮಿಲಿಟರಿ ಪೊಲೀಸ್ ಸೆಂಟರ್ ಆ್ಯಂಡ್ ಸ್ಕೂಲ್‌ನ ಎಂ.ಕೆ. ಸಿಂಗ್ ಅವರ ತಂಡ 'ಮೋಟಾರ್ ಸೈಕಲ್' ಪ್ರದರ್ಶನವು ಮೈನವಿರೇಳಿಸಿದ್ದಷ್ಟೇ ಅಲ್ಲ, ಜನರಲ್ಲಿ ಸಂಚಲನ ಸೃಷ್ಟಿತು. ಇಟ್ಟಿಗೆ ಪುಡಿ ಮಾಡುವ ವೇಳೆ ಬೈಕ್ ಸವಾರ ನಿಯಂತ್ರಣ ತಪ್ಪಿ ಬಿದ್ದರು. ಯಾವುದೇ ಅಪಾಯ ಸಂಭವಿಸಲಿಲ್ಲ.

ಕಿಕ್ಕಿರಿದ್ದು ಸೇರಿದ್ದ ಪ್ರೇಕ್ಷಕರು: ಈ ಬಾರಿ ಧ್ವಜಾರೋಹಣ, ಸಾಂಸ್ಕೃತಿಕ ಕಾರ್ಯಕ್ರಮ ವೀಕ್ಷಿಸಲು ಹೆಚ್ಚಿನ ಸಂಖ್ಯೆಯಲ್ಲಿ ಪ್ರೇಕ್ಷಕರು ಸೇರಿದ್ದರು. ಪೊಲೀಸ್ ಬಿಗಿ ಬಂದೋಬಸ್ತ್ ಕಲ್ಪಿಸಲಾಗಿತ್ತು.


ಫೀಲ್ಡ್ ಮಾರ್ಷಲ್ ಮಾಣೆಕ್ ಷಾ ಪರೇಡ್ ಮೈದಾನದಲ್ಲಿ ನಡೆದ ಸ್ವಾತಂತ್ರ್ಯ ದಿನಾಚರಣೆಯಲ್ಲಿ ಧ್ವಜಾರೋಹಣ ಬಳಿಕ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಗೌರವ ರಕ್ಷೆ ಸ್ವೀಕರಿಸಿದರು. –ಪ್ರಜಾವಾಣಿ ಚಿತ್ರಗಳು/ ಎಂ.ಎಸ್.ಮಂಜುನಾಥ್

ಅಂಗಾಂಗ ದಾನ ಮಾಡಿದ 65 ಜನರ ಕುಟುಂಬದ ಸದಸ್ಯರನ್ನು ಮುಖ್ಯಮಂತ್ರಿಯವರು ಗೌರವಿಸಿ ಪ್ರಶಂಸನಾ ಪತ್ರ ವಿತರಿಸಿದರು. ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್, ನಗರ ಪೊಲೀಸ್ ಕಮಿಷನರ್ ಬಿ.ದಯಾನಂದ, ಜಿಲ್ಲಾಧಿಕಾರಿ ಕೆ.ಎ.ದಯಾನಂದ ಹಾಜರಿದ್ದರು.

ಮೂಲ ಸೌಕರ್ಯಕ್ಕೆ ₹48,686 ಕೋಟಿ

ವಿಶ್ವದರ್ಜೆ ನಗರವಾಗಿ ಬೆಂಗಳೂರನ್ನು ಅಭಿವೃದ್ಧಿಪಡಿಸಲು 'ಬ್ರ್ಯಾಂಡ್ ಬೆಂಗಳೂರು' ಪರಿಕಲ್ಪನೆಯಡಿ ₹48,686 ಕೋಟಿ ವೆಚ್ಚದಲ್ಲಿ ದೀರ್ಘಾವಧಿಯ ಯೋಜನೆ ಜಾರಿಗೆ ಯೋಜಿಸಲಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು. ಧ್ವಜಾರೋಹಣ ನೆರವೇರಿಸಿ ಅವರು ಮಾತನಾಡಿದರು. ಸಂಚಾರ ದಟ್ಟಣೆ ನಿವಾರಣೆಗೆ ಪೆರಿಫೆರಲ್ ವರ್ತುಲ ರಸ್ತೆ ಯೋಜನೆ ಜಾರಿಗೆ ಸರ್ಕಾರ ನಿರ್ಧರಿಸಿದೆ ಎಂದು ಹೇಳಿದರು.

ಪಥಸಂಚಲನ–ಸಾಂಸ್ಕೃತಿಕ ಕಾರ್ಯಕ್ರಮದ ಬಹುಮಾನ ಪುರಸ್ಕೃತರು	
ಗ್ರೂಪ್–1	ಬಿಎಸ್‌ಎಫ್ ತಂಡ (ಪ್ರಥಮ), ಕೆಎಸ್‌ಆರ್‌ಪಿ (ದ್ವಿತೀಯ), ಕೆಎಸ್‌ಆರ್‌ಪಿ ಮಹಿಳಾ ತಂಡ (ತೃತೀಯ)
ಗ್ರೂಪ್–2	ಅಗ್ನಿಶಾಮಕ ದಳ(ಪ್ರಥಮ), ಗೃಹರಕ್ಷಕ ದಳ (ದ್ವಿತೀಯ)
ಗ್ರೂಪ್–3	ಎನ್‌ಸಿಸಿ(ಪ್ರಥಮ), ಭಾರತ್ ಸ್ಕೌಟ್ ಆ್ಯಂಡ್ ಗೈಡ್ಸ್ (ದ್ವಿತೀಯ)
ಗ್ರೂಪ್–4	ರಾಷ್ಟ್ರೀಯ ಮಿಲಿಟರಿ ಶಾಲೆ(ಪ್ರಥಮ), ಆರ್.ವಿ. ಪಬ್ಲಿಕ್ ಶಾಲೆ(ದ್ವಿತೀಯ)
ಗ್ರೂಪ್–5	ಮಿತ್ರಾ ಅಕಾಡೆಮಿ (ಪ್ರಥಮ), ಪುನೀತ್ ಪಬ್ಲಿಕ್ ಸ್ಕೂಲ್ (ದ್ವಿತೀಯ)
ಗ್ರೂಪ್–6	ರಾಜರಾಜೇಶ್ವರಿ ಸ್ಕೂಲ್ (ಪ್ರಥಮ), ಫ್ಲೋರೆನ್ಸ್ ಪಬ್ಲಿಕ್ ಸ್ಕೂಲ್ (ದ್ವಿತೀಯ)
ಗ್ರೂಪ್–7	ಎನ್‌ಸಿಸಿ (ಪ್ರಥಮ), ಸೇಂಟ್ ಫ್ರಾನ್ಸಿಸ್ ಸ್ಕೂಲ್ (ದ್ವಿತೀಯ), ಪ್ರೆಸಿಡೆನ್ಸಿ ಶಾಲೆ(ತೃತೀಯ)

ಸಾಂಸ್ಕೃತಿಕ ವಿಭಾಗ

ಬಿಬಿಎಂಪಿ ಸಂಯುಕ್ತ ಪದವಿ ಪೂರ್ವ ಕಾಲೇಜು ಪ್ರೌಢಶಾಲಾ ವಿಭಾಗ ವಿದ್ಯಾರ್ಥಿಗಳು ಪ್ರಸ್ತುತ ಪಡಿಸಿದ ಸ್ವಾತಂತ್ರ್ಯ ಹೋರಾಟಗಾರ್ತಿ ರಾಣಿ ಅಬ್ಬಕ್ಕದೇವಿ ನೃತ್ಯ ರೂಪಕಕ್ಕೆ ಪ್ರಥಮ, ಸರ್ಕಾರಿ ಪದವಿ ಪೂರ್ವ ಕಾಲೇಜು ವಿದ್ಯಾರ್ಥಿಗಳು ಪ್ರಸ್ತುತ ಪಡಿಸಿದ ಜಯ ಭಾರತಿ ನೃತ್ಯ ರೂಪಕಕ್ಕೆ ದ್ವಿತೀಯ ಬಹುಮಾನ ದೊರಕಿದೆ. ಕಾರ್ಯಕ್ರಮದ ಕೊನೆಯಲ್ಲಿ ಟ್ರೋಫಿ ಹಾಗೂ ಪ್ರಶಂಸಾ ಪತ್ರ ವಿತರಣೆ ಮಾಡಲಾಯಿತು.


ಯೋಧರಿಂದ ಆಕರ್ಷಕ 'ಮಲ್ಲಕಂಬ' ಪ್ರದರ್ಶನ


ಗಮನ ಸೆಳೆದ ಬೈಕ್ ಸಾಹಸ ಪ್ರದರ್ಶನ


ಕರ್ನಾಟಕ ಸ್ಟೇಟ್ ಮಾರ್ಕೆಟಿಂಗ್ ಕಮ್ಯೂನಿಕೇಷನ್ ಆ್ಯಂಡ್ ಅಡ್ವರ್ಟೈಸಿಂಗ್ ಸಂಸ್ಥೆಯಲ್ಲಿ ಗುರುವಾರ ಆಯೋಜಿಸಿದ್ದ ಸ್ವಾತಂತ್ರ್ಯ ದಿನಾಚರಣೆ ಸಮಾರಂಭದಲ್ಲಿ ಸಂಸ್ಥೆ ಅಧ್ಯಕ್ಷ ಹಾಗೂ ಶಾಸಕ ಸತೀಶ ಕೃಷ್ಣ ಸೈಲ್ ಧ್ವಜಾರೋಹಣ ನೆರವೇರಿಸಿ, ಧ್ವಜ ವಂದನೆ ಸಲ್ಲಿಸಿದರು. ವ್ಯವಸ್ಥಾಪಕ ನಿರ್ದೇಶಕ ಮೊಹಮ್ಮದ್ ಅತೀಕುಲ್ಲಾ ಶರೀಫ್, ಉಪ ಪ್ರಧಾನ ವ್ಯವಸ್ಥಾಪಕ ಪಿ.ಎಸ್ ನಂದೀಶ ಉಪಸ್ಥಿತರಿದ್ದರು


ಸ್ವಾತಂತ್ರ್ಯ ದಿನಾಚರಣೆಯ ಪ್ರಯುಕ್ತ ಗುರುವಾರ ರಾಜಭವನದ ಅಂಗಳದಲ್ಲಿ ಮಹಾತ್ಮ ಗಾಂಧೀಜಿ ಪ್ರತಿಮೆಗೆ ರಾಜ್ಯಪಾಲ ಥಾವರಚಂದ್ ಗೆಹಲೋತ್ ಮಾಲಾರ್ಪಣೆ ಮಾಡಿದರು.

ರಾಯಣ್ಣ ಜನುಮದಿನ; ಮುಂದಿನ ಬಾರಿ ಅದ್ಧೂರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬ್ರಿಟಿಷರ ವಿರುದ್ಧ ದಿಟ್ಟ ಹೋರಾಟ ನಡೆಸಿದ್ದ ಸಂಗೊಳ್ಳಿ ರಾಯಣ್ಣ ಜನಿಸಿದ ದಿನವೇ ಭಾರತಕ್ಕೆ ಸ್ವಾತಂತ್ರ್ಯ ಸಿಕ್ಕಿದೆ. ಮುಂದಿನ ವರ್ಷದಿಂದ ಅವರ ಜನ್ಮದಿನವನ್ನು ರವಿಂದ್ರ ಕಲಾಕ್ಷೇತ್ರದಲ್ಲಿ ಅದ್ದೂರಿಯಾಗಿ ಆಚರಿಸಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಜಯಂತಿ ನಿಮಿತ್ತ ಗುರುವಾರ ನಡೆದ ಕಾರ್ಯಕ್ರಮದಲ್ಲಿ ಮೆಜೆಸ್ಟಿಕ್ ಸಮೀಪದ ಸಂಗೊಳ್ಳಿ ರಾಯಣ್ಣ ಪ್ರತಿಮೆಗೆ ಮಾಲಾರ್ಪಣೆ ಮಾಡಿ ಅವರು ಮಾತನಾಡಿದರು.

ರಾಯಣ್ಣ ಅವರನ್ನು ಬ್ರಿಟಿಷರು ಗಲ್ಲಿಗೇರಿಸಿದ ದಿನ ಸಂವಿಧಾನ ಜಾರಿಯಾಗಿದೆ. ಹಾಗಾಗಿ, ಗಣರಾಜ್ಯ ದಿನದಂದು ಪುಣ್ಯಸ್ಮರಣೆ ಕಾರ್ಯಕ್ರಮವನ್ನೂ ಅರ್ಥಪೂರ್ಣವಾಗಿ ಆಚರಿಸಲಾಗುವುದು ಎಂದರು.

ನಿಡುಮಾಮಿಡಿ ಮಠದ ವೀರಭದ್ರ ಚನ್ನಮಲ್ಲ ಸ್ವಾಮೀಜಿ, ಮುಖ್ಯಮಂತ್ರಿ ರಾಜಕೀಯ ಕಾರ್ಯದರ್ಶಿ ಗೋವಿಂದರಾಜು, ಗ್ಯಾರಂಟಿ ಅನುಷ್ಠಾನ ಸಮಿತಿಯ ಅಧ್ಯಕ್ಷರಾದ ಎಚ್.ಎಂ.ರೇವಣ್ಣ, ವಿಧಾನ ಪರಿಷತ್ ಸದಸ್ಯ ಪ್ರಕಾಶ್ ರಾಥೋಡ್ ಉಪಸ್ಥಿತರಿದ್ದರು.

ವಿವಿಧೆಡೆ ಸಂಭ್ರಮದ ಸ್ವಾತಂತ್ರ್ಯೋತ್ಸವ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ವಿವಿಧೆಡೆ ಗುರುವಾರ ಸ್ವಾತಂತ್ರ್ಯೋತ್ಸವವನ್ನು ಸಂಭ್ರಮದಿಂದ ಆಚರಿಸಲಾಯಿತು.

ನೈರುತ್ಯ ರೈಲ್ವೆ: ನೈರುತ್ಯ ರೈಲ್ವೆ ವಿಭಾಗದಿಂದ ಮಹಾತ್ಮ ಗಾಂಧಿ ರೈಲ್ವೆ ಕಾಲೊನಿಯ ರೈಲ್ವೆ ಇನ್‌ಸ್ಟಿಟ್ಯೂಟ್ ಮೈದಾನದಲ್ಲಿ ಸ್ವಾತಂತ್ರ್ಯ ದಿನ ಆಚರಿಸಲಾಯಿತು.

ವಿಭಾಗೀಯ ರೈಲ್ವೆ ವ್ಯವಸ್ಥಾಪಕ ಯೋಗೇಶ್ ಮೋಹನ್ ಮಾತನಾಡಿ, 'ಸುರಕ್ಷತೆ ಹೆಚ್ಚಿಸಲು ಕ್ರಮ ಕೈಗೊಳ್ಳಲಾಗಿದೆ' ಎಂದರು. ಕಳೆದ ವರ್ಷಕ್ಕೆ ಹೋಲಿಸಿದರೆ ಈ ವರ್ಷ ಶೇ 6.47ರಷ್ಟು ಹೆಚ್ಚಳವಾಗಿದೆ. ಜುಲೈಯಲ್ಲಿ ಪ್ರಯಾಣಿಕರಿಂದ ₹ 286.3 ಕೋಟಿ ಆದಾಯ ಬಂದಿರುವುದು ಈ ವರ್ಷದಲ್ಲಿ ಬಂದ ಅತ್ಯುತ್ತಮ ಮಾಸಿಕ ಪ್ರಯಾಣಿಕ ಆದಾಯವಾಗಿದೆ ಎಂದು ತಿಳಿಸಿದರು.

ಹೆಚ್ಚುವರಿ ವಿಭಾಗೀಯ ರೈಲ್ವೆ ವ್ಯವಸ್ಥಾಪಕ ಪರೀಕ್ಷಿತ್ ಮೋಹನ್‌ಸೂರಿಯಾ, ಆಶುತೋಷ್ ಮಾಥುರ್, ವಿಭಾಗೀಯ ಸಿಬ್ಬಂದಿ ಅಧಿಕಾರಿ ಉಮಾ ಶರ್ಮಾ, ವಿಭಾಗೀಯ ಭದ್ರತಾ ಆಯುಕ್ತ (ಆರ್.ಪಿ.ಎಫ್) ಶ್ರೇಯಾನ್ಸ್ ಚಿಂಚವಾಡೆ, ಮಹಿಳಾ ಕಲ್ಯಾಣ ಸಂಘಟನೆಯ ಬೆಂಗಳೂರು ವಿಭಾಗದ ಅಧ್ಯಕ್ಷೆ ಶಿಖಾ ಅಗರ್ವಾಲ್ ಉಪಸ್ಥಿತರಿದ್ದರು.

ಕೃಷಿ ವಿ.ವಿ.: 'ಭಾರತದಲ್ಲಿ ಕೃಷಿಯು ಆಹಾರ ಮತ್ತು ಪೋಷಕಾಂಶದ ಭದ್ರತೆ ಜೊತೆಗೆ ಶೇ 50ರಷ್ಟು ಜನರಿಗೆ ಬದುಕುನೀಡಿದೆ' ಎಂದು ಕೃಷಿ ವಿ.ವಿ ಕುಲಪತಿ ಎಸ್.ವಿ.ಸುರೇಶ್ ಅಭಿಪ್ರಾಯಪಟ್ಟರು.

ಕೃಷಿ ವಿಶ್ವವಿದ್ಯಾಲಯದಲ್ಲಿ ಧ್ವಜಾರೋಹಣ ನೆರವೇರಿಸಿ ಅವರು ಮಾತನಾಡಿದರು.

ನ್ಯಾಷನಲ್ ಕಾಲೇಜು: 'ಯುವಜನರು ಎನ್‌ಸಿಸಿ, ಎನ್‌ಎಸ್‌ಎಸ್‌ನಂತಹ ಸೇವಾ ಸಂಸ್ಥೆಗಳಲ್ಲಿ ಭಾಗಿ ಆಗ ಬೇಕು' ಎಂದು ನಿವೃತ್ತ ಐಪಿಎಸ್ ಅಧಿಕಾರಿ, ಬಿಜೆಪಿ ಮುಖಂಡ ಭಾಸ್ಕರ್ ರಾವ್ ಸಲಹೆ ನೀಡಿದರು.

ನ್ಯಾಷನಲ್ ಎಜುಕೇಷನ್ ಸೊಸೈಟಿ ಆಫ್ ಕರ್ನಾಟಕ ಬಸವನಗುಡಿಯ ನ್ಯಾಷನಲ್ ಹೈಸ್ಕೂಲ್ ಮೈದಾನದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಧ್ವಜಾರೋಹಣ ನೆರವೇರಿಸಿ ಮಾತನಾಡಿದರು.

ಎನ್‌ಇಎಸ್ ಕರ್ನಾಟಕ ಟ್ರಸ್ಟ್‌ನ ಅಧ್ಯಕ್ಷ ಎಚ್.ಎನ್. ಸುಬ್ರಮಣ್ಯ, ಕಾರ್ಯದರ್ಶಿ ವಿ. ವೆಂಕಟಶಿವಾ ರೆಡ್ಡಿ, ಬಿ.ಎಸ್. ಅರುಣ್‌ಕುಮಾರ್, ಜಂಟಿ ಕಾರ್ಯದರ್ಶಿ ಸುಧಾಕರ್ ಎಸ್ತೂರಿ, ಬಸವನಗುಡಿ ನ್ಯಾಷನಲ್ ಇಂಗ್ಲಿಷ್ ಶಾಲೆಯ ಅಧ್ಯಕ್ಷೆ ಪಾವನಾ ಉಪಸ್ಥಿತರಿದ್ದರು.

ಪಥಸಂಚಲನ: ಗಾಂಧಿ ಬಜಾರ್‌ನಲ್ಲಿ 250 ಅಡಿ ಉದ್ದದ ತ್ರಿವರ್ಣ ಧ್ವಜ ಜಾಥಾಗೆ ಸಂಸದ ತೇಜಸ್ವಿ ಸೂರ್ಯ, ಶಾಸಕ ಉದಯ್ ಗರುಡಾಚಾರ್, ವಿವೈಶ್ಯ ಸಂಸ್ಥಾಪಕ ಅನಿಲ್ ಗುಪ್ತ ಚಾಲನೆ ನೀಡಿದರು.

500 ಜನರಿಂದ 'ಏಕತೆ ಮತ್ತು ಹೆಮ್ಮೆಯೊಂದಿಗೆ ನಮ್ಮ ಸ್ವಾತಂತ್ರ್ಯವನ್ನು ಆಚರಿಸೋಣ' ಎಂಬ ಘೋಷಣೆಯೊಂದಿಗೆ ವಿವೈಶ್ಯ ಏಕತಾ ಧ್ವಜ ಜಾಥಾ ನಡೆಯಿತು.


ಬಂಡೇಮಠ ಸಮೀಪದ ಕಂಚುಗಲ್‌ನ ಸಿದ್ದಗಂಗಾ ಗ್ರಾಮಾಂತರ ಪ್ರೌಢಶಾಲೆಯಲ್ಲಿ ಹಳೆಯ ವಿದ್ಯಾರ್ಥಿಗಳ ಸಂಘದ ವತಿಯಿಂದಸ್ವಾತಂತ್ರ್ಯ ದಿನಾಚರಣೆ ಹಾಗೂ 'ಪ್ರತಿಭಾ ಪುರಸ್ಕಾರ' ಕಾರ್ಯಕ್ರಮ ನಡೆಯಿತು. ಬಂಡೇಮಠದ ಮಹಾಲಿಂಗ ಸ್ವಾಮೀಜಿ, ದೇವರಾಜು, ಹರೀಶ್ ಎಚ್.ಎಸ್, ಸುನೀಲ್ ಕುಮಾರ್ ಎಂ., ದೇವರಾಜು, ಮಂಜು ಆರಾಧನ, ಸುಂದರ್ ಮೂರ್ತಿ, ಸುಮಲತ, ಸೌಮ್ಯಶ್ರೀ ಯೋಗೇಶ್, ಶಶಿಕಲಾ, ಮಲ್ಲಿಕಾರ್ಜುನ್, ನಂದೀಶ್, ಶಿಲ್ಪಾ, ಜ್ಯೋತಿ, ರಾಜಕುಮಾರ್, ಶ್ರೀನಿವಾಸ್, ಸುಮಂತ್, ಚಂದ್ರಶೇಖರ್, ಲೋಕೇಶ್ ಕೆ.ಜಿ., ನೇತ್ರೇಶ್, ತಿಮ್ಮರಾಜು, ಗುರುಮೂರ್ತಿ ಭಾಗವಹಿಸಿದ್ದರು.


ನೆಲಮಂಗಲದ ಅಂಬೇಡ್ಕರ್ ಕ್ರೀಡಾಂಗಣದಲ್ಲಿ ನಡೆದ ಸ್ವಾತಂತ್ರ್ಯೋತ್ಸವ ಸಮಾರಂಭದಲ್ಲಿ ವಿವಿಧ ಕ್ಷೇತ್ರಗಳ ಸಾಧಕರಾದ (ಕುಳಿತವರು) ಮುನಿರಾಜು (ಕೃಷಿ), ಉಮಾಮಹೇಶ್ವರಿ (ಕ್ರೀಡೆ), ಇಸ್ತೂರು ಬೈರೇಗೌಡ, ಕೆ.ಜಿ.ಕುಮಾರ್ (ಕನ್ನಡ), ಕೃಷ್ಣಪ್ಪ (ರಂಗಭೂಮಿ), ಸುಮಿತ್ರಾ (ಮಹಿಳಾ ಸಬಲೀಕರಣ), ಅಜಯ್ (ಕ್ರೀಡೆ), ಹೊನ್ನಹನುಮಯ್ಯ (ಶಿಕ್ಷಣ) ಅವರನ್ನು ಶಾಸಕ ಎನ್ ಶ್ರೀನಿವಾಸ್,ತಹಶೀಲ್ದಾರ್ ಅಮೃತ್ ಆತ್ರೇಶ್ ಸನ್ಮಾನಿಸಿದರು

ಲಾಲ್‌ಬಾಗ್‌ಗೆ 2.1 ಲಕ್ಷ ಜನರ ಭೇಟಿ • ₹92.5 ಲಕ್ಷ ಪ್ರವೇಶ ಶುಲ್ಕ ಸಂಗ್ರಹ

ಫಲಪುಷ್ಪ ಪ್ರದರ್ಶನದಲ್ಲಿ ಜನಸಾಗರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸ್ವಾತಂತ್ರ್ಯೋತ್ಸವ ನಿಮಿತ್ತ ಲಾಲ್‌ಬಾಗ್‌ನಲ್ಲಿ ನಡೆಯುತ್ತಿರುವ 'ವಿಶ್ವಜ್ಞಾನಿ, ಸಂವಿಧಾನ ಶಿಲ್ಪಿ ಭಾರತರತ್ನ ಡಾ.ಬಿ.ಆರ್. ಅಂಬೇಡ್ಕರ್' ವಿಷಯ ಆಧಾರಿತ ಫಲಪುಷ್ಪ ಪ್ರದರ್ಶನ'ಕ್ಕೆ ಗುರುವಾರ 2.1 ಲಕ್ಷ ಮಂದಿ ಭೇಟಿ ನೀಡಿದ್ದಾರೆ.

1.28 ಲಕ್ಷ ವಯಸ್ಕರು, 81 ಸಾವಿರ ಮಕ್ಕಳು ಭೇಟಿ ನೀಡಿದ್ದು, ಪ್ರವೇಶ ಶುಲ್ಕ ₹ 92.5 ಲಕ್ಷ ಸಂಗ್ರಹವಾಗಿದೆ ಎಂದು ತೋಟಗಾರಿಕೆ ಇಲಾಖೆ ಜಂಟಿ ನಿರ್ದೇಶಕ ಎಂ. ಜಗದೀಶ್ ತಿಳಿಸಿದ್ದಾರೆ.

ಸ್ವಾತಂತ್ರ್ಯ ದಿನವನ್ನು ಆಚರಿಸಿದ ಬಳಿಕ ಬಹುತೇಕರು ಲಾಲ್‌ಬಾಗ್‌ಗೆ ಭೇಟಿ ನೀಡಿದ್ದರು. ಬಂಡೆ, ಕೆರೆ ಏರಿ, ಬೋನ್ಸಾಯ್, ತರಕಾರಿ ಉದ್ಯಾನ, ಮಾರಾಟ ಮಳಿಗೆಗಳ ಬಳಿ ಕಿಕ್ಕಿರಿದ ಜನಸಂದಣಿ ಇತ್ತು. ಗಾಜಿನ ಮನೆಯಲ್ಲಿ ಜನದಟ್ಟಣೆ ಉಂಟಾಗಿ, ಸಾಲುಗಳನ್ನು ನಿಯಂತ್ರಿಸಲು ತೋಟಗಾರಿಕೆ ಇಲಾಖೆ ಸಿಬ್ಬಂದಿ ಮತ್ತು ಪೊಲೀಸರು ಹರಸಾಹಸಪಟ್ಟರು.

ಟಿಕೆಟ್ ಪಡೆಯಲೂ ಜನರು ಸಾಲಿನಲ್ಲಿ ನಿಂತು ಕಾಯಬೇಕಾಯಿತು. ಇದರಿಂದ ಮಕ್ಕಳು, ವೃದ್ಧರು ಸಮಸ್ಯೆ ಎದುರಿಸಿದರು.

ಲಾಲ್‌ಬಾಗ್ ಮುಖ್ಯ ಗೇಟಿನ ರಸ್ತೆಯಲ್ಲಿ ಸಂಚಾರ ದಟ್ಟಣೆ ಉಂಟಾಗಿತ್ತು. ಉದ್ಯಾನದ ನಾಲ್ಕು ಪ್ರವೇಶ ದ್ವಾರಗಳ ಪಾದಚಾರಿ ಮಾರ್ಗದಲ್ಲಿ ಕಿರು ಮಾರುಕಟ್ಟೆಗಳೇ ಸೃಷ್ಟಿಯಾಗಿದ್ದವು.


ಸ್ವಾತಂತ್ರ್ಯ ದಿನಾಚರಣೆ ಪ್ರಯುಕ್ತ ಲಾಲ್‌ಬಾಗ್‌ನಲ್ಲಿ ನಡೆಯುತ್ತಿರುವ ಫಲಪುಷ್ಪ ಪ್ರದರ್ಶನ ವೀಕ್ಷಣೆಗೆ ಸಾರ್ವಜನಿಕರು ಗುರುವಾರ ಭಾರಿ ಸಂಖ್ಯೆಯಲ್ಲಿ ಬಂದಿದ್ದರು




JOS ALUKKAS
A TRADITION OF FINE JEWELLERY
60 ವರ್ಷಗಳ ಸಂತಸವನ್ನು ಒಂದಾಗಿ ಸಂಭ್ರಮಿಸೋಣ... ಬನ್ನಿ.
60 ANNIVERSARY
6 ಕೋಟಿ ಮೌಲ್ಯದ ಉಡುಗೊರೆಗಳು
ಈ ವರಲಕ್ಷ್ಮಿ ವ್ರತಕ್ಕೆ ಜೋಸ್ ಆಲುಕ್ಕಾಸ್‌ನಲ್ಲಿ ಚಿನ್ನದ ಆಭರಣಗಳನ್ನು ಖರೀದಿಸಿ ಮತ್ತು ನಿಮ್ಮ ಮನೆಗೆ ಸಕಲ ಐಶ್ವರ್ಯಗಳನ್ನು ಬರಮಾಡಿಕೊಳ್ಳಿ.
ಇದು ಜೋಸ್ ಆಲುಕ್ಕಾಸ್‌ನ ವೈಭವಯುತ 60 ವರ್ಷಗಳ ಸಂಭ್ರಮ.
6 ವಾರಗಳ ಅವಧಿಯ ಅದ್ದೂರಿ ಹಬ್ಬಗಳ ಶ್ರೇಣಿಗೆ ತಮಗೆಲ್ಲರಿಗೂ ಸುಸ್ವಾಗತ. ಈ ಒಂದು ವಿಶೇಷ ಸಂದರ್ಭದಲ್ಲಿ, ಅತ್ಯಾಕರ್ಷಕ ಕೊಡುಗೆಗಳ ಜೊತೆಗೆ, ಹೊಚ್ಚ-ಹೊಸ, ಉತ್ಕೃಷ್ಟ ಚಿನ್ನ ಮತ್ತು ವಜ್ರಾಭರಣಗಳ ಸಂಗ್ರಹಗಳು ನಿಮಗಾಗಿ ಕಾಯುತ್ತಿವೆ. ಆತ್ಮೀಯ ಗ್ರಾಹಕರೇ, ನಿಮ್ಮ ಪ್ರೀತಿ ಮತ್ತು ವಿಶ್ವಾಸಗಳ ಹೊರತಾಗಿ ನಾವಿಂದು ಈ ಮಟ್ಟಕ್ಕೆ ಬೆಳೆಯಲು ಸಾಧ್ಯವಾಗುತ್ತಿರಲಿಲ್ಲ. ಅದಕ್ಕಾಗಿ ತಮ್ಮೆಲ್ಲರಿಗೂ ತುಂಬು ಹೃದಯದ ಕೃತಜ್ಞತೆಗಳು.
ಮೆಗಾ ಬಂಪರ್ ಬಹುಮಾನ*
6 ಕಾರುಗಳು
ಪ್ರತಿವಾರದ ಉಡುಗೊರೆ*
ಗೃಹೋಪಯೋಗಿ ವಸ್ತುಗಳು & ಚಿನ್ನದ ನಾಣ್ಯಗಳು
ಲಕ್ಕೀ ಡ್ರಾ ಮುಖಾಂತರ
ಉಚಿತ ಉಡುಗೊರೆಗಳು ಎಲ್ಲಾ ಖರೀದಿಗಳಿಗೆ
ವಜ್ರಗಳ ಮೇಲೆ 20% ರಿಯಾಯಿತಿ*
ಪ್ಲಾಟಿನಂ ಮೇಲೆ 7% ರಿಯಾಯಿತಿ*
ನಿಮ್ಮ ವಜ್ರಗಳಿಗೆ 100%* ಮೌಲ್ಯವನ್ನು ಪಡೆಯಿರಿ ಹೊಸ ವಜ್ರದ ಆಭರಣಗಳಿಗೆ ಎಕ್ಸ್‌ಚೇಂಜ್ ಮಾಡುವಾಗ!
*T&C apply
Push360
BENGALURU: DICKENSON ROAD, Ph: 080-25552281 | FORUM SOUTH BANGALORE. Ph: 080-6836 5475
JAYANAGAR, Ph: 080-41539802 | K.R.PURAM, Ph: 080-22440916 | KAMMANAHALLI, Ph: 080-22204916
RAJAJINAGAR, Ph: 080-23192319 | HSR LAYOUT, Ph: 080-22445916 | R.R.NAGAR, Ph:080-27622544
HOSUR, Ph:04344-227491. Shop online at www.josalukkasonline.com
ಜೋಸ್ ಆಲುಕ್ಕಾಸ್
KARNATAKA | ANDHRA PRADESH | TELANGANA | TAMIL NADU | PUDUCHERRY | KERALA

ಸ್ವಾತಂತ್ರ್ಯೋತ್ಸವದಲ್ಲಿ ವಿರೋಧ ಪಕ್ಷಗಳ ಮುಖಂಡರಿಗೆ ಸಿದ್ದರಾಮಯ್ಯ ಸಲಹೆ

ಹಿಂಬಾಗಿಲ ರಾಜಕಾರಣ ಬಿಡಿ: ಸಿ.ಎಂ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮತದಾರರ ತೀರ್ಪು ಧಿಕ್ಕರಿಸಿ ನಡೆಸುವ ಹಿಂಬಾಗಿಲ ರಾಜಕಾರಣವನ್ನು ಇತಿಹಾಸದಲ್ಲಿ ಜನರು ಎಂದಿಗೂ ಕ್ಷಮಿಸಿಲ್ಲ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ನಗರದ ಫೀಲ್ಡ್ ಮಾರ್ಷಲ್ ಮಾಣೆಕ್ ಷಾ ಪರೇಡ್ ಮೈದಾನದಲ್ಲಿ ಗುರುವಾರ ನಡೆದ 78ನೇ ಸ್ವಾತಂತ್ರ್ಯ ದಿನಾಚರಣೆಯಲ್ಲಿ ಧ್ವಜಾರೋಹಣ ನೆರವೇರಿಸಿದ ಬಳಿಕ ಮಾತನಾಡಿದ ಅವರು, ರಾಜಭವನವನ್ನು ಬಳಸಿಕೊಂಡು ತಮ್ಮ ಸರ್ಕಾರವನ್ನು ಅಸ್ಥಿರಗೊಳಿಸಲು ಪ್ರಯತ್ನ ನಡೆಯುತ್ತಿದೆ ಎಂದು ಈ ಹಿಂದೆ ಮಾಡಿದ್ದ ಆರೋಪವನ್ನು ಪರೋಕ್ಷವಾಗಿ ಪ್ರಸ್ತಾಪಿಸಿದರು.

ಮುಡಾ ನಿವೇಶನ ಹಂಚಿಕೆ ಹಾಗೂ ವಾಲ್ಮೀಕಿ ಅಭಿವೃದ್ಧಿ ನಿಗಮದ ಹಗರಣದ ವಿಚಾರವಾಗಿ ಮುಖ್ಯಮಂತ್ರಿಯವರ ರಾಜೀನಾಮೆಗೆ ಆಗ್ರಹಿಸುತ್ತಿರುವ ವಿರೋಧ ಪಕ್ಷಗಳ ಮುಖಂಡರನ್ನು ತಮ್ಮ ಭಾಷಣದ ಕೊನೆಯಲ್ಲಿ ತರಾಟೆಗೆ ತೆಗೆದುಕೊಂಡ ಅವರು, 'ಪ್ರಜಾಪ್ರಭುತ್ವ ವ್ಯವಸ್ಥೆಯ ಅಡಿ ಜನರು ನೀಡಿದ ತೀರ್ಪನ್ನು ಗೌರವಿಸಿ ಸಂವಿಧಾನದ ಆಶಯಗಳ ಪ್ರಕಾರ ಜವಾಬ್ದಾರಿಯಿಂದ ನಡೆಯಬೇಕು' ಎಂದು ಸಲಹೆ ನೀಡಿದರು.

'ಲೋಕಸಭಾ ಚುನಾವಣೆಯಲ್ಲಿ ತಮ್ಮ ರಾಜಕೀಯ ಪ್ರಬುದ್ಧತೆ ಮೆರೆದಿರುವ ಮತದಾರರು, ಪ್ರಜಾಪ್ರಭುತ್ವ ಯಾರ ಕೈಗೊಂಬೆಯಾಗಲು ಸಾಧ್ಯವಿಲ್ಲ ಎಂಬ ಸಂದೇಶ ನೀಡಿದ್ದಾರೆ' ಎಂದು ಹೇಳಿದರು.

'ಜಾತಿ-ಮತದ ಆಧಾರದ ವಿಭಜನೆಯ ರಾಜಕಾರಣ ಮಾಡುವ ವಿಚ್ಛಿದ್ರಕಾರಿ ಶಕ್ತಿಗಳನ್ನು ಅಧಿಕಾರದಿಂದ ದೂರ ಇಡಬೇಕು. ಸಾಂವಿಧಾನಿಕ ಸಂಸ್ಥೆಗಳು ಮತ್ತು ಆಶಯಗಳನ್ನು ಬುಡಮೇಲು ಮಾಡುವ ಮನಸ್ಥಿತಿಯ ವ್ಯಕ್ತಿಗಳನ್ನು ಅಧಿಕಾರದಿಂದ ಮುಲಾಜಿಲ್ಲದೆ ದೂರ ಇಡಬೇಕು' ಎಂದು ಕರೆ ಕೊಟ್ಟರು.



ಬೆಂಗಳೂರಿನ ಫೀಲ್ಡ್ ಮಾರ್ಷಲ್ ಮಾಣೆಕ್ ಷಾ ಪರೇಡ್ ಮೈದಾನದಲ್ಲಿ ಗುರುವಾರ 78ನೇ ಸ್ವಾತಂತ್ರ್ಯ ದಿನಾಚರಣೆ ಅಂಗವಾಗಿ ವಿದ್ಯಾರ್ಥಿಗಳು 'ಸರ್ಕಾರದ ಐದು ಮಹತ್ವಾಕಾಂಕ್ಷಿ ಗ್ಯಾರಂಟಿ ಯೋಜನೆಗಳು' ಎಂಬ ನೃತ್ಯರೂಪಕ ಪ್ರದರ್ಶಿಸಿದರು —ಪ್ರಜಾವಾಣಿ ಚಿತ್ರ/ ಎಂ.ಎಸ್.ಮಂಜುನಾಥ್

'ಪಾಲು ಕೊಡಲು ಸತಾಯಿಸುತ್ತಿರುವ ಕೇಂದ್ರ'

'ದೇಶದ ಒಕ್ಕೂಟ ವ್ಯವಸ್ಥೆಯಲ್ಲಿ ಕೇಂದ್ರ ಮತ್ತು ರಾಜ್ಯಗಳ ಸಂಬಂಧವನ್ನು ಸಂವಿಧಾನವು ಸ್ಪಷ್ಟಪಡಿಸಿದೆ. ಸಂವಿಧಾನದ ಆಶಯಗಳನ್ನು ನಿರ್ಲಕ್ಷಿಸಿ, ರಾಜ್ಯಗಳಿಗೆ ದೊರೆಯಬೇಕಾದ ಹಣಕಾಸಿನ ಪಾಲನ್ನು ನೀಡದೇ ಕೇಂದ್ರ ಸರ್ಕಾರ ಸತಾಯಿಸುತ್ತಿದೆ' ಎಂದು ಸಿದ್ದರಾಮಯ್ಯ ದೂರಿದರು.

'ಜನಕಲ್ಯಾಣ ಕಾರ್ಯಕ್ರಮ ಅನುಷ್ಠಾನಗೊಳಿಸುವುದು ರಾಜ್ಯಗಳ ಜವಾಬ್ದಾರಿ. ಅವುಗಳಿಗೆ ಪೂರಕವಾಗಿ ಸಂಪನ್ಮೂಲ ಒದಗಿಸುವುದು ಕೇಂದ್ರದ ಹೊಣೆಗಾರಿಕೆ. ಆದರೆ, ಕೇಂದ್ರ ಈ ಆಶಯದಿಂದ ದೂರ ಸರಿಯುತ್ತಿದೆ. ರಾಜ್ಯಗಳಿಗೆ ಅನುದಾನ ಹಂಚಿಕೆಯಲ್ಲಿ ತಾರತಮ್ಯ ಮಾಡುತ್ತಿದೆ' ಎಂದು ಕಿಡಿಕಾರಿದರು.



'ಕೇಂದ್ರದಿಂದ ನ್ಯಾಯಯುತವಾಗಿ ಬರಬೇಕಾದ ಪರಿಹಾರದ ಮೊತ್ತ ಪಡೆಯಲು ನ್ಯಾಯಾಲಯದ ಮೊರೆಹೋಗುವ ಅನಿವಾರ್ಯ ಎದುರಾಗಿದೆ. ಈ ಬೆಳವಣಿಗೆ ಜನಹಿತಕ್ಕೆ ಒಳ್ಳೆಯದಲ್ಲ. ಭವಿಷ್ಯದಲ್ಲಾದರೂ ಕೇಂದ್ರ ಸರ್ಕಾರವು ರಾಜ್ಯಗಳಿಗೆ ನ್ಯಾಯಯುತ ಅನುದಾನ ನೀಡಬೇಕು' ಎಂದು ಆಗ್ರಹಿಸಿದರು.

ಸುದ್ದಿ 2 ನಿಮಿಷ

'ಒಕ್ಕಲಿಗ ನಾಯಕರಿಗೆ ತಿಳಿಹೇಳಿ'

ಮೈಸೂರು: 'ಈಚಿನ ದಿನಗಳಲ್ಲಿ ಒಕ್ಕಲಿಗ ನಾಯಕರ ನಡುವಿನ ಸಾರ್ವಜನಿಕ ಸಂವಾದ ಗೌರವ ತರುವಂತೆ ಇಲ್ಲ. ಮಠಾಧೀಶರು ತಮ್ಮ ಧಾರ್ಮಿಕ ಅಧಿಕಾರ ಬಳಸಿ ತಿಳಿಹೇಳಿ ಅಂತ್ಯ ಹಾಡಬೇಕು' ಎಂದು ಚಿತ್ರಕಲಾ ಪರಿಷತ್ತು ಅಧ್ಯಕ್ಷ ಬಿ.ಎಲ್. ಶಂಕರ್ ಕೋರಿದರು.

'ಫಸ್ಟ್ ಸರ್ಕಲ್' ಸೊಸೈಟಿಯು ನಗರದಲ್ಲಿ ಗುರುವಾರ ಆಯೋಜಿಸಿದ್ದ ಒಕ್ಕಲಿಗ ಹೂಡಿಕೆದಾರರ ಸಮಾವೇಶದ ಸಮಾರೋಪ ಕಾರ್ಯಕ್ರಮದಲ್ಲಿ ಅವರು ಮಾತನಾಡಿ, 'ಸದಾ ಪ್ರಚಾರದಲ್ಲಿರಬೇಕು ಎಂಬ ಧೋರಣೆಯಿಂದ ಈ ಸಮಸ್ಯೆಯಾಗಿದೆ. ರಾಜಕಾರಣಿಗಳು ಹಳಿ ತಪ್ಪಿದ್ದು, ಅವರನ್ನು ಸರಿದಾರಿಗೆ ತರುವ ಅಗತ್ಯವಿದೆ' ಎಂದರು.

'ಇತರರು ನಮ್ಮ ಸಮುದಾಯದ ಬಗ್ಗೆ ಲೇವಡಿ ಮಾಡಬಾರದು. ಹೀಗಾಗಿ ನಿರ್ಮಲಾನಂದನಾಥ ಸ್ವಾಮೀಜಿ ಹಾಗೂ ನಂಜಾವಧೂತ ಶ್ರೀಗಳು ಮಧ್ಯಸ್ಥಿಕೆ ವಹಿಸಬೇಕು' ಎಂದು ಕೋರಿದರು.

'1952ರಿಂದ ಈವರೆಗೆ ರಾಜ್ಯದಲ್ಲಿ ಒಕ್ಕಲಿಗ ಸಮುದಾಯದ ಸಾಕಷ್ಟು ರಾಜಕಾರಣಿಗಳು ಉತ್ತಮ ಕೆಲಸ ಮಾಡಿ, ಹೆಸರು ಪಡೆದಿದ್ದಾರೆ. ವಾದ-ಪ್ರತಿವಾದಗಳು ನಡೆಯಲಿ. ಯಾರಿಗಾದರೂ ಅವಕಾಶ ನೀಡಲಿ. ಜನರ ತೀರ್ಮಾನಕ್ಕೆ ತಲೆಬಾಗೋಣ. ಆದರೆ ವೈಯಕ್ತಿಕ ನೆಲೆಗಟ್ಟಿನಲ್ಲಿ ಒಬ್ಬರನ್ನೊಬ್ಬರು ದೂಷಿಸುವುದು ಬೇಡ' ಎಂದು ಸಲಹೆ ನೀಡಿದರು.



ಅಮಾನತುಗೊಂಡ ಪೊಲೀಸ್‌ಗೆ ಪದಕ

ಮೈಸೂರು: ಪೊಲೀಸ್ ಇಲಾಖೆಯ 2023 ನೇ ಸಾಲಿನ ಮುಖ್ಯಮಂತ್ರಿ ಪದಕಕ್ಕೆ ಆಯ್ಕೆಯಾದವರ ಪಟ್ಟಿ ಬಿಡುಗಡೆಗೊಂಡಿದ್ದು, ಈಚೆಗೆ ಕರ್ತವ್ಯ ಲೋಪದ ಆರೋಪದಲ್ಲಿ ಅಮಾನತುಗೊಂಡಿರುವ ಸಿಸಿಬಿ ಘಟಕದ ಹೆಡ್ ಕಾನ್‌ಸ್ಟೆಬಲ್ ಪೇದೆ ಸಲೀಂ ಪಾಷಾ ಅವರಿಗೂ ಪದಕ ದೊರಕಿದೆ.

ಮೇಟಗಳ್ಳಿ ಹಾಗೂ ವಿಜಯನಗರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಕಳವು ಹಾಗೂ ಗಾಂಜಾ ಪ್ರಕರಣಗಳಲ್ಲಿ ಆರೋಪಿಗಳು ಹಾಗೂ ಅವರ ಸಂಬಂಧಿಕರ ಜೊತೆಗೆ ಫೋನ್ ಮೂಲಕ ಸಂಪರ್ಕಿಸಿರುವುದು ಸಾಬೀತಾಗಿದ್ದು, ವಿಚಾರಣೆ ನಡೆಯುತ್ತಿರುವಂತೆಯೇ ರಾಜ್ಯ ಪೊಲೀಸ್ (ಶಿಸ್ತು ನಡಾವಳಿ) ಅನ್ವಯ ಜುಲೈ 12ರಂದು ಸಲೀಂ ಅವರನ್ನು ಅಮಾನತುಗೊಳಿಸಿ ಸಂಚಾರ ಮತ್ತು ಅಪರಾಧ ವಿಭಾಗದ ಡಿಸಿಪಿ ಜಾಹ್ನವಿ ಆದೇಶಿಸಿದ್ದರು.

'2022ರಲ್ಲಿ ಅಂದಿನ ನಗರ ಪೊಲೀಸ್ ಆಯುಕ್ತ ರಮೇಶ್ ಬಾನೋತ್ ಶಿಫಾರಸು ಮಾಡಿದ್ದರು. ಆಗ ಪ್ರಶಸ್ತಿ ಸಿಕ್ಕಿರಲಿಲ್ಲ. 2023ರಲ್ಲೂ ನನ್ನ ಹೆಸರು ಸೂಚಿಸಿದ್ದು, ಪದಕ ದೊರೆತಿದೆ. ತಿಂಗಳ ಹಿಂದೆಯಷ್ಟೇ ಡಿಸಿಪಿ ಜಾಹ್ನವಿ ಅವರು ಸೂಚನೆ ಇಲ್ಲದೆ ನನ್ನನ್ನು ಅಮಾನತು ಮಾಡಿದ್ದಾರೆ' ಎಂದು ಸಲೀಂ ಪಾಷಾ 'ಪ್ರಜಾವಾಣಿ'ಗೆ ತಿಳಿಸಿದರು.

'ಗೆಜೆಟೆಡ್ ಪ್ರೊಬೆಷನರಿ ಪರೀಕ್ಷೆ ಮುಂದೂಡಿ'

ಬೆಂಗಳೂರು: ಗೆಜೆಟೆಡ್ ಪ್ರೊಬೆಷನರಿ ಹುದ್ದೆಗಳಿಗೆ ಕರ್ನಾಟಕ ಲೋಕಸೇವಾ ಆಯೋಗವು, ಇದೇ 27ರ ಮಂಗಳವಾರ ಕೆಲಸದ ದಿನ ನಡೆಸಲು ಉದ್ದೇಶಿಸಿರುವ ಪೂರ್ವಭಾವಿ ಪರೀಕ್ಷೆಯನ್ನು ಮುಂದೂಡಲೇಬೇಕು ಎಂದು ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಆಗ್ರಹಿಸಿದ್ದಾರೆ.

ಕೆಲಸದ ದಿನ ಪರೀಕ್ಷೆ ನಡೆಸುತ್ತಿರುವುದರಿಂದ ಎಲ್ಲ ಅಭ್ಯರ್ಥಿಗಳಿಗೂ ಪರೀಕ್ಷೆಗೆ ಹಾಜರಾಗಲು ತೊಡಕಾಗುತ್ತದೆ. ಹೀಗಾಗಿ ಪರೀಕ್ಷೆಯನ್ನು ಮುಂದೂಡಿ ಎಂದು ಹಲವು ಆಕಾಂಕ್ಷಿಗಳು ಮುಖ್ಯಮಂತ್ರಿಗೆ ಪತ್ರ ಬರೆದಿದ್ದರು. ಪರೀಕ್ಷೆ ಮುಂದೂಡಿ ಎಂದು ಸಾಮಾಜಿಕ ಜಾಲತಾಣಗಳಲ್ಲೂ '#postponekas' ಹ್ಯಾಷ್‌ಟ್ಯಾಗ್‌ನಲ್ಲಿ ಅಭಿಯಾನ ನಡೆಸಲಾಗುತ್ತಿದೆ. ಈಗ ಇದಕ್ಕೆ ಬೆಂಬಲ ಸೂಚಿಸಿ ಕುಮಾರಸ್ವಾಮಿ ಗುರುವಾರ 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

ಅಕ್ಕಪಕ್ಕ ಕುಳಿತ ಸಿ.ಪಿ ಯೋಗೇಶ್ವರ್, ಡಿ.ಕೆ. ಶಿವಕುಮಾರ್ • ಕನಕಪುರದಲ್ಲಿ ಕಚೇರಿ ತೆರೆದ ಬಿಜೆಪಿ ಸಂಸದ

ಹೊಸ ರಾಜಕೀಯ ಸಾಧ್ಯತೆ: ಸಾಕ್ಷಿಯಾದ ಸ್ವಾತಂತ್ರ್ಯ ದಿನ

• ಓದೇಶ ಸಕಲೇಶಪುರ

ರಾಮನಗರ: ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮತ್ತು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ನಡುವಿನ ಜಿದ್ದಾಜಿದ್ದಿ ರಾಜಕಾರಣದ ಛಾಳ ಛಾಯೆ ಗುರುವಾರ ಸ್ವಾತಂತ್ರ್ಯ ದಿನಾಚರಣೆ ವೇಳೆ ಕಂಡುಬಂತು.

ಬೆಂಗಳೂರು ಜಿಲ್ಲಾ ಉಸ್ತುವಾರಿ ಸಚಿವರೂ ಆಗಿರುವ ಡಿ.ಕೆ. ಶಿವಕುಮಾರ್ ಅವರು ತಾಲ್ಲೂಕು ಮಟ್ಟದಲ್ಲಿ ಧ್ವಜಾರೋಹಣ ನೆರವೇರಿಸುವ ಮೂಲಕ ಹೊಸ ಪದ್ಧತಿಯೊಂದಕ್ಕೆ ನಾಂದಿ ಹಾಡಿದರು.

ಇತ್ತೀಚಿನ ವರ್ಷಗಳಲ್ಲಿ ಶಾಸಕರ ಗೈರು ಹಾಜರಿಯಲ್ಲೇ ನಡೆಯುತ್ತಿದ್ದ ತಾಲ್ಲೂಕಿನ ಸ್ವಾತಂತ್ರ್ಯ ದಿನಾಚರಣೆಗೆ ಖುದ್ದು ಉಪ ಮುಖ್ಯಮಂತ್ರಿ ಹಾಜರಿ ಹೊಸ ರಾಜಕೀಯ ಬೆಳವಣಿಗೆಗಳಿಗೂ ದಿಕ್ಸೂಚಿಯಾಯಿತು. ಅತ್ತ ಶಿವಕುಮಾರ್ ತವರು ಕ್ಷೇತ್ರ ಕನಕಪುರದಲ್ಲಿ ನಡೆದ ಸ್ವಾತಂತ್ರ್ಯ ದಿನಾಚರಣೆಯಲ್ಲಿ ಬಿಜೆಪಿ ಸಂಸದ ಡಾ. ಸಿ.ಎನ್. ಮಂಜುನಾಥ್ ಭಾಗವಹಿಸಿ ಅಚ್ಚರಿ ಮೂಡಿಸಿದರು.

ಮೈತ್ರಿ ಅಭ್ಯರ್ಥಿ ಆಕಾಂಕ್ಷಿ, ವಿಧಾನ ಪರಿಷತ್ ಸದಸ್ಯ ಸಿ.ಪಿ. ಯೋಗೇಶ್ವರ್ ಅವರು ಚನ್ನಪಟ್ಟಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ಉಪಮುಖ್ಯಮಂತ್ರಿ ಜೊತೆ ವೇದಿಕೆ ಹಂಚಿಕೊಂಡರು. ಕಾರ್ಯಕ್ರಮ ಮುಗಿಯುವರೆಗೂ ಶಿವಕುಮಾರ್ ಪಕ್ಕ ಕುಳಿತುಕೊಳ್ಳುವ ಮೂಲಕ ಯೋಗೇಶ್ವರ್ ಅವರು ಮೈತ್ರಿ ನಾಯಕರಿಗೆ ಪರೋಕ್ಷ ಸಂದೇಶ ರವಾನಿಸಿದ್ದಾರೆ ಎಂದು ಇಂದಿನ ಬೆಳವಣಿಗೆಯನ್ನು ವ್ಯಾಖ್ಯಾನಿಸಲಾಗುತ್ತಿದೆ. ಕಾಂಗ್ರೆಸ್ ಹಿಡಿತವಿರುವ ಹಾರೋಹಳ್ಳಿ ತಾಲ್ಲೂಕಿನ ಜೊತೆಗೆ ಕನಕಪುರದಲ್ಲಿ ನಡೆದ ಸ್ವಾತಂತ್ರ್ಯ ದಿನಾಚರಣೆ ಕಾರ್ಯಕ್ರಮದಲ್ಲಿ ಭಾಗವಹಿಸಿರುವ ಸಂಸದ ಡಾ. ಮಂಜುನಾಥ್ ಅವರು ಕನಕಪುರದಲ್ಲಿ ತಮ್ಮ ಕಚೇರಿ ತೆರೆದಿದ್ದಾರೆ. ಇದು ಕನಕಪುರದಲ್ಲಿ ನಿಧಾನವಾಗಿ ಮೈತ್ರಿ ಬಲ ಹೆಚ್ಚಿಸಿಕೊಳ್ಳುವ ತಂತ್ರವಾಗಿದೆ ಎಂದು ಸ್ಥಳೀಯರು ವಿಶ್ಲೇಷಿಸುತ್ತಿದ್ದಾರೆ.



ಚನ್ನಪಟ್ಟಣ ತಾಲ್ಲೂಕು ಆಡಳಿತ ಆಯೋಜಿಸಿದ್ದ ಸ್ವಾತಂತ್ರ್ಯ ದಿನಾಚರಣೆ ಕಾರ್ಯಕ್ರಮದ ವೇದಿಕೆಯಲ್ಲಿ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮತ್ತು ಬಿಜೆಪಿಯ ವಿಧಾನ ಪರಿಷತ್ ಸದಸ್ಯ ಸಿ.ಪಿ. ಯೋಗೇಶ್ವರ್ ಅವರು ಒಟ್ಟಿಗೆ ಕಾಣಿಸಿಕೊಂಡು ಗಮನ ಸೆಳೆದರು

ಅರ್ಧಕ್ಕೆ ಕ್ಷೇತ್ರ ತೊರೆದು ಅವಮಾನ: ಡಿಕೆಶಿ ವ್ಯಂಗ್ಯ

'ಚನ್ನಪಟ್ಟಣದಲ್ಲಿ ಧ್ವಜ ಹಾರಿಸಲು ಜನಪ್ರತಿನಿಧಿ ಇಲ್ಲದ ಕಾರಣ ನಿಮ್ಮ ಮನೆ ಮಗನಾಗಿ ನಾನು ಇಲ್ಲಿಗೆ ಬಂದಿದ್ದೇನೆ. ನಿಮ್ಮನ್ನು ಬಿಟ್ಟು ಹೋಗುವ ಪ್ರಶ್ನೆಯೇ ಇಲ್ಲ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ಸ್ವಾತಂತ್ರ್ಯ ದಿನಾಚರಣೆ ಕಾರ್ಯಕ್ರಮ ಭಾಷಣದಲ್ಲಿ ಜೆಡಿಎಸ್ ನಾಯಕ ಎಚ್.ಡಿ. ಕುಮಾರಸ್ವಾಮಿ ವಿರುದ್ಧ ಪರೋಕ್ಷ ವಾಗ್ದಾಳಿ ನಡೆಸಿದರು.

'ಧ್ವಜವನ್ನು ಅರ್ಧಕ್ಕೆ ಹಾರಿಸುವುದು ಹೇಗೆ ರಾಷ್ಟ್ರಧ್ವಜಕ್ಕೆ ಮಾಡುವ ಅಪಮಾನವೋ, ಅದೇ ರೀತಿ ಜನರಿಂದ ಆಯ್ಕೆಯಾದ ವ್ಯಕ್ತಿ ಅರ್ಧಕ್ಕೆ ಬಿಟ್ಟು ಹೋಗುವುದು ಜನರಿಗೆ ಮಾಡುವ ಅಪಮಾನ' ಎಂದು ಹೋಲಿಕೆ ಮಾಡಿದರು.

ಗುಲಾಮಗಿರಿಯಿಂದ ಹೊರಬಂದ ದಿನವೇ ಸ್ವಾತಂತ್ರ್ಯ. ಇಂದು ಕೇವಲ ಧ್ವಜಾರೋಹಣವಾಗಿಲ್ಲ. ಬದಲಿಗೆ, ಚನ್ನಪಟ್ಟಣ ಕ್ಷೇತ್ರದ ಅಭಿವೃದ್ಧಿಯ ಆರೋಹಣವಾಗಿದೆ ಎಂದು ಬಣ್ಣಿಸಿದರು.

'ಚನ್ನಪಟ್ಟಣಕ್ಕೆ ನಾನೇ ಅಭ್ಯರ್ಥಿ'

ನೆಲಮಂಗಲ: 'ಚನ್ನಪಟ್ಟಣಕ್ಕೆ ನಾನೇ ಅಭ್ಯರ್ಥಿ' ಎಂದು ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದರು.

'ಚನ್ನಪಟ್ಟಣ ಕ್ಷೇತ್ರದ ಉಪಚುನಾವಣೆಯಲ್ಲಿ ಅಭ್ಯರ್ಥಿ ಯಾರಾಗಲಿದ್ದಾರೆ' ಎನ್ನುವ ಸುದ್ದಿಗಾರರ ಪ್ರಶ್ನೆಗೆ ಅವರು ಈ ರೀತಿ ಪ್ರತಿಕ್ರಿಯಿಸಿದರು.

'ಕಳೆದ ಐದು ವರ್ಷಗಳಿಂದ ರಾಮನಗರದಲ್ಲಿ ನಾನು ಧ್ವಜಾರೋಹಣ ಮಾಡಿದ್ದೇನೆ. ಚನ್ನಪಟ್ಟಣದ ಬಗ್ಗೆ ಅಧಿಕಾರಿಗಳ ಬಳಿ ಕೇಳಿದಾಗ, ಆರು ವರ್ಷಗಳಿಂದ ಅಲ್ಲಿಗೆ ಬಂದು ಯಾರೂ ಧ್ವಜಾರೋಹಣ ನಡೆಸಿಲ್ಲ ಎಂದರು. ಅವರಿಗೆ ದೇಶದ ಮೇಲೆ ವಿಶ್ವಾಸವಿಲ್ಲ ಎಂದೆನಿಸುತ್ತದೆ. ಅವರು ಏನಾದರು ಮಾಡಿಕೊಳ್ಳಲಿ, ನಾನು ನನ್ನ ಕರ್ತವ್ಯ ಮಾಡಿದ್ದೇನೆ' ಎಂದು ಪರೋಕ್ಷವಾಗಿ ಎಚ್.ಡಿ. ಕುಮಾರಸ್ವಾಮಿ ಅವರಿಗೆ ತಿರುಗೇಟು ನೀಡಿದರು.



ಸ್ವಾತಂತ್ರ್ಯೋತ್ಸವ ದಕ್ಷಿಣ ಕನ್ನಡ ಜಿಲ್ಲೆ ಮೂಡುಬಿದಿರೆಯ ಆಳ್ವಾಸ್ ಕಾಲೇಜಿನಲ್ಲಿ ನಡೆದ ಸ್ವಾತಂತ್ರ್ಯೋತ್ಸವದಲ್ಲಿ 15 ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು

'ಗ್ಯಾರಂಟಿ'ಗೆ ಇನ್ನಷ್ಟು ಬಲ: ಸಿ.ಎಂ

ಒಂದನೇ ಪುಟದಿಂದ...

'ಗೃಹಲಕ್ಷ್ಮಿ ಯೋಜನೆಯಡಿ ಫಲಾನುಭವಿ ಕುಟುಂಬಗಳ ಯಜಮಾನಿ ಮಹಿಳೆಯರಿಗೆ ಈಗ ತಿಂಗಳಿಗೆ ₹2 ಸಾವಿರ ನೆರವು ನೀಡುತ್ತಿದ್ದೇವೆ. ಈ ಫಲಾನುಭವಿಗಳನ್ನು ಸ್ತ್ರೀಶಕ್ತಿ ಮಹಿಳಾ ಸ್ವಸಹಾಯ ಸಂಘಗಳಾಗಿ ಸಂಘಟಿಸಿ, ಅವರಿಗೆ ವಿವಿಧ ಹಣಕಾಸು ಸಂಸ್ಥೆಗಳಿಂದ ಆರ್ಥಿಕ ನೆರವು ಒದಗಿಸಿ ವರಮಾನ ತರುವ ಚಟುವಟಿಕೆಗಳಲ್ಲಿ ತೊಡಗಿಸುವ ಯೋಚನೆಯಿದೆ. ಯುವನಿಧಿಯ ಫಲಾನುಭವಿಗಳಿಗೆ ಕೌಶಲಾಭಿವೃದ್ಧಿ ತರಬೇತಿ ನೀಡಲಾಗುವುದು' ಎಂದರು.

'ಐದು ಗ್ಯಾರಂಟಿಗಳಿಂದ ಪ್ರತಿ ಫಲಾನುಭವಿ ಕುಟುಂಬಕ್ಕೆ ತಿಂಗಳಿಗೆ ಸರಾಸರಿ ₹4 ಸಾವಿರದಿಂದ ₹5 ಸಾವಿರ ಪ್ರತ್ಯಕ್ಷ-ಪರೋಕ್ಷವಾಗಿ ಲಭಿಸುತ್ತಿದೆ. ಇಂತಹ ಯೋಜನೆ ಜಾರಿಗೆ ತಂದ ಹೆಮ್ಮೆಯಿದೆ' ಎಂದು ಹೇಳಿದರು.

'ಪಂಚ ಗ್ಯಾರಂಟಿ ಯೋಜನೆಗಳಿಂದ ರಾಜ್ಯ ದಿವಾಳಿಯಾಗಲಿದೆ ಎಂದು ಭವಿಷ್ಯ ನುಡಿದವರಿಗೆ ರಾಜ್ಯದಲ್ಲಿ ಆರ್ಥಿಕ ಬೆಳವಣಿಗೆ ಸಾಧಿಸಿ ತೋರಿಸುವ ಮೂಲಕ ಉತ್ತರಿಸಿದ್ದೇವೆ' ಎಂದು ಮುಖ್ಯಮಂತ್ರಿ ತಿರುಗೇಟು ನೀಡಿದರು.

'ಶಕ್ತಿ' ಯೋಜನೆ ಅಡಿ ಮಹಿಳೆಯರು 270 ಕೋಟಿ ಟ್ರಿಪ್ ಉಚಿತ ಪ್ರಯಾಣ ಸೌಲಭ್ಯ ಪಡೆಯುವ ಮೂಲಕ ₹6,541 ಕೋಟಿಯಷ್ಟು ಪ್ರಯಾಣ ವೆಚ್ಚ ಉಳಿತಾಯ ಮಾಡಿದ್ದಾರೆ. 'ಗೃಹಲಕ್ಷ್ಮಿ' ಯೋಜನೆಯಡಿ 1.20 ಕೋಟಿ ಮಹಿಳೆಯರಿಗೆ ಈವರೆಗೆ ₹25,259 ಕೋಟಿ ನೇರವಾಗಿ ಅವರ ಬ್ಯಾಂಕ್ ಖಾತೆಗೆ ವರ್ಗಾಯಿಸಲಾಗಿದೆ. 'ಅನ್ನಭಾಗ್ಯ' ಯೋಜನೆಯಡಿ ಹೆಚ್ಚುವರಿ ಅಕ್ಕಿಯ ಬದಲಿಗೆ 1.16 ಕೋಟಿ ಪಡಿತರ ಚೀಟಿಗಳ 4.8 ಕೋಟಿ ಫಲಾನುಭವಿಗಳಿಗೆ ₹7,763 ಕೋಟಿ ನೆರವನ್ನು ನೇರವಾಗಿ ವರ್ಗಾಯಿಸಲಾಗಿದೆ ಎಂದು ಮಾಹಿತಿ ನೀಡಿದರು.

ದುರ್ಬಲ ವರ್ಗದವರಿಗೆ ಸಾಮಾಜಿಕ ಭದ್ರತೆ ಒದಗಿಸುವ ವಿವಿಧ ಪಿಂಚಣಿಗಳಡಿ 78.64 ಲಕ್ಷ ಫಲಾನುಭವಿಗಳು ನೇರ ನಗದು ವರ್ಗಾವಣೆಯ ರೂಪದಲ್ಲಿ ನೆರವು ಪಡೆಯುತ್ತಿದ್ದಾರೆ ಎಂದು ವಿವರಿಸಿದರು.

'ಉತ್ಪನ್ನಗಳ ರಫ್ತಿನಲ್ಲೂ ರಾಜ್ಯ ಗಣನೀಯ ಸಾಧನೆ ತೋರಿದೆ. ಕಳೆದ ಸಾಲಿಗೆ ಹೋಲಿಸಿದರೆ, ಶೇ 5.20ರಷ್ಟು ಪ್ರಗತಿ ಸಾಧಿಸಿದೆ. ವಿದೇಶಿ ಬಂಡವಾಳ ಹೂಡಿಕೆಯಲ್ಲಿ ಮೂರನೇ ಸ್ಥಾನದಲ್ಲಿದೆ. ಬಂಡವಾಳ ಹೂಡಿಕೆದಾರರ ಸಮಾವೇಶವನ್ನು ಫೆಬ್ರುವರಿಯಲ್ಲಿ ಆಯೋಜಿಸಲಾಗುತ್ತಿದೆ' ಎಂದು ಹೇಳಿದರು.

ಸರ್ಕಾರಿ ಪ್ರಾಥಮಿಕ ಶಾಲೆಗಳಿಗೆ 11,494 ಶಿಕ್ಷಕರನ್ನು ಭರ್ತಿ ಮಾಡಲಾಗಿದೆ. ಬಾಕಿಯಿರುವ ಹುದ್ದೆಗಳನ್ನೂ ಹಂತ ಹಂತವಾಗಿ ಭರ್ತಿ ಮಾಡಿಕೊಳ್ಳುತ್ತೇವೆ. ವಿವಿಧ ಇಲಾಖೆಗಳಲ್ಲಿ ಒಟ್ಟು 11,512 ಹುದ್ದೆಗಳ ನೇಮಕಾತಿ ಪ್ರಕ್ರಿಯೆ ನಡೆಯುತ್ತಿದೆ ಎಂದು ಹೇಳಿದರು.

ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಗ್ಯಾರಂಟಿ ಯೋಜನೆಗಳ ಕುರಿತು ನೃತ್ಯರೂಪಕ ಪ್ರಸ್ತುತ ಪಡಿಸಲಾಯಿತು. ಈ ನೃತ್ಯರೂಪಕದಲ್ಲಿ 400ಕ್ಕೂ ಹೆಚ್ಚು ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

ಭೂ ಕುಸಿತ ತಡೆಗೆ ₹ 100 ಕೋಟಿ

ಪಶ್ಚಿಮ ಘಟ್ಟಗಳ ವ್ಯಾಪ್ತಿಯಲ್ಲಿರುವ ಚಿಕ್ಕಮಗಳೂರು, ದಕ್ಷಿಣ ಕನ್ನಡ, ಉಡುಪಿ, ಉತ್ತರ ಕನ್ನಡ, ಕೊಡಗು, ಶಿವಮೊಗ್ಗ, ಹಾಸನ ಜಿಲ್ಲೆಗಳಲ್ಲಿನ 250 ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯಲ್ಲಿ 1,351 ಭೂಕುಸಿತ ಸಂಭವನೀಯ ಸ್ಥಳಗಳಿವೆ ಎಂಬುದನ್ನು ಭೂವೈಜ್ಞಾನಿಕ ಸರ್ವೇಕ್ಷಣಾ ಸಂಸ್ಥೆ ಗುರುತಿಸಿದೆ. ಅಲ್ಲಿ ಭೂಕುಸಿತ ತಡೆಗಟ್ಟಲು ₹100 ಕೋಟಿ ವೆಚ್ಚ ಮಾಡಲಾಗುತ್ತಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

'ಗ್ಯಾರಂಟಿ' ದೇಶದ ಅಭಿವೃದ್ಧಿಗೆ ಕೊಡುಗೆ: ಗೆಹಲೋತ್



ಒಂದನೇ ಪುಟದಿಂದ...
ರಾಜ್ಯದ ಸರ್ವತೋಮುಖ ಮತ್ತು ಸುಸ್ಥಿರ ಅಭಿವೃದ್ಧಿ ಸಾಧಿಸುವ ಗುರಿಯೊಂದಿಗೆ ಮೂಲ ಸೇವೆಗಳಿಗೆ ಪ್ರವೇಶ ಸೇರಿದಂತೆ ವಿವಿಧ ನವೀನ ಮತ್ತು ಅಂತರ್ಗತ ಕಾರ್ಯಕ್ರಮಗಳನ್ನು ಸರ್ಕಾರ ಅನುಷ್ಠಾನಗೊಳಿಸುತ್ತಿದೆ ಎಂದು ತಿಳಿಸಿದರು.

ರಾಜ್ಯದಲ್ಲಿ ಎರಡು ದಿನ ಭಾರಿ ಮಳೆ ಸಾಧ್ಯತೆ

ಬೆಂಗಳೂರು: ರಾಜ್ಯದ ಮಲೆನಾಡು, ಕರಾವಳಿ ಹಾಗೂ ಉತ್ತರ ಒಳನಾಡು ಭಾಗದ ಹಲವು ಜಿಲ್ಲೆಗಳಲ್ಲಿ ಶುಕ್ರವಾರ ಮತ್ತು ಶನಿವಾರ ಗುಡುಗು ಸಹಿತ ಧಾರಾಕಾರ ಮಳೆಯಾಗುವ ಸಾಧ್ಯತೆ ಇದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಶುಕ್ರವಾರ ಶಿವಮೊಗ್ಗ, ಚಿಕ್ಕಮಗಳೂರು, ಚಿತ್ರದುರ್ಗ ಹಾಗೂ ದಾವಣಗೆರೆ ಜಿಲ್ಲೆಗಳಿಗೆ 'ಆರೆಂಜ್ ಅಲರ್ಟ್' ನೀಡಲಾಗಿದೆ. ಯಾದಗಿರಿ, ರಾಯಚೂರು, ಕೊಪ್ಪಳ, ಗದಗ, ಬಳ್ಳಾರಿ, ಉತ್ತರ ಕನ್ನಡ, ಉಡುಪಿ, ದಕ್ಷಿಣ ಕನ್ನಡ, ಕೊಡಗು, ಮೈಸೂರು, ಹಾಸನ, ತುಮಕೂರು ಜಿಲ್ಲೆಗಳಿಗೆ 'ಯೆಲ್ಲೊ ಅಲರ್ಟ್' ಮುನ್ನೆಚ್ಚರಿಕೆ ಕೊಡಲಾಗಿದೆ.

ಹಾಸನ, ಕೊಡಗು, ಮೈಸೂರು ಹಾಗೂ ಚಿಕ್ಕಬಳ್ಳಾಪುರ ಜಿಲ್ಲೆಗಳಿಗೆ ಶನಿವಾರ 'ಯೆಲ್ಲೊ ಅಲರ್ಟ್' ನೀಡಲಾಗಿದೆ.

ಬೆಂಗಳೂರಿನಲ್ಲಿ ಎರಡು ದಿನವೂ ಹಗಲು ವೇಳೆ ಭಾಗಶಃ ಮೋಡ ಕವಿದ ವಾತಾವರಣ ಇರಲಿದ್ದು, ಸಂಜೆ ಅಥವಾ ರಾತ್ರಿ ವೇಳೆ ಧಾರಾಕಾರ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ರಾಜಕಾರಣಿಗಳಿಗಿಲ್ಲ ಸಂತೃಪ್ತಿ: ಸಂತೋಷ್

ಪ್ರಜಾವಾಣಿ ವಾರ್ತೆ


ಬೆಂಗಳೂರು: ಬಹುತೇಕ ರಾಜಕಾರಣಿಗಳಿಗೆ ಸಂತೃಪ್ತಿ ಎನ್ನುವುದೇ ಇರುವುದಿಲ್ಲ. ಸಿಕ್ಕ ಸ್ಥಾನಮಾನ, ಅವಕಾಶಗಳನ್ನು ಸುದುದ್ದೇಶಕ್ಕೆ ಬಳಸಿಕೊಳ್ಳುವುದೇ ಇಲ್ಲ ಎಂದು ಬಿಜೆಪಿ ರಾಷ್ಟ್ರೀಯ ಸಂಘಟನಾ ಕಾರ್ಯದರ್ಶಿ ಬಿ.ಎಲ್. ಸಂತೋಷ್ ಹೇಳಿದರು.

ಬೆಂಗಳೂರಿನಲ್ಲಿ ಗುರುವಾರ ಹಮ್ಮಿಕೊಂಡಿದ್ದ 'ನಮೋ ವಿದ್ಯಾನಿಧಿ ವಿದ್ಯಾರ್ಥಿವೇತನ' ವಿತರಣಾ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ರಾಜಕಾರಣಿಗಳು ಅಜೀರ್ಣವಾಗುವಷ್ಟು ಆಸ್ತಿ ಸಂಪಾದನೆ ಮಾಡಲು ಹೆಚ್ಚಿನ ಗಮನ ಹರಿಸುತ್ತಾರೆ. ಆ ಮೂಲಕ ಅವರ ಮುಂದಿನ ಪೀಳಿಗೆಯನ್ನೂ ಹಾಳು ಮಾಡುತ್ತಾರೆ. ಕೆರೆಯ ನೀರನು ಕೆರೆಗೆ ಚೆಲ್ಲಿ ಎನ್ನುವ ಮನೋಭಾವ ಕಾಣದಾಗಿದೆ ಎಂದರು.

ದಾನಿಗಳ ಸಂಖ್ಯೆ ಈಚೆಗೆ ಕಡಿಮೆಯಾಗುತ್ತಿದೆ. ದಾವಣಗೆರೆಯಂತಹ ನಗರದಲ್ಲಿ ಹೆಜ್ಜೆಗೊಬ್ಬರು ದಾನಿ ಸಿಗುತ್ತಾರೆ. ಅಂತಹ ದಾನಿಗಳು ಕೊಟ್ಟ ಜಮೀನಿನಿಂದಲೇ ಅಲ್ಲಿ ಶಾಲೆ-ಕಾಲೇಜು, ಆಸ್ಪತ್ರೆ, ಧರ್ಮಛತ್ರಗಳು ತಲೆ ಎತ್ತಿವೆ. ಅಂತಹ ಮನಸ್ಥಿತಿ ಎಲ್ಲ ಜನರಲ್ಲೂ ಬರಬೇಕು. ರಾಜಕಾರಣಿಗಳು ಮೈಗೂಡಿಸಿಕೊಳ್ಳಬೇಕು ಎಂದು ಕಿವಿಮಾತು ಹೇಳಿದರು.

ಸಂಸದ ತೇಜಸ್ವಿ ಸೂರ್ಯ ಮಾತನಾಡಿ, 'ಬಹಳಷ್ಟು ಪೋಷಕರು ಆರ್ಥಿಕ ಕಾರಣಗಳಿಗಾಗಿ ತಮ್ಮ ಮಕ್ಕಳ ಶಿಕ್ಷಣವನ್ನೇ ಸ್ಥಗಿತಗೊಳಿಸಿದ್ದಾರೆ. ಹಲವು ವಿದ್ಯಾರ್ಥಿಗಳ ಕನಸು ಇಂತಹದ್ದೇ ಕಾರಣಗಳಿಗಾಗಿ ಕಮರಿಹೋದ ಸನ್ನಿವೇಶಗಳಿವೆ. ಅದಕ್ಕಾಗಿಯೇ ನಮೋ ವಿದ್ಯಾನಿಧಿ ವಿದ್ಯಾರ್ಥಿ ವೇತನ ಜಾರಿಗೊಳಿಸಲಾಗಿದೆ' ಎಂದರು.



'ಹಲವು ದಾನಿಗಳು ನೆರವಾಗಿದ್ದಾರೆ. ಇದುವರೆಗೂ ₹12 ಕೋಟಿ ವಿತರಿಸಲಾಗಿದೆ.

ಬೆಂಗಳೂರು ದಕ್ಷಿಣ ಲೋಕಸಭಾ ಕ್ಷೇತ್ರದಲ್ಲಿ ಆರ್ಥಿಕವಾಗಿ ಹಿಂದುಳಿದ ಕುಟುಂಬಗಳ ಪ್ರತಿಭಾವಂತ 200 ವಿದ್ಯಾರ್ಥಿಗಳು ಪ್ರಸಕ್ತ ವರ್ಷ ₹10 ಲಕ್ಷ ನೆರವು ಪಡೆದಿದ್ದಾರೆ. ಸಹಾಯ ಪಡೆದ ಮಕ್ಕಳು ಹೆಚ್ಚಿನ ಅಂಕಗಳನ್ನು ಗಳಿಸುವ ಮೂಲಕ ನಮ್ಮ ಪ್ರಯತ್ನಕ್ಕೆ ಹೆಚ್ಚಿನ ಬಲ ತುಂಬಿದ್ದಾರೆ' ಎಂದು ಶ್ಲಾಘಿಸಿದರು. ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ, ವಿದ್ಯಾನಿಧಿ ಟ್ರಸ್ಟಿಗಳಾದ ಎಸ್.ವಿ.ಎಸ್. ಗುಪ್ತಾ, ಗುರುಪ್ರಸಾದ್ ಮಾಕಮ್ ಉಪಸ್ಥಿತರಿದ್ದರು.

ನಿಧನ ವಾರ್ತೆ


ಮಾಜಿ ಶಾಸಕ ಎ.ಎಸ್. ಬಸವರಾಜು

ಅರಸೀಕೆರೆ (ಹಾಸನ ಜಿಲ್ಲೆ): ಮಾಜಿ ಶಾಸಕ, ಬಿಜೆಪಿ ಮುಖಂಡ ಎ.ಎಸ್. ಬಸವರಾಜು (75) ಅನಾರೋಗ್ಯದಿಂದ ಗುರುವಾರ ನಿಧನರಾದರು. ಅವರು 2004ರಿಂದ 2007 ರವರೆಗೆ ಕ್ಷೇತ್ರದ ಶಾಸಕರಾಗಿದ್ದರು. ಅವರಿಗೆ ಪತ್ನಿ, ಮೂವರು ಪುತ್ರರು ಹಾಗೂ ಒಬ್ಬ ಪುತ್ರಿ ಇದ್ದಾರೆ.



ಅಂತ್ಯಕ್ರಿಯೆ ಶುಕ್ರವಾರ ಮಧ್ಯಾಹ್ನ ಇಲ್ಲಿನ ತೋಟದಲ್ಲಿ ಲಿಂಗಾಯತ ಸಂಪ್ರದಾಯದಂತೆ ನಡೆಯಲಿದೆ ಎಂದು ಅವರ ಕುಟುಂಬ ಮೂಲಗಳು ತಿಳಿಸಿವೆ.

ಪ್ರೊ.ಎಸ್.ಬಿ. ರಂಗನಾಥ



ದಾವಣಗೆರೆ: ಇಲ್ಲಿನ ತರಳಬಾಳು ವಿದ್ಯಾಸಂಸ್ಥೆಯ ಆಡಳಿತಾಧಿಕಾರಿ, ನಿವೃತ್ತ ಪ್ರಾಚಾರ್ಯ ಪ್ರೊ.ಎಸ್.ಬಿ. ರಂಗನಾಥ (82) ಅನಾರೋಗ್ಯದಿಂದ ಗುರುವಾರ ಬೆಳಗಿನಜಾವ ನಿಧನರಾದರು.

ಮೃತರಿಗೆ ಪತ್ನಿ, ಐವರು ಪುತ್ರಿಯರು ಹಾಗೂ ಒಬ್ಬ ಪುತ್ರ ಇದ್ದಾರೆ. ಸಿರಿಗೆರೆ ತರಳಬಾಳು ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ಅಂತಿಮ ದರ್ಶನ ಪಡೆದರು. ಅವರ ಹುಟ್ಟೂರಾದ ಚನ್ನಗಿರಿ ತಾಲ್ಲೂಕಿನ ಸಿದ್ದನಮಠ ಗ್ರಾಮದಲ್ಲಿ ಸಂಜೆ ಅಂತ್ಯಕ್ರಿಯೆ ನಡೆಯಿತು.

ಶಿಕ್ಷಕ, ಪ್ರಾಧ್ಯಾಪಕ, ಪ್ರಾಚಾರ್ಯ, ಪತ್ರಕರ್ತ, ಕನ್ನಡ ಸಾಹಿತ್ಯ ಪರಿಷತ್‌ನ ಚಿತ್ರದುರ್ಗ ಮತ್ತು ದಾವಣಗೆರೆ ಜಿಲ್ಲಾ ಘಟಕಗಳ ಅಧ್ಯಕ್ಷರಾಗಿ ಸೇವೆ ಸಲ್ಲಿಸಿ ನಿವೃತ್ತರಾಗಿದ್ದರು. ಅಲ್ಲದೆ, ಇವರು ಲೇಖಕರಾಗಿ, ಅಂಕಣಕಾರರಾಗಿ ಹೆಸರಾಗಿದ್ದರು. 'ಪ್ರಜಾವಾಣಿ'ಯ 'ಚುರುಮುರಿ' ಸೇರಿ ವಿವಿಧ ಅಂಕಣಗಳಲ್ಲೂ ಇವರ ಅನೇಕ ಬರಹಗಳು ಪ್ರಕಟವಾಗಿದ್ದವು.

ವೃತ್ತಿಯಲ್ಲಿ ಕನ್ನಡ ಅಧ್ಯಾಪಕರಾಗಿದ್ದರೂ, ಪ್ರವೃತ್ತಿಯಲ್ಲಿ ಅನುವಾದಕರಾಗಿದ್ದರು. 'ಭುವನ್ ಸೋಮ್', 'ಪ್ರತಿದ್ವಂದಿ' ಮುಂತಾದ ಕಾದಂಬರಿಗಳನ್ನು, 1980ರ ದಶಕದಲ್ಲಿ ಸುದ್ದಿಯಾಗಿದ್ದ ಭಗವಾನ್ ಎಸ್. ಗಿದ್ವಾನಿ ಅವರ 'ದಿ ಸ್ವೋರ್ಡ್ ಆಫ್ ಟಿಪ್ಪು' ಕೃತಿಯನ್ನು ಕನ್ನಡಕ್ಕೆ ಅನುವಾದಿಸಿದ್ದರು. ಸಿರಿಗೆರೆ ತರಳಬಾಳು ಜಗದ್ಗುರು ಬೃಹನ್ಮಠ ಇದನ್ನು ಪ್ರಕಟಿಸಿತ್ತು.

87ನೇ ಕನ್ನಡ ಸಾಹಿತ್ಯ ಸಮ್ಮೇಳನ: ಸಚಿವ ಚಲುವರಾಯಸ್ವಾಮಿ ಹೇಳಿಕೆ

'ಮಾದರಿ ಸಮ್ಮೇಳನ'ಕ್ಕೆ ಸರ್ಕಾರದಿಂದ ಸಹಕಾರ

ಪ್ರಜಾವಾಣಿ ವಾರ್ತೆ

ಮಂಡ್ಯ: 'ಸಕ್ಕರೆ ನಾಡಿನಲ್ಲಿ ಡಿ.20,21,-22ರಂದು ನಡೆಯಲಿರುವ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನವು ರಾಜ್ಯದಾದ್ಯಂತ ಚರ್ಚೆಯಾಗಿ, ಮಾದರಿ ಸಮ್ಮೇಳನವಾಗಬೇಕು. ನುಡಿಹಬ್ಬದ ಯಶಸ್ಸಿಗೆ ಸರ್ಕಾರದ ಸಂಪೂರ್ಣ ಸಹಕಾರವಿರುತ್ತದೆ' ಎಂದು ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಹೇಳಿದರು.

ನಗರದಲ್ಲಿ ಗುರುವಾರ ನಡೆದ ಸಮ್ಮೇಳನದ ಸಮಿತಿಗಳ ಅಧ್ಯಕ್ಷರು ಮತ್ತು ಸದಸ್ಯರ ಸಭೆಯಲ್ಲಿ ಮಾತನಾಡಿ, '1974 ಮತ್ತು 1994ರಲ್ಲಿ ಇಲ್ಲಿ ಸಮ್ಮೇಳನ ನಡೆದಿತ್ತು. 2024ರ ಸಮ್ಮೇಳನವನ್ನು ಸರ್ಕಾರ, ಜಿಲ್ಲಾಡಳಿತ, ಕನ್ನಡ ಸಾಹಿತ್ಯ ಪರಿಷತ್ ಮತ್ತು ಎಲ್ಲ ಕನ್ನಡ ಮನಸುಗಳು ಒಗ್ಗೂಡಿ ಯಶಸ್ವಿಗೊಳಿಸಬೇಕು' ಎಂದರು.

'ಸಮ್ಮೇಳನಕ್ಕಾಗಿ ಸ್ವಾಗತ ಸಮಿತಿ ಸೇರಿದಂತೆ 28 ಸಮಿತಿಗಳನ್ನು ರಚಿಸಿ, ಶಾಸಕರನ್ನು ಅಧ್ಯಕ್ಷರನ್ನಾಗಿ ನೇಮಿಸಲಾಗಿದೆ. ಸಣ್ಣಪುಟ್ಟ ವ್ಯತ್ಯಾಸವಿದ್ದರೆ ಸರಿಪಡಿಸಬೇಕು. ನಾಡಿನಾದ್ಯಂತ ಜಿಲ್ಲೆಯ ಕೀರ್ತಿ ಬೆಳಗುವಂತೆ ನಾಳೆಯಿಂದಲೇ ಕಾರ್ಯೋನ್ಮುಖರಾಗಬೇಕು. ಭಿನ್ನಾಭಿಪ್ರಾಯ ಬದಿಗೊತ್ತಿ ಶ್ರಮಿಸಬೇಕು' ಎಂದರು.

ಕನ್ನಡ ಜ್ಯೋತಿ ರಥ ಯಾತ್ರೆ: 'ಸಮ್ಮೇಳನದ ಕನ್ನಡ ಜ್ಯೋತಿ ರಥ ಯಾತ್ರೆಯು ಎಲ್ಲ ಜಿಲ್ಲೆಗಳಲ್ಲಿ ಸಂಚರಿಸಲಿದೆ. ಸಮ್ಮೇಳನದ ಪ್ರಾಮುಖ್ಯತೆ ತಿಳಿಸುವ ಜತೆಗೆ ಜನರನ್ನೂ ಆಹ್ವಾನಿಸಲಿದೆ. ರಥದ ಮಾದರಿ ಸಿದ್ಧಪಡಿಸಿದ್ದು, ಶೀಘ್ರದಲ್ಲೇ ಚಾಲನೆ ನೀಡಲಾಗುವುದು' ಎಂದು ಹೆಚ್ಚುವರಿ ಜಿಲ್ಲಾಧಿಕಾರಿ ಎಚ್.ಎಲ್. ನಾಗರಾಜು ತಿಳಿಸಿದರು.

ಕಸಾಪ ಅಧ್ಯಕ್ಷ ಮಹೇಶ ಜೋಶಿ ಮಾತನಾಡಿ, 'ಕ್ರಿಸ್‌ಮಸ್ ರಜೆಯ ಸಂದರ್ಭದಲ್ಲೇ ಸಮ್ಮೇಳನ ನಡೆಯುವುದರಿಂದ ವಿದೇಶ, ಹೊರರಾಜ್ಯ ಮತ್ತು ನಾಡಿನ ಮೂಲೆ ಮೂಲೆಗಳಲ್ಲಿರುವ ಕನ್ನಡ ಮನಸುಗಳು ಬರಲು ಅನುಕೂಲವಾಗಲಿದೆ. ಹಿಂದೆ ಎಂದೂ ಇಂಥ ಸಮ್ಮೇಳನ ನಡೆದಿಲ್ಲವೆಂಬಂತೆ, ಐತಿಹಾಸಿಕ, ದಾಖಲೆ ಸೃಷ್ಟಿಸುವಂಥ ಸಮ್ಮೇಳನವಾಗಬೇಕು' ಎಂದರು.



ಮಂಡ್ಯದಲ್ಲಿ ಗುರುವಾರ ನಡೆದ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಸಭೆಯಲ್ಲಿ, 'ಕನ್ನಡ ಮಂಟಪ' ಮತ್ತು 'ಕನ್ನಡ ಜ್ಯೋತಿ' ರಥಗಳ ಮಾದರಿಗಳ ಬಗ್ಗೆ ಆದಿಚುಂಚನಗಿರಿ ಮಠದ ನಿರ್ಮಲಾನಂದನಾಥ ಸ್ವಾಮೀಜಿ, ಜಿಲ್ಲಾ ಉಸ್ತುವಾರಿ ಸಚಿವ ಎನ್. ಚಲುವರಾಯಸ್ವಾಮಿ ಅವರಿಗೆ ಕಸಾಪ ಅಧ್ಯಕ್ಷ ಮಹೇಶ ಜೋಶಿ ಮಾಹಿತಿ ನೀಡಿದರು. ಜಿಲ್ಲಾಧಿಕಾರಿ ಕುಮಾರ, ಪುರುಷೋತ್ತಮಾನಂದನಾಥ ಸ್ವಾಮೀಜಿ, ಮೀರಾ ಶಿವಲಿಂಗಯ್ಯ ಇದ್ದಾರೆ

'ಕನ್ನಡಮ್ಮನ ಮರೆಯದಿರಿ'


'ಸಾಹಿತ್ಯ ಸಮ್ಮೇಳನ ನಮ್ಮ ತಾಯಿಯ ಹಬ್ಬ. ಅಸ್ಮಿತೆ, ಶಕ್ತಿ ತಂದುಕೊಟ್ಟ ಭಾಷೆಯ ಹಬ್ಬ. ಕನ್ನಡಮ್ಮನನ್ನು ಮರೆತರೆ ಒಳ್ಳೆಯದಾಗುವುದಿಲ್ಲ' ಎಂದು ಆದಿಚುಂಚನಗಿರಿ ಪೀಠಾಧ್ಯಕ್ಷ ನಿರ್ಮಲಾನಂದನಾಥ ಸ್ವಾಮೀಜಿ ಅಭಿಪ್ರಾಯಪಟ್ಟರು.

'ನಮ್ಮ ಭಾಷೆ ನಮಗೇನು ಕೊಡುತ್ತದೆ ಎಂಬುದು ವಿದೇಶಕ್ಕೆ ಹೋದಾಗಷ್ಟೇ ಗೊತ್ತಾಗುತ್ತದೆ. ವಿದೇಶಕ್ಕೆ ಹೋಗಿ ನೆಲೆಸಿದವರು ಭಾಷೆಯ ಜೊತೆಗೆ ತಮ್ಮ ಪೋಷಕರನ್ನೂ ಮರೆತರು' ಎಂದು ವಿಷಾದಿಸಿದರು.

'ಎಂಜಿನಿಯರಿಂಗ್ ಕೋರ್ಸ್ ಅನ್ನು ಕನ್ನಡದಲ್ಲಿ ಕಲಿಯಲು ಅವಕಾಶವಿದ್ದರೂ ವಿದ್ಯಾರ್ಥಿಗಳು ಬರುತ್ತಿಲ್ಲ. ಕನ್ನಡದಲ್ಲಿ ಕಲಿತವರಿಗೆ ಉದ್ಯೋಗ ಸಿಗುವ ವಾತಾವರಣ ಸೃಷ್ಟಿಯಾದರೆ, ಸಹಜವಾಗಿಯೇ ಬರುತ್ತಾರೆ' ಎಂದರು.

ತುಂಗಭದ್ರಾ ಅಣೆಕಟ್ಟೆ: ಬದಲಿ ಗೇಟ್ ತರಿಸಿ ಕಾರ್ಯಾಚರಣೆ ಮುಂದುವರಿಸಿರುವ ಅಧಿಕಾರಿಗಳು

ಗೇಟ್ ಅಳವಡಿಕೆ ಯತ್ನಕ್ಕೆ 'ಕೊಂಡಿ' ವಿಘ್ನ



ಗೇಟ್‌ನ ಪಿಲ್ಲರ್‌ನಲ್ಲಿನ ಕೊಂಡಿಯನ್ನು ಪರೀಕ್ಷೆ ಮಾಡಲು ಧುಮ್ಮಿಕ್ಕುತ್ತಿರುವ ನೀರಿನ ಸಮೀಪಕ್ಕೆ ಕ್ರೇನ್ ಮೂಲಕ ಬಂದ ಸಿಬ್ಬಂದಿ ಪ್ರಜಾವಾಣಿ ಚಿತ್ರ/ ಲವ ಕೆ.

ಪ್ರಜಾವಾಣಿ ವಾರ್ತೆ

ಹೊಸಪೇಟೆ/ಕೊಪ್ಪಳ: ತುಂಗಭದ್ರಾ ಅಣೆಕಟ್ಟೆಯ 19ನೇ ತೂಬಿನಲ್ಲಿ ತಾತ್ಕಾಲಿಕವಾಗಿ ಜಿಂದಾಲ್ ಗೇಟ್ ಅಳವಡಿಸುವ ಪ್ರಯತ್ನ ಗುರುವಾರ ಇಡೀ ದಿನ ನಡೆದರೂ ಅದು ಸಫಲವಾಗಲಿಲ್ಲ. ಆದರೆ ಹೊಸಳ್ಳಿಯಲ್ಲಿ ಸಿದ್ಧವಾದ ಬದಲಿ ಗೇಟ್ ಅಳವಡಿಸುವ ಕಾರ್ಯಾಚರಣೆ ಮುಂದುವರಿದಿದೆ ಎಂದು ತುಂಗಭದ್ರಾ ಮಂಡಳಿಯ ಅಧಿಕಾರಿಗಳು ತಿಳಿಸಿದ್ದಾರೆ.

'ಜಿಂದಾಲ್ ಕಂಪನಿಯಲ್ಲಿ ತಯಾರಿಸಲಾದ ಗೇಟ್ ಎಲಿಮೆಂಟ್‌ನ ಕೊಂಡಿಗಳು 19ನೇ ತೂಬಿನ ಕಲ್ಲಿನ ಪಿಲ್ಲರ್‌ನ ಕೊಂಡಿಗಳಿಗೆ ಸರಿಯಾಗಿ ಹೊಂದಾಣಿಕೆ ಆಗದ ಕಾರಣ ಆ ಗೇಟ್ ಅನ್ನು ಸದ್ಯ ಪಕ್ಕಕ್ಕೆ ಇರಿಸಿ, ಹೊಸಳ್ಳಿಯಲ್ಲಿ ಸಿದ್ಧವಾದ ಗೇಟ್ ಎಲಿಮೆಂಟ್ ಅನ್ನು ತಂದು ಇರಿಸಲು ನಿರ್ಧರಿಸಲಾಗಿದೆ' ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಗುರುವಾರ ಬೆಳಿಗ್ಗೆಯೇ ಅಣೆಕಟ್ಟೆಯ ಬಲದಂಡೆಗೆ ಜಿಂದಾಲ್‌ನಿಂದ 60 ಅಡಿ ಅಗಲ, 4 ಅಡಿ ಎತ್ತರದ ಗೇಟ್ ಎಲಿಮೆಂಟ್ 18 ಗಾಲಿಗಳ ಬೃಹತ್ ಟ್ರಕ್‌ನಲ್ಲಿ ಬಂದಿತ್ತು. ಮಧ್ಯಾಹ್ನದ ವೇಳೆಗೆ ಅದನ್ನು 19ನೇ ಗೇಟ್ ಸಮೀಪಕ್ಕೆ ಸಾಗಿಸಲಾಗಿತ್ತು. ಎರಡು ಕ್ರೇನ್‌ಗಳಿಂದ ಗೇಟ್ ಎತ್ತಿ ಇರಿಸುವ ಪ್ರಯೋಗ ಹಲವು ಬಾರಿ ನಡೆಯಿತು. ಆದರೆ ಕೊಂಡಿ ಸರಿಯಾಗಿ ಹೊಂದಾಣಿಕೆ ಆಗುತ್ತಿಲ್ಲ ಎಂಬುದು ಆಗ ಖಚಿತವಾಗಿತ್ತು. ಆರಂಭದಲ್ಲಿ ಇರಿಸುವ ಗೇಟ್ ಬಹಳಷ್ಟು ಬಲಿಷ್ಠವಾಗಿರಬೇಕು ಎಂಬ ಕಾರಣಕ್ಕೆ ಮೂಲ ವಿನ್ಯಾಸದ ಬದಲಿಗೆ ತುಸು ಬದಲಾವಣೆ ಮಾಡಿದ್ದರಿಂದ ಈ ಕೊಂಡಿ ಹೊಂದಾಣಿಕೆ ಸಮಸ್ಯೆ ಎದುರಾಯಿತು ಎಂದು ಮುಖ್ಯ ಸಲಹೆಗಾರ ಕನ್ನಯ್ಯ ನಾಯ್ಡು ಮಾಹಿತಿ ನೀಡಿದರು.

> **ಹೊಸಳ್ಳಿಯಲ್ಲಿ ತಯಾರಿಸಲಾದ ಎಲಿಮೆಂಟ್ ಅನ್ನು ಜಲಾಶಯದ 19ನೇ ಗೇಟ್‌ನಲ್ಲಿ ಇಳಿಸಲು ಪ್ರಯತ್ನ ಮಾಡಲಾಗುತ್ತಿದೆ, ಅದು ಸಫಲವಾಗುವ ವಿಶ್ವಾಸ ಇದೆ**
> **ರಾಜಶೇಖರ ಹಿಟ್ನಾಳ** ಕೊಪ್ಪಳ ಸಂಸದ

ಸಂಜೆ 5.30ರವರೆಗೂ ಜಿಂದಾಲ್ ಗೇಟ್ ಅಳಡಿಸುವ ಪ್ರಯತ್ನ ನಡೆಯಿತು. ಆದರೆ ಈ ಗೇಟ್‌ನ ವಿನ್ಯಾಸಕ್ಕೆ ಸರಿ ಹೊಂದುವಂತೆ ಅಣೆಕಟ್ಟೆಯ ಪಿಲ್ಲರ್‌ನಲ್ಲಿ ಬದಲಾವಣೆ ಮಾಡುವುದು ಬೇಡ ಎಂದು ನಿರ್ಧರಿಸಿದ ಅಧಿಕಾರಿಗಳು, ಈ ಗೇಟ್ ಬದಿಗಿರಿಸಿ ಮೂಲ ವಿನ್ಯಾಸದಂತೆಯೇ ಸಿದ್ಧವಾಗಿರುವ ಗೇಟ್ ಅನ್ನು ಇರಿಸಲು ತೀರ್ಮಾನಿಸಿದರು ಎಂದು ಕಾರ್ಯಾಚರಣೆಯ ಸ್ಥಳದಲ್ಲಿದ್ದ ಇನ್ನೊಬ್ಬ ಅಧಿಕಾರಿ 'ಪ್ರಜಾವಾಣಿ'ಗೆ ತಿಳಿಸಿದರು.

ಜಲಾಶಯದ ನೀರನ್ನು ಗರಿಷ್ಠ ಪ್ರಮಾಣದಲ್ಲಿ ಉಳಿಸಲು ಅಧಿಕಾರಿಗಳು ಹಗಲಿರುಳು ಶ್ರಮಿಸುತ್ತಿದ್ದು, ವಿಳಂಬ ಮಾಡದೆ ಗೇಟನ್ನು ರಾತ್ರಿಯೇ ತರಿಸಲು ಮುಂದಾಗಿದ್ದಾರೆ. ಹೀಗಿದ್ದರೂ ಜಲಾಶಯದಿಂದ 1.10 ಲಕ್ಷ ಕ್ಯುಸೆಕ್‌ನಷ್ಟು ನೀರು ಹೊರ ಹೋಗುತ್ತಿದ್ದು, ನೀರಿನ ಮಟ್ಟ 1,625.22 ಅಡಿಗೆ ಕುಸಿದಿದೆ (ಗರಿಷ್ಠ ಮಟ್ಟ 1,633 ಅಡಿ) ಹಾಗೂ ಜಲಾಶಯದ ನೀರಿನ ಪ್ರಮಾಣ 77.21 ಟಿಎಂಸಿ ಅಡಿಗೆ ಇಳಿಕೆಯಾಗಿದೆ. ಆ.10ರಂದು ಗೇಟ್ ದುರಂತ ಸಂಭವಿಸಿದಾಗ ಜಲಾಶಯ ಭರ್ತಿಯಾಗಿ 105.78 ಟಿಎಂಸಿ ಅಡಿ ನೀರು ಇತ್ತು. ಸದ್ಯ 35,437 ಕ್ಯುಸೆಕ್‌ನಷ್ಟು ಒಳಹರಿವು ಇದೆ.

ಶುಕ್ರವಾರ ನೀರಿನ ಮಟ್ಟ 1,621.72 ಅಡಿಗೆ ಕುಸಿಯುತ್ತದೆ ಹಾಗೂ ನೀರಿನ ಸಂಗ್ರಹ 66.30 ಟಿಎಂಸಿ ಅಡಿಗೆ ಇಳಿದಿರುತ್ತದೆ. ಹೀಗಿದ್ದರೂ 19ನೇ ಗೇಟ್‌ನಲ್ಲಿ ನೀರು ಧುಮ್ಮಿಕ್ಕಿ ಹರಿಯುತ್ತಲೇ ಇರುತ್ತದೆ. ಇಂತಹ ಸನ್ನಿವೇಶದಲ್ಲೂ ಯಶಸ್ವಿಯಾಗಿ ಮೊದಲ ಗೇಟ್ ಅಳವಡಿಸಿದ್ದೇ ಆದರೆ ಅದು ದೇಶದ ಇತಿಹಾಸದಲ್ಲಿ ಒಂದು ಮೈಲಿಗಲ್ಲಾಗಲಿದೆ ಎಂದು ಕನ್ನಯ್ಯ ನಾಯ್ಡು ತಿಳಿಸಿದ್ದಾರೆ.

ಕ್ರಸ್ಟ್‌ಗೇಟ್ ಕೊಚ್ಚಿಕೊಂಡು ಹೋಗಲು ಕಾರಣವಾದ ತುಂಡಾದ ಚೈನ್‌ಲಿಂಕ್ ಅನ್ನು ಗುರುವಾರ ಯಶಸ್ವಿಯಾಗಿ ಕ್ರೇನ್ ಮೂಲಕ ತೆಗೆಯಲಾಗಿದೆ.

ಎಸ್‌ಡಿಆರ್‌ಎಫ್ ತಂಡ ನಿಯೋಜನೆ: ಕಾರ್ಯಾಚರಣೆಯಲ್ಲಿ 80ಕ್ಕೂ ಹೆಚ್ಚು ಅಧಿಕಾರಿಗಳು, ಸಿಬ್ಬಂದಿ ತೊಡಗಿಕೊಂಡಿದ್ದಾರೆ. ಈ ವೇಳೆ ಸಂಭವಿಸಬಹುದಾದ ಯಾವುದೇ ಅನಾಹುತ ತಪ್ಪಿಸುವ ಸಲುವಾಗಿ ಎಸ್‌ಡಿಆರ್‌ಎಫ್‌ನ ಸುಮಾರು 15 ಮಂದಿ ಸಿಬ್ಬಂದಿಯನ್ನು ಅಣೆಕಟ್ಟೆಯ ಮೇಲ್ಭಾಗದಲ್ಲಿ ಮತ್ತು ಕೆಳಭಾಗದ ನಡುಗಡ್ಡೆಯಲ್ಲಿ ನಿಯೋಜಿಸಲಾಗಿದೆ. ರಬ್ಬರ್ ಬೋಟ್ ಅನ್ನು ಸಹ ಸನ್ನದ್ಧ ಸ್ಥಿತಿಯಲ್ಲಿ ಇಡಲಾಗಿದೆ.

ಅಚ್ಚರಿ ಮೂಡಿಸಿದ ಡ್ರೋನ್: ಗೇಟ್ ಅಳವಡಿಸುವ ಕಾರ್ಯಾಚರಣೆಯ ವಿಡಿಯೊವನ್ನು ಯಾರೂ ಮಾಡಕೂಡದು. ವಿಜಯನಗರ ಮತ್ತು ಕೊಪ್ಪಳ ಜಿಲ್ಲಾಡಳಿತ ಸಹ ಕಟ್ಟುನಿಟ್ಟಿನ ನಿಗಾ ವಹಿಸಬೇಕು ಎಂಬ ಸೂಚನೆಯನ್ನು ಕನ್ನಯ್ಯ ನಾಯ್ಡು ಅವರು ತುಂಗಭದ್ರಾ ಮಂಡಳಿಯ ಮೂಲಕ ತಿಳಿಸಿದ್ದಾರೆ. ಹೀಗಾಗಿ ಗೇಟ್ ಸಮೀಪಕ್ಕೆ ಮಾಧ್ಯಮದವರಿಗೆ ಪ್ರವೇಶ ನೀಡಿಲ್ಲ. ಅಣೆಕಟ್ಟೆ ಕೆಳಭಾಗದ ನದಿಯ ನಡುಗಡ್ಡೆಯಲ್ಲಿ ನಿಂತು ಮಾಧ್ಯಮ ಪ್ರತಿನಿಧಿಗಳು ದೂರದಿಂದ ಕಾರ್ಯಾಚರಣೆಯ ವಿಡಿಯೊ ಚಿತ್ರೀಕರಿಸುತ್ತಿದ್ದಾರೆ.

ಹೀಗಿದ್ದರೂ ಗುರುವಾರ ಸಂಜೆ ಕಾರ್ಯಾಚರಣೆ ನಡೆಯುತ್ತಿರುವ ಸ್ಥಳದಿಂದ ಡ್ರೋನ್ ಒಂದು ವೇಗವಾಗಿ ಹಾರಿ ಬಂದಿದ್ದು, ಹಲವು ಸಂಶಯಗಳಿಗೆ ಎಡೆಮಾಡಿಕೊಟ್ಟಿದೆ.

ಅಣೆಕಟ್ಟುಗಳ ಸುರಕ್ಷತೆ: ರಾಕೇಶ್ ಸಿಂಗ್ ಸಮಿತಿ?

ಬೆಂಗಳೂರು: ರಾಜ್ಯದ ಎಲ್ಲ ಜಲಾಶಯಗಳ ಗೇಟ್‌ಗಳ ಸುರಕ್ಷತೆಯನ್ನು ಪರಿಶೀಲಿಸಿ ವರದಿ ನೀಡಲು ನಿವೃತ್ತ ಐಎಎಸ್ ಅಧಿಕಾರಿ ರಾಕೇಶ್ ಸಿಂಗ್ ಅವರ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸುವಂತೆ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಗೌರವ್ ಗುಪ್ತ ಅವರಿಗೆ ಜಲಸಂಪನ್ಮೂಲ ಸಚಿವ ಡಿ.ಕೆ. ಶಿವಕುಮಾರ್ ಸೂಚಿಸಿದ್ದಾರೆ.

ಜಲಸಂಪನ್ಮೂಲ ಇಲಾಖೆಯಲ್ಲಿ ಎಂಟು ವರ್ಷ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಹುದ್ದೆ ನಿಭಾಯಿಸಿದ್ದ ರಾಕೇಶ್ ಸಿಂಗ್ ಅವರು ಇತ್ತೀಚೆಗೆ ವಯೋನಿವೃತ್ತಿ ಹೊಂದಿದ್ದರು.

ಗೌರವ್ ಗುಪ್ತ ಅವರಿಗೆ ಇದೇ 12ರಂದು ಟಿಪ್ಪಣಿ ನೀಡಿರುವ ಡಿ.ಕೆ. ಶಿವಕುಮಾರ್, 'ತುಂಗಭದ್ರಾ ಜಲಾಶಯದ 19ನೇ ಕ್ರಸ್ಟ್ ಗೇಟ್ ತುಂಡಾದ ಘಟನೆಯು, ಈ ಜಲಾಶಯವನ್ನೂ ಸೇರಿ ಎಲ್ಲ ಜಲಾಶಯಗಳ ಗೇಟ್‌ಗಳ ಭದ್ರತೆಯನ್ನು ಪರಿಶೀಲಿಸಬೇಕೆಂಬ ಎಚ್ಚರಿಕೆಯ ಸಂದೇಶವನ್ನು ನೀಡಿದೆ. ಹೀಗಾಗಿ, ತಾಂತ್ರಿಕ ನಿಪುಣರನ್ನು ಒಳಗೊಂಡ ಸಮಿತಿ ರಚಿಸಿ, ಎಲ್ಲ ಜಲಾಶಯಗಳ ಗೇಟ್‌ಗಳ ಪರಿಶೀಲನೆ, ದುರಸ್ತಿ ಮತ್ತು ಬದಲಾವಣೆ ಮಾಡುವ ಕೆಲಸವನ್ನು ತಕ್ಷಣ ಆರಂಭಿಸಬೇಕಿದೆ. ಈ ಹಿನ್ನೆಲೆಯಲ್ಲಿ ರಾಕೇಶ್ ಸಿಂಗ್ ನೇತೃತ್ವದಲ್ಲಿ ಸಮಿತಿ ರಚಿಸಿ, ಈ ಎಲ್ಲ ಕೆಲಸಗಳನ್ನು ತಕ್ಷಣ ಕೈಗೊಳ್ಳಬೇಕು' ಎಂದು ತಿಳಿಸಿದ್ದಾರೆ.

'ಅಣೆಕಟ್ಟು ಸುರಕ್ಷತಾ ಸಮಿತಿ ರಚಿಸಿ, ಆ ಸಮಿತಿಯು ಎಲ್ಲ ಅಣೆಕಟ್ಟುಗಳ ಅಧ್ಯಯನ ನಡೆಸಿ ಮುಂದಿನ ಒಂದು ತಿಂಗಳ ಒಳಗೆ ವರದಿ ನೀಡುವಂತೆ ಸೂಚಿಸಲಾಗುವುದು' ಎಂದು ಡಿ.ಕೆ. ಶಿವಕುಮಾರ್ ಹೇಳಿಕೆ ನೀಡಿದ್ದ ಬೆನ್ನಲ್ಲೆ, ರಾಕೇಶ್ ಸಿಂಗ್ ಅವರ ನೇತೃತ್ವದಲ್ಲಿ ಸಮಿತಿ ರಚನೆಗೂ ಅವರು ನಿರ್ದೇಶನ ನೀಡಿದ್ದಾರೆ.

ರಾಜ್ಯ ಸರ್ಕಾರದ ಬೊಕ್ಕಸಕ್ಕೆ ಹೆಚ್ಚುವರಿ ಆರ್ಥಿಕ ಹೊರೆ ಆಗಿರುವ ಗುತ್ತಿಗೆ- ಹೊರಗುತ್ತಿಗೆ ಆಧಾರದಲ್ಲಿ ಕಾರ್ಯನಿರ್ವಹಿಸುತ್ತಿರುವ ನಿವೃತ್ತ ಅಧಿಕಾರಿ, ನೌಕರರನ್ನು ತಕ್ಷಣದಿಂದಲೇ ಕರ್ತವ್ಯದಿಂದ ಬಿಡುಗಡೆ ಮಾಡಿ, ಆ ಹುದ್ದೆಗಳಿಗೆ ಹಾಲಿ ಸೇವೆಯಲ್ಲಿರುವ ಸರ್ಕಾರಿ ಅಧಿಕಾರಿ, ನೌಕರರನ್ನು ನಿಯೋಜಿಸಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಇತ್ತೀಚೆಗೆ ಸೂಚನೆ ನೀಡಿದ್ದರು. ಆದರೂ ನಿವೃತ್ತರಿಗೆ ಮಣೆ ಹಾಕುತ್ತಿರುವುದಕ್ಕೆ ಇಲಾಖೆಯಲ್ಲೇ ಆಕ್ಷೇಪ ವ್ಯಕ್ತವಾಗಿದೆ.

ಶೌಚಾಲಯದಲ್ಲಿ ವಿಡಿಯೊ: ಇಬ್ಬರು ಬಾಲಕರ ಬಂಧನ

ಪ್ರಜಾವಾಣಿ ವಾರ್ತೆ


ಬೆಂಗಳೂರು: ನಗರದ ಊರ್ವಶಿ ಚಿತ್ರಮಂದಿರದ ಮಹಿಳೆಯರ ಶೌಚಾಲಯದ ಕಿಟಕಿಯಲ್ಲಿ ಮೊಬೈಲ್ ಇರಿಸಿ ವಿಡಿಯೊ ಚಿತ್ರೀಕರಣ ಮಾಡುತ್ತಿದ್ದ ಆರೋಪದ ಮೇಲೆ ಇಬ್ಬರು ಬಾಲಕರನ್ನು ಕಲಾಸಿಪಾಳ್ಯ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಆಗಸ್ಟ್ 10ರಂದು ಯುವತಿಯೊಬ್ಬರು 'ಭೀಮ' ಚಿತ್ರವನ್ನು ವೀಕ್ಷಿಸಲು ಎಚ್. ಸಿದ್ದಯ್ಯ ರಸ್ತೆಯ ಚಿತ್ರಮಂದಿರಕ್ಕೆ ತೆರಳಿದ್ದರು. ಸಿನಿಮಾದ ಮಧ್ಯಂತರ ವಿರಾಮದ ಅವಧಿಯಲ್ಲಿ ಶೌಚಾಲಯಕ್ಕೆ ಹೋಗಿದ್ದರು. ಅದೇ ಸಂದರ್ಭದಲ್ಲಿ ಬಾಲಕರಿಬ್ಬರು ಶೌಚಾಲಯದ ಕಿಟಕಿಯಲ್ಲಿ ಮೊಬೈಲ್ ಇಟ್ಟು ಚಿತ್ರೀಕರಣ ಮಾಡುತ್ತಿದ್ದರು' ಎಂದು ಪೊಲೀಸರು ತಿಳಿಸಿದರು.

'ಯುವತಿಯು ಶೌಚಾಲಯದ ಒಳಕ್ಕೆ ಹೋದಾಗ ಆರೋಪಿಗಳ ಕೈ ನೆರಳು ಬಿದ್ದಿರುವುದನ್ನು ಗಮನಿಸಿದ್ದರು. ಬಳಿಕ ಅವರು ಪರಿಶೀಲನೆ ನಡೆಸಿದಾಗ ಕಿಟಕಿಯೊಳಗೆ ಕೈ ಹಾಕಿ ಮೊಬೈಲ್ ಮೂಲಕ ಚಿತ್ರೀಕರಣ ಮಾಡುತ್ತಿರುವುದು ಕಂಡುಬಂದಿತ್ತು' ಎಂದು ಪೊಲೀಸರು ಹೇಳಿದರು.

ಒತ್ತುವರಿ ತೆರವಿಗೆ ರಂಭಾಪುರಿ ಶ್ರೀ ವಿರೋಧ

ಪ್ರಜಾವಾಣಿ ವಾರ್ತೆ



ಬಾಳೆಹೊನ್ನೂರು (ಚಿಕ್ಕಮಗಳೂರು): ಜೀವನೋಪಾಯಕ್ಕಾಗಿ ಬಡವರು ಒತ್ತುವರಿ ಮಾಡಿರುವ ಭೂಮಿಯನ್ನು ತೆರವುಗೊಳಿಸುತ್ತಿರುವ ಅರಣ್ಯ ಇಲಾಖೆಯ ಕ್ರಮ ಸರಿಯಲ್ಲ ಎಂದು ರಂಭಾಪುರಿ ಪೀಠದ ವೀರಸೋಮೇಶ್ವರ ಸ್ವಾಮೀಜಿ ಹೇಳಿದ್ದಾರೆ.

ಶ್ರಾವಣ ಪೂಜಾನುಷ್ಠಾನದ ಸಂದರ್ಭದಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಸಾವಿರಾರು ಎಕರೆ ಒತ್ತುವರಿ ಮಾಡಿರುವವರ ವಿರುದ್ಧ ಕ್ರಮ ಕೈಗೊಳ್ಳದೆ ಬಡವರನ್ನು ತೊಂದರೆಗೊಳಪಡಿಸುವುದು ಒಳ್ಳೆಯದಲ್ಲ. ಸರ್ಕಾರ ಹಠ ಹಿಡಿದರೆ ಮಲೆನಾಡಿನಲ್ಲಿ ಉಗ್ರ ಹೋರಾಟ ನಡೆಯಲಿದೆ ಎಂದು ಎಚ್ಚರಿಕೆ ನೀಡಿದರು.

ಕೆಆರ್‌ಎಸ್ ಜಲಾಶಯಕ್ಕೆ ಬಾಗಿನ ಅರ್ಪಿಸಿದ ಒಡೆಯರ್

'ಅಮ್ಯೂಸ್‌ಮೆಂಟ್ ಪಾರ್ಕ್ ಬೇಡ'

ಪ್ರಜಾವಾಣಿ ವಾರ್ತೆ

ಶ್ರೀರಂಗಪಟ್ಟಣ (ಮಂಡ್ಯ ಜಿಲ್ಲೆ): 'ಕೆಆರ್‌ಎಸ್ ಅಣೆಕಟ್ಟೆ ಬಳಿ ರಾಜ್ಯ ಸರ್ಕಾರ ಅಮ್ಯೂಸ್‌ಮೆಂಟ್ ಪಾರ್ಕ್ ನಿರ್ಮಿಸುವುದು ಸರಿಯಲ್ಲ' ಎಂದು ರಾಜವಂಶಸ್ಥ ಹಾಗೂ ಮೈಸೂರು–ಕೊಡಗು ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಪ್ರತಿಪಾದಿಸಿದರು.



ಶ್ರೀರಂಗಪಟ್ಟಣ ತಾಲ್ಲೂಕಿನ ಕೆಆರ್‌ಎಸ್ ಅಣೆಕಟ್ಟೆಗೆ ಮೈಸೂರು– ಕೊಡಗು ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಗುರುವಾರ ಬಾಗಿನ ಅರ್ಪಿಸುವ ಮುನ್ನ ಪೂಜೆ ನೆರವೇರಿಸಿದರು

ತಾಲ್ಲೂಕಿನ ಕೆಆರ್‌ಎಸ್ ಅಣೆಕಟ್ಟೆಗೆ ಗುರುವಾರ ಬಾಗಿನ ಅರ್ಪಿಸಿ, ಕಾವೇರಿ ಮಾತೆ ಪ್ರತಿಮೆಗೆ ಪೂಜೆ ಸಲ್ಲಿಸಿ ಮಾತನಾಡಿ, 'ಅಭಿವೃದ್ಧಿಯ ಹೆಸರಿನಲ್ಲಿ ಅಣೆಕಟ್ಟೆಗೆ ತೊಂದರೆಯಾಗಬಾರದು. ಪಾರ್ಕ್ ಮಾಡುವ ಮುನ್ನ ಸಾಧಕ–ಬಾಧಕಗಳ ಬಗ್ಗೆ ಚಿಂತನೆ ನಡೆಸಬೇಕು. ಪರಂಪರೆ–ಪರಿಸರ ಉಳಿಸಿಕೊಳ್ಳಬೇಕು. ಬೇರೆ ಕಡೆ ಪಾರ್ಕ್ ಮಾಡುವುದು ಒಳಿತು' ಎಂದು ಸುದ್ದಿಗಾರರ ಪ್ರಶ್ನೆಗೆ ಪ್ರತಿಕ್ರಿಯಿಸಿದರು.

'ಮೈಸೂರಿನ ಚಾಮುಂಡಿ ಬೆಟ್ಟದ ಚಾಮುಂಡೇಶ್ವರಿ ದೇವಾಲಯದಲ್ಲಿ ಸಾರ್ವಜನಿಕರು ಪೂಜೆ ಸಲ್ಲಿಸಲು ಅಡ್ಡಿ ಇಲ್ಲ. ದೇವಾಲಯಕ್ಕೆ ಸಂಬಂಧಿಸಿದ ಕಾನೂನಿನ ವಿಚಾರಗಳು ಏನೇ ಇದ್ದರೂ ಅಧಿಕಾರಿಗಳು ನೋಡಿಕೊಳ್ಳುತ್ತಾರೆ. ಸಾಂಪ್ರದಾಯಿಕ ಧಾರ್ಮಿಕ ಆಚರಣೆಗಳು, ಮರ್ಯಾದೆಗಳು ವಾಡಿಕೆಯಂತೆ ನಡೆಯಲಿವೆ' ಎಂದರು.

'ಕೆಆರ್‌ಎಸ್ ಅಣೆಕಟ್ಟೆಯ ಕ್ರಸ್ಟ್ ಗೇಟ್‌ಗಳಲ್ಲಿ ತೊಂದರೆ ಇಲ್ಲ ಎಂದು ಎಂಜಿನಿಯರ್‌ಗಳು ಹೇಳಿದ್ದಾರೆ. ಚಿಕ್ಕ ಗೇಟ್‌ಗಳನ್ನು ಅಳವಡಿಸಿರುವುದರಿಂದ ಸಮಸ್ಯೆ ಕಾಣಿಸಿಕೊಂಡ ತಕ್ಷಣವೇ ಸರಿಪಡಿಸಲಾಗುತ್ತದೆ. ಜನ ಆತಂಕಪಡುವ ಅಗತ್ಯವಿಲ್ಲ' ಎಂದರು.

'ಈ ಬಾರಿ ಅವಧಿಗೂ ಮುನ್ನವೇ ಜಲಾಶಯ ಭರ್ತಿಯಾಗಿರುವುದು ಸಂತಸ ತಂದಿದೆ. ಬಾಗಿನ ಅರ್ಪಿಸಬೇಕು ಎಂಬ ಹಲವು ವರ್ಷಗಳ ಬಯಕೆ ಈಡೇರಿದೆ. ಜಿಲ್ಲೆಯ ಜನ ನಮ್ಮ ಕುಟುಂಬದ ಬಗ್ಗೆ ಅಪಾರ ಗೌರವ ಇಟ್ಟುಕೊಂಡಿದ್ದಾರೆ. ಅವರ ಹಿತಕ್ಕಾಗಿ ಕೆಲಸ ಮಾಡಲು ಸಿದ್ಧ' ಎಂದು ತಿಳಿಸಿದರು.

'ಬೀದರ್ ಜಿಲ್ಲೆಯಲ್ಲಿ ಪಕ್ಷಿಧಾಮ'

ಬೀದರ್: 'ಬೀದರ್ ಹಾಗೂ ಭಾಲ್ಕಿ ಮಧ್ಯದಲ್ಲಿರುವ ಹೊನ್ನಿಕೇರಿ ಅರಣ್ಯ ಪ್ರದೇಶದಲ್ಲಿ ಪಕ್ಷಿಧಾಮ ಮಾಡಲು ನಿರ್ಧರಿಸಲಾಗಿದೆ' ಎಂದು ಪರಿಸರ, ಅರಣ್ಯ ಸಚಿವ ಈಶ್ವರ ಬಿ. ಖಂಡ್ರೆ ತಿಳಿಸಿದರು.

ಪಕ್ಷಿಧಾಮ ನಿರ್ಮಾಣಕ್ಕೆ ಅರಣ್ಯ ಇಲಾಖೆಯಿಂದ ಈಗಾಗಲೇ ₹5 ಕೋಟಿ ಮಂಜೂರು ಮಾಡಲಾಗಿದೆ. ಪಕ್ಷಿಧಾಮಕ್ಕೆ ಸಂಬಂಧಿಸಿದಂತೆ ವಿಸ್ತೃತ ಯೋಜನಾ ವರದಿ ಸಿದ್ಧವಾಗುತ್ತಿದೆ. ಹೊನ್ನಿಕೇರಿ ಸಮೀಪವೇ ಪರಿಸರ ಪ್ರವಾಸೋದ್ಯಮ ಚಟುವಟಿಕೆಗಳನ್ನು ಕೂಡ ಆರಂಭಿಸಲಾಗುವುದು ಎಂದು ಹೇಳಿದರು.

ನಗರದ ಜಿಲ್ಲಾ ನೆಹರೂ ಕ್ರೀಡಾಂಗಣದಲ್ಲಿ ಗುರುವಾರ ಸ್ವಾತಂತ್ರ್ಯ ದಿನಾಚರಣೆಯಲ್ಲಿ ಧ್ವಜಾರೋಹಣ ನೆರವೇರಿಸಿದ ಸಚಿವರು ಈ ಮಾಹಿತಿ ನೀಡಿದರು.

545 ಪಿಎಸ್‌ಐ ನೇಮಕ: ಶೀಘ್ರ ಆದೇಶ ಪತ್ರ

ಪ್ರಜಾವಾಣಿ ವಾರ್ತೆ



ತುಮಕೂರು: 545 ಪೊಲೀಸ್ ಸಬ್ ಇನ್‌ಸ್ಪೆಕ್ಟರ್ ನೇಮಕಾತಿ ಪ್ರಕ್ರಿಯೆ ಬಹುತೇಕ ಮುಕ್ತಾಯದ ಹಂತಕ್ಕೆ ಬಂದಿದ್ದು ಈ ತಿಂಗಳ ಅಂತ್ಯದೊಳಗೆ ನೇಮಕಾತಿ ಆದೇಶ ಪತ್ರ ನೀಡಲಾಗುವುದು ಎಂದು ಗೃಹ ಸಚಿವ ಜಿ.ಪರಮೇಶ್ವರ ಇಲ್ಲಿ ಗುರುವಾರ ತಿಳಿಸಿದರು.

ಹಿಂದಿನ ಬಿಜೆಪಿ ಸರ್ಕಾರದಲ್ಲಿ ಹಗರಣದಿಂದಾಗಿ ನೇಮಕಾತಿ ಪ್ರಕ್ರಿಯೆ ಸ್ಥಗಿತಗೊಳಿಸಲಾಗಿತ್ತು. ಪ್ರಸ್ತುತ ನೇಮಕಾತಿ ಪ್ರಕ್ರಿಯೆ ಅಂತಿಮ ಘಟ್ಟ ಮುಟ್ಟಿದೆ ಎಂದು ಪತ್ರಿಕಾಗೋಷ್ಠಿಯಲ್ಲಿ ಹೇಳಿದರು.

ಇನ್ನೂ 403 ಸಬ್ ಇನ್‌ಸ್ಪೆಕ್ಟರ್ ನೇಮಕಾತಿಗೆ ಪರೀಕ್ಷೆ ನಡೆಯಬೇಕಿದೆ. ಮತ್ತೂ 600 ಸಬ್ ಇನ್‌ಸ್ಪೆಕ್ಟರ್ ನೇಮಕಾತಿ ಪ್ರಕ್ರಿಯೆ ಆರಂಭವಾಗಬೇಕಿದೆ. ಈ ಎಲ್ಲಾ ಹಂತದ ನೇಮಕಾತಿ ಪೂರ್ಣಗೊಳ್ಳುವ ಹೊತ್ತಿಗೆ 1,500 ಸಬ್ ಇನ್‌ಸ್ಪೆಕ್ಟರ್‌ಗಳನ್ನು ನೇಮಕ ಮಾಡಿಕೊಂಡಂತಾಗುತ್ತದೆ ಎಂದರು.

ಮುಂದಿನ ದಿನಗಳಲ್ಲಿ ಹಂತಹಂತವಾಗಿ 20 ಸಾವಿರ ಕಾನ್‌ಸ್ಟೆಬಲ್‌ಗಳನ್ನು ನೇಮಕಾತಿ ಮಾಡಿಕೊಳ್ಳಲಾಗುವುದು. ಕೆಎಸ್‌ಆರ್‌ಪಿ 3,500 ಕಾನ್‌ಸ್ಟೆಬಲ್ ನೇಮಕಾತಿ ಪ್ರಕ್ರಿಯೆ ನಡೆದಿದೆ ಎಂದು ತಿಳಿಸಿದರು.

ಕಾಳಿ ನದಿ: ದಡ ಸೇರಿದ ಲಾರಿ

ಪ್ರಜಾವಾಣಿ ವಾರ್ತೆ

ಕಾರವಾರ: ಇಲ್ಲಿನ ಕೋಡಿಬಾಗದ ಬಳಿ ಕಾಳಿ ನದಿಯ ಸೇತುವೆ ಕುಸಿದು ಬಿದ್ದ ಪರಿಣಾಮ ನದಿಗೆ ಬಿದ್ದಿದ್ದ ತಮಿಳುನಾಡು ಜಿಲ್ಲೆ ಸೇಲಂನ ವ್ಯಕ್ತಿಗೆ ಸೇರಿದ ಲಾರಿಯನ್ನು ಗುರುವಾರ ಸತತ 11 ಗಂಟೆಗೂ ಹೆಚ್ಚು ಕಾಲ ಕಾರ್ಯಾಚರಣೆ ನಡೆಸಿ ದಡಕ್ಕೆ ಎಳೆದು ತರಲಾಯಿತು.

ಕಾಳಿ ನದಿಯ ಮಧ್ಯದಲ್ಲಿ ಸಿಲುಕಿಕೊಂಡಿದ್ದ ಲಾರಿಯ ಮುಂಭಾಗ ನಜ್ಜುಗುಜ್ಜಾಗಿತ್ತು. ದಡಕ್ಕೆ ಎಳೆದು ತಂದು ನಿಲ್ಲಿಸುತ್ತಿದ್ದಂತೆ ಸ್ಥಳದಲ್ಲಿದ್ದ ನೂರಾರು ಜನರು ಚಪ್ಪಾಳೆ ತಟ್ಟಿ ಸಂಭ್ರಮಿಸಿದರು. ಲಾರಿಯ ಸ್ಥಿತಿ ಕಂಡು ಮಾಲೀಕ ಸೆಂಥಿಲಕುಮಾರ ಕಣ್ಣೀರು ಸುರಿಸಿದರು.

ಆಗಸ್ಟ್ 7ರಂದು ತಡರಾತ್ರಿ ನದಿಗೆ ಲಾರಿ ಬಿದ್ದಿತ್ತು. ಎಂಟು ದಿನಗಳ ಬಳಿಕ ಅದನ್ನು ದಡಕ್ಕೆ ತರಲು ಜಿಲ್ಲಾಡಳಿತ ಕಾರ್ಯಾಚರಣೆ ಆರಂಭಿಸಿತ್ತು. ಯಲ್ಲಾಪುರ ಮತ್ತು ಕಾರವಾರದ ಮೂರು ಕ್ರೇನ್‌ಗಳನ್ನು ಕಾರ್ಯಾಚರಣೆಗೆ ಬಳಸಲಾಗಿತ್ತು. ಲಾರಿ ಎಳೆಯಲು ಕಟ್ಟಿದ್ದ ಕಬ್ಬಿಣದ ರೋಪ್ ನದಿಯ ಆಳದ ಕಲ್ಲಿನ ಬಂಡೆಗೆ ಸಿಲುಕಿ ಕಾರ್ಯಾಚರಣೆಗೆ ಅಡ್ಡಿಯಾಗಿತ್ತು. ಮುಳುಗು ತಜ್ಞ ಈಶ್ವರ ಮಲ್ಪೆ, ಸನ್ನಿ ಸಿದ್ಧಿ ಎಂಬುವವರು ನೀರಿನಲ್ಲಿ ಮುಳುಗಿ ರೋಪ್ ಸರಿಯಾಗಿ ಕಟ್ಟಿದ್ದರು.



ಕಾರವಾರದ ಕಾಳಿ ನದಿಯಲ್ಲಿ ಸೇತುವೆ ಕುಸಿದು ನೀರಿಗೆ ಬಿದ್ದಿದ್ದ ಲಾರಿಯನ್ನು ಮೂರು ಕ್ರೇನ್‌ಗಳ ಸಹಾಯದೊಂದಿಗೆ ಗುರುವಾರ ಸಂಜೆ ಎಳೆದು ದಡಕ್ಕೆ ತರಲಾಯಿತು

ಪ್ರಜಾವಾಣಿ ಚಿತ್ರ: ದಿಲೀಪ್ ರೇವಣಕರ್

'ಎಂಟು ಟನ್‌ಗೂ ಹೆಚ್ಚು ತೂಕದ ಲಾರಿಯನ್ನು ಮೇಲಕ್ಕೆತ್ತಲು ಹಲವು ಅಡೆತಡೆ ಎದುರಾದವು. ಆದರೂ, ಕಾರ್ಯಾಚರಣೆ ಯಶಸ್ವಿಯಾಗಿ ನಡೆಯಿತು' ಎಂದು ಜಿಲ್ಲಾಧಿಕಾರಿ ಕೆ.ಲಕ್ಷ್ಮಿಪ್ರಿಯಾ ತಿಳಿಸಿದ್ದಾರೆ.



ಸುಭಾಷಿತ

ಹಣ ಎನ್ನುವುದು ಮನುಷ್ಯನ ಸ್ವಭಾವವನ್ನು ಪರೀಕ್ಷೆ ಮಾಡುವ ಒಂದು ಸಾಧನ.

–ಗೌತಮ ಬುದ್ಧ

ಬೆಂಗಳೂರು ನಗರದಲ್ಲಿ ಮಹಾಪೂರ ಬಿಬಿಎಂಪಿ ಆಡಳಿತ ವೈಫಲ್ಯಕ್ಕೆ ಸಾಕ್ಷಿ

ಸೋಮವಾರ ಬೆಳಗಿನ ಜಾವ ಕೆಲವು ಗಂಟೆಗಳ ಕಾಲ ಸುರಿದ ಭಾರಿ ಮಳೆಯಿಂದ ನಗರದ ಹಲವು ಭಾಗಗಳಲ್ಲಿ ಪ್ರವಾಹ ಪರಿಸ್ಥಿತಿ ಉಂಟಾಗಿತ್ತು. ಮಳೆಯ ನೀರು ರಾಜಕಾಲುವೆಗಳನ್ನು ಸೇರದೆ ಉಕ್ಕಿ ಹರಿದು ರಸ್ತೆಗಳೇ ನದಿಗಳಂತಾಗಿದ್ದವು. ಹಲವೆಡೆ ಅಂಡರ್‌ಪಾಸ್‌ಗಳು ಜಲಾವೃತಗೊಂಡು ವಾಹನ ಸಂಚಾರಕ್ಕೆ ಅಡಚಣೆಯಾದರೆ, ಕೆಲವೆಡೆ ಅಪಾರ್ಟ್‌ಮೆಂಟ್, ಕಟ್ಟಡ, ಮಾರುಕಟ್ಟೆಗಳಿಗೆ ನೀರು ನುಗ್ಗಿ ಜನಜೀವನಕ್ಕೆ ತೊಂದರೆಯಾಯಿತು. ಬೆಂಗಳೂರಿನ ಪೂರ್ವ ಭಾಗದ ಕೆಲವು ರಸ್ತೆಗಳಲ್ಲಿ ಗಂಟೆಗಟ್ಟಲೆ ನೀರು ತುಂಬಿಕೊಂಡಿದ್ದರಿಂದ ವಾಹನ ಸವಾರರು ಪಡಿಪಾಟಲು ಅನುಭವಿಸಬೇಕಾಯಿತು. ಇದು ಈ ಮುಂಗಾರಿನಲ್ಲಿ ಬೆಂಗಳೂರು ನಗರವು ಎದುರಿಸಿದ ಅತಿದೊಡ್ಡ ಮಳೆ ಅನಾಹುತ. ಮೇ ತಿಂಗಳಲ್ಲಿ ಸುರಿದ ಮುಂಗಾರುಪೂರ್ವ ಮಳೆಯಲ್ಲೂ ನಗರದಲ್ಲಿ ಪ್ರವಾಹ ಸ್ಥಿತಿ ಸೃಷ್ಟಿಯಾಗಿತ್ತು. ಮೂರು ತಿಂಗಳ ಬಳಿಕವೂ ಅಂತಹದ್ದೇ ಸಮಸ್ಯೆ ಕಾಣಿಸಿಕೊಂಡಿದೆ. ಸೋಮವಾರ ನಸುಕಿನ ಜಾವ ಅಸಾಧಾರಣ ಎಂಬಂತೆಯೇನೂ ಮಳೆ ಸುರಿದಿರಲಿಲ್ಲ. ಹವಾಮಾನ ಇಲಾಖೆಯ ಅಂಕಿಅಂಶಗಳ ಪ್ರಕಾರ, ಬಿಬಿಎಂಪಿ ವ್ಯಾಪ್ತಿಯಲ್ಲಿ 4 ಸೆಂಟಿಮೀಟರ್‌ನಿಂದ 6.15 ಸೆಂಟಿಮೀಟರ್‌ವರೆಗೂ ಮಳೆ ಬಿದ್ದಿತ್ತು. ಆದರೂ 'ನಗರ ಮಹಾಪೂರ' ಉಂಟಾಗಿ ಜನಜೀವನಕ್ಕೆ ತೊಂದರೆ ಆಗಿರುವುದು ಮಳೆಗಾಲವನ್ನು ಎದುರಿಸಲು ಸಿದ್ಧತೆ ಮಾಡಿಕೊಳ್ಳುವಲ್ಲಿ ಬಿಬಿಎಂಪಿ ಆಡಳಿತ ಸಂಪೂರ್ಣವಾಗಿ ವಿಫಲವಾಗಿದೆ ಎಂಬುದನ್ನು ತೋರಿಸುತ್ತಿದೆ. 'ಮಳೆಗಾಲ ಎದುರಿಸಲು ಸರ್ವ ಸಿದ್ಧತೆ ಮಾಡಿಕೊಳ್ಳಲಾಗಿದೆ' ಎಂಬ ಬಿಬಿಎಂಪಿ ಮುಖ್ಯ ಆಯುಕ್ತರ ಹೇಳಿಕೆಯು ಬರೀ ಮಾತಿಗೆ ಸೀಮಿತವಾಗಿದೆ ಎಂಬುದನ್ನು ಸೋಮವಾರದ ಪ್ರವಾಹವು ಸಾಬೀತುಪಡಿಸಿದೆ.



'ಮಳೆಗಾಲ ಎದುರಿಸಲು ಸರ್ವ ಸಿದ್ಧತೆ ಮಾಡಿಕೊಳ್ಳಲಾಗಿದೆ' ಎಂಬ ಹೇಳಿಕೆಯು ಮಾತಿಗೆ ಸೀಮಿತವಾಗಿದೆ ಎಂಬುದನ್ನು ಸೋಮವಾರದ ಪ್ರವಾಹವು ಸಾಬೀತುಪಡಿಸಿದೆ

ಜಗತ್ತಿನಲ್ಲಿ ಅತ್ಯಂತ ಯೋಜನಾಬದ್ಧವಾಗಿ ನಿರ್ಮಾಣವಾದ ನಗರಗಳು ಕೂಡ ಅತಿಯಾದ ಮಳೆ ಸುರಿದಾಗ ಪ್ರವಾಹದ ಸ್ಥಿತಿ ಎದುರಿಸುವುದಿದೆ. ಆದರೆ, ಬೆಂಗಳೂರು ನಗರದಲ್ಲಿ ಸಣ್ಣ ಪ್ರಮಾಣದ ಮಳೆ ಸುರಿದರೂ ಮಹಾಪ್ರವಾಹದ ಸನ್ನಿವೇಶ ಸೃಷ್ಟಿಯಾಗಿ ಜನಜೀವನಕ್ಕೆ ತೊಂದರೆ ಆಗುತ್ತಿರುವುದರ ಹಿಂದೆ ಬಿಬಿಎಂಪಿ ಸೇರಿದಂತೆ ನಗರಾಡಳಿತದ ಜವಾಬ್ದಾರಿ ಹೊತ್ತಿರುವ ಸಂಸ್ಥೆಗಳ ಲೋಪವೇ ಕಾರಣ. ಬೆಂಗಳೂರು ನಗರವು ಎತ್ತರದ ದಿಣ್ಣೆಗಳು ಮತ್ತು ತಗ್ಗು ಪ್ರದೇಶಗಳಿಂದ ಕೂಡಿದೆ. ಎತ್ತರದ ಪ್ರದೇಶಗಳಲ್ಲಿ ಬಿದ್ದ ಮಳೆಯ ನೀರು ತಗ್ಗು ಪ್ರದೇಶಕ್ಕೆ ಹರಿದು, ರಾಜಕಾಲುವೆಗಳನ್ನು ಸೇರಿ, ಅಲ್ಲಿಂದ ಕೆರೆಗಳಿಗೆ ಹರಿಯುತ್ತಿತ್ತು. ಅನಿಯಂತ್ರಿತ ಅಭಿವೃದ್ಧಿ ಹಾಗೂ ಒತ್ತುವರಿಗಳಿಂದ ಬಹುತೇಕ ರಾಜಕಾಲುವೆಗಳು ಕಿರಿದಾಗಿವೆ. ಕೆಲವು ಕಾಲುವೆಗಳು ಸಂಪೂರ್ಣ ಮುಚ್ಚಿಹೋಗಿವೆ. ಚರಂಡಿಗಳು, ದ್ವಿತೀಯ ಹಂತದ ಕಾಲುವೆಗಳು ಮತ್ತು ರಾಜಕಾಲುವೆಗಳಲ್ಲಿ ಹೂಳು ತೆಗೆಯುವ ಕೆಲಸ ಸಮರ್ಪಕವಾಗಿ ನಡೆಯದೇ ಇರುವುದು ಮಳೆ ಸುರಿದಾಗಲೆಲ್ಲ ಬೆಂಗಳೂರಿನಲ್ಲಿ ಮಹಾಪೂರದ ಸೃಷ್ಟಿಯಾಗಲು ಕಾರಣ. ತೆಗೆದ ಹೂಳನ್ನೂ ದೂರಕ್ಕೆ ಸಾಗಿಸದೆ ಕಾಲುವೆಗಳ ಪಕ್ಕದಲ್ಲೇ ರಾಶಿ ಹಾಕುತ್ತಿದ್ದು, ಅದು ಮತ್ತೆ ಕಾಲುವೆ ಸೇರಿ ಪರಿಸ್ಥಿತಿ ಬಿಗಡಾಯಿಸುತ್ತಿದೆ. ಬಿಬಿಎಂಪಿ ಅಂಕಿಅಂಶಗಳ ಪ್ರಕಾರ, 1,963 ಸ್ಥಳಗಳಲ್ಲಿ ರಾಜಕಾಲುವೆಗಳ ಒತ್ತುವರಿ ತೆರವು ಬಾಕಿ ಇದೆ. ಆರು ತಿಂಗಳಿಗೂ ಹೆಚ್ಚು ಸಮಯದಿಂದ ಈ ಕೆಲಸದಲ್ಲಿ ಕಿಂಚಿತ್ತೂ ಪ್ರಗತಿಯಾಗಿಲ್ಲ. ಇದರ ಜೊತೆಯಲ್ಲೇ ಕೆರೆಗಳ ಒತ್ತುವರಿ ತೆರವು ಕಾರ್ಯಾಚರಣೆಯಲ್ಲೂ ಪ್ರಗತಿಯಾಗಿಲ್ಲ. ಇದರಿಂದಾಗಿ ಜಮೀನುಗಳ ಒತ್ತುವರಿಗೂ ಕಡಿವಾಣ ಬಿದ್ದಿಲ್ಲ. ಈ ಎಲ್ಲವೂ ರಾಜಧಾನಿಯಲ್ಲಿ 'ನಗರ ಮಹಾಪೂರ' ಉಂಟಾಗಿ ಜನಜೀವನ ಹೈರಾಣಾಗುತ್ತಿರುವುದರ ಮೂಲ.

ಬೆಂಗಳೂರಿನಲ್ಲಿ ನಗರ ಮಹಾಪೂರ ಇತ್ತೀಚಿನ ವರ್ಷಗಳಲ್ಲಿ ಪದೇ ಪದೇ ಉಂಟಾಗುತ್ತಿದೆ. ಕಳೆದ ವರ್ಷ ಪ್ರವಾಹದಲ್ಲಿ ಸಿಲುಕಿ ಇಬ್ಬರು ಮೃತಪಟ್ಟಿದ್ದರು. ಬೆಂಗಳೂರಿನ ಪೂರ್ವ ಭಾಗದಲ್ಲಿ ಪ್ರವಾಹದಿಂದ ವಾರಗಟ್ಟಲೆ ಜನಜೀವನ ಅಸ್ತವ್ಯಸ್ತವಾಗಿತ್ತು. ಆಗಾಗ ಅನಾಹುತಗಳು ಸಂಭವಿಸುತ್ತಿದ್ದರೂ ಬಿಬಿಎಂಪಿ ಮತ್ತು ರಾಜ್ಯ ಸರ್ಕಾರ ಅನುಭವಗಳಿಂದ ಪಾಠ ಕಲಿತಿಲ್ಲ ಎಂಬುದನ್ನು ಈಗಿನ ಪರಿಸ್ಥಿತಿ ಸೂಚಿಸುತ್ತಿದೆ. ಪ್ರವಾಹ, ಅನಾಹುತ ಸಂಭವಿಸಿದಾಗ ದಿಢೀರ್ ಎಚ್ಚೆತ್ತುಕೊಂಡು ಒಂದಷ್ಟು ಕೆಲಸ ಮಾಡುವ ಆಡಳಿತ ವ್ಯವಸ್ಥೆ, ಅಷ್ಟೇ ವೇಗದಲ್ಲಿ ನಿದ್ರೆಗೆ ಜಾರುತ್ತದೆ. ಬಿಬಿಎಂಪಿಯಲ್ಲಿ ಚುನಾಯಿತ ಪ್ರತಿನಿಧಿಗಳ ಆಡಳಿತ ವ್ಯವಸ್ಥೆ ಇಲ್ಲದೆ ಎರಡು ವರ್ಷ ಸಮೀಪಿಸುತ್ತಿದೆ. ಆಡಳಿತದ ಚುಕ್ಕಾಣಿ ಹಿಡಿದಿರುವ ಅಧಿಕಾರಿಗಳು ಜನರ ಸಂಕಷ್ಟಗಳಿಗೆ ಸ್ಪಂದಿಸಬೇಕಾದ ಉತ್ತರದಾಯಿತ್ವ ಇಲ್ಲದವರಂತೆ ವರ್ತಿಸುತ್ತಿದ್ದಾರೆ. ಬೆಂಗಳೂರು ಅಭಿವೃದ್ಧಿ ಖಾತೆಯನ್ನೂ ಹೊಂದಿರುವ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು 'ಬ್ರ್ಯಾಂಡ್ ಬೆಂಗಳೂರು' ಹೆಸರಿನಡಿ ದೊಡ್ಡ ಯೋಜನೆಗಳನ್ನು ಜಾರಿಗೊಳಿಸುವುದಕ್ಕೇ ಹೆಚ್ಚು ಉತ್ಸುಕರಾಗಿದ್ದಾರೆ. ಇನ್ನೂ ಒಂದು ಹೆಜ್ಜೆ ಮುಂದಕ್ಕೆ ಹೋಗಿ 'ಗ್ರೇಟರ್ ಬೆಂಗಳೂರು ಪ್ರಾಧಿಕಾರ' ರಚಿಸುವ ಉಮೇದಿನಲ್ಲಿದ್ದಾರೆ. ಈ ಎಲ್ಲದರ ಮಧ್ಯೆ ನಗರದಲ್ಲಿ ಮಳೆಗಾಲ ಎದುರಿಸುವ ಸಿದ್ಧತೆ ಮತ್ತು ಪ್ರವಾಹ, ಮಹಾಪೂರ ತಡೆಯುವ ಕ್ರಮಗಳಿಗೆ ಆದ್ಯತೆ ಸಿಗುತ್ತಿಲ್ಲ. ಸಾವಿರಾರು ಕೋಟಿ ರೂಪಾಯಿ ಹೂಡಿಕೆಯ ಹೊಸ ಯೋಜನೆಗಳನ್ನು ಜಾರಿಗೊಳಿಸುವುದಕ್ಕೂ ಮೊದಲು ನಗರದ ಮೂಲಸೌಕರ್ಯದ ಕೊರತೆಯನ್ನು ನೀಗಿಸಿ ನಗರದ ಜನರನ್ನು ಮಳೆ ಅನಾಹುತ, ಮಹಾಪೂರಗಳಿಂದ ಪಾರು ಮಾಡಬೇಕಾದುದು ಬಿಬಿಎಂಪಿ ಹಾಗೂ ರಾಜ್ಯ ಸರ್ಕಾರದ ಜವಾಬ್ದಾರಿ. ಇನ್ನೂ ಮಳೆಗಾಲ ಮುಗಿದಿಲ್ಲ. ನಗರದಲ್ಲಿ ಹಿಂಗಾರು ಅವಧಿಯಲ್ಲಿ ಹೆಚ್ಚು ಮಳೆ ಬೀಳುವ ಮುನ್ಸೂಚನೆಗಳಿವೆ. ಮತ್ತಷ್ಟು ದುರಂತಗಳಾಗುವುದನ್ನು ತಪ್ಪಿಸಲು ರಾಜಕಾಲುವೆಗಳ ದುರಸ್ತಿ, ಒತ್ತುವರಿ ತೆರವು ಸೇರಿದಂತೆ ಪ್ರವಾಹ ತಡೆಗೆ ಅಗತ್ಯವಿರುವ ಎಲ್ಲ ಕ್ರಮಗಳನ್ನೂ ತುರ್ತಾಗಿ ಕೈಗೊಳ್ಳಬೇಕು. ಈ ದಿಸೆಯಲ್ಲಿ ಬಿಬಿಎಂಪಿ ಆಡಳಿತವನ್ನು ಚುರುಕುಗೊಳಿಸಬೇಕಾದ ಜವಾಬ್ದಾರಿ ಉಪಮುಖ್ಯಮಂತ್ರಿ ಮೇಲಿದೆ.

ದಿನದ ಟ್ವೀಟ್

ಏನಿದರ ಮರ್ಮ?



ಎರಡು ಅತ್ಯಾಚಾರಗಳು ಮತ್ತು ಕೊಲೆಯ ಅಪರಾಧಕ್ಕಾಗಿ ಶಿಕ್ಷೆಗೆ ಒಳಗಾಗಿರುವ ಗುರ್ಮೀತ್ ರಾಮ್ ರಹೀಂಗೆ ಹರಿಯಾಣ ಸರ್ಕಾರ ನಿರೀಕ್ಷೆಯಂತೆಯೇ ಮತ್ತೊಮ್ಮೆ ಪೆರೋಲ್ ನೀಡಿದೆ. 7 ವರ್ಷಗಳಲ್ಲಿ ಆತ 244 ದಿನಗಳ ಪೆರೋಲ್ ಪಡೆದಿದ್ದಾನೆ. ಬಹುತೇಕವಾಗಿ, ಹರಿಯಾಣದಲ್ಲಿ ಚುನಾವಣೆಗಳು ಇದ್ದಾಗಲೇ ಹೀಗೆ ಆಗಿದೆ. ಈ ಬಾರಿ, ಸಾರ್ವತ್ರಿಕ ಚುನಾವಣೆಯ ಸಂದರ್ಭದಲ್ಲಿ 51 ದಿನಗಳ ಪೆರೋಲ್ ಸಿಕ್ಕಿತ್ತು. #DoubleStandards

ಕೀರ್ತಿ ಆಜಾದ್, ಟಿಎಂಸಿ ಸಂಸದ

ಕಿಡಿನುಡಿ



ಅಹಮದಾಬಾದ್‌ನಲ್ಲಿ ಕಿರುಕುಳ ನೀಡಿದ ವ್ಯಕ್ತಿಯನ್ನು ವಿದ್ಯಾರ್ಥಿನಿಯರು ಧೈರ್ಯವಾಗಿ ಎದುರಿಸಿ, ರಸ್ತೆಯಲ್ಲಿ ಆತನಿಗೆ ಬೆಲ್ಟ್‌ನಿಂದ ಬಾರಿಸಿದ್ದಾರೆ. ಇಂತಹ ದಿಟ್ಟತನದ ನಡೆ ಇನ್ನಷ್ಟು ಹೆಚ್ಚಬೇಕಾಗಿದೆ! ಅಂತಹ ರಾಕ್ಷಸರ ವಿರುದ್ಧ ಪ್ರತಿ ಹುಡುಗಿಯೂ ದನಿ ಎತ್ತುವಂತೆ ಆಗಬೇಕು.

ದಿವ್ಯಾ ಗಂಡೋತ್ರ ಟಂಡನ್, ಉದ್ಯಮಿ

25 ವರ್ಷಗಳ ಹಿಂದೆ

ಸೋಮವಾರ, 16-8-1999

● **ಸದ್ಯವೇ 'ಅಗ್ನಿ-2' ಸಿದ್ಧ: ಪ್ರಧಾನಿ**

ನವದೆಹಲಿ, ಆಗಸ್ಟ್ 15 (ಪಿಟಿಐ)– ದೂರಗಾಮಿ ಸಾಮರ್ಥ್ಯದ 'ಅಗ್ನಿ-2' ಕ್ಷಿಪಣಿ ಸದ್ಯದಲ್ಲೇ ದೇಶದ ಶಸ್ತ್ರಾಗಾರ ಸೇರಿಕೊಳ್ಳಲಿದೆ ಎಂದು ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಅವರು ಇಂದು ಇಲ್ಲಿ ಘೋಷಿಸಿದರು.

ದೇಶದ 53ನೇ ಸ್ವಾತಂತ್ರ್ಯೋತ್ಸವ ಸಂದರ್ಭದಲ್ಲಿ ಐತಿಹಾಸಿಕ ಕೆಂಪುಕೋಟೆಯಿಂದ ರಾಷ್ಟ್ರವನ್ನು ಉದ್ದೇಶಿಸಿ ಮಾತನಾಡಿದ ಅವರು, 'ನಾವು ಈಗ ಹಿಂದೆಂದಿಗಿಂತಲೂ ಪ್ರಬಲರಾಗಿದ್ದೇವೆ; ಪೊಖ್ರಾನ್ ಅಣುಸಾಧನ ಸ್ಫೋಟ ದೇಶಕ್ಕೆ ಅಗತ್ಯವಾದ ಸಾಮರ್ಥ್ಯ ಮತ್ತು ಆತ್ಮವಿಶ್ವಾಸವನ್ನು ನೀಡಿದೆ. ಭಾರಿ ಒತ್ತಡದ ಮಧ್ಯೆಯೂ ಅಗ್ನಿ-2 ಕ್ಷಿಪಣಿಯ ಪರೀಕ್ಷಾರ್ಥ ಪ್ರಯೋಗವನ್ನು ಯಶಸ್ವಿಯಾಗಿ ನಡೆಸಿದ್ದೇವೆ' ಎಂದು ಹೇಳಿದರು.

ಕಾಶ್ಮೀರದಲ್ಲಿ ಉಗ್ರಗಾಮಿ ಚಟುವಟಿಕೆಗಳಿಗೆ ಪಾಕಿಸ್ತಾನ ನೀಡುತ್ತಿರುವ ಬೆಂಬಲವನ್ನು ಸ್ಥಗಿತಗೊಳಿಸುವವರೆಗೆ ಆ ರಾಷ್ಟ್ರದ ಜತೆ ದ್ವಿಪಕ್ಷೀಯ ಮಾತುಕತೆ ಪುನರಾರಂಭಿಸುವ ಪ್ರಶ್ನೆಯೇ ಇಲ್ಲ ಎಂದು ಅವರು ಸ್ಪಷ್ಟಪಡಿಸಿದರು.

● **ಹೃದಯ ವೈಶಾಲ್ಯ ಮೆರೆಯಲಿ: ಪಟೇಲ್**

ಬೆಂಗಳೂರು, ಆಗಸ್ಟ್ 15– ಭಾರತೀಯರೆಲ್ಲರೂ ಒಂದೇ ಎಂಬ ಭಾವನೆಯೊಂದಿಗೆ ಬದುಕಲು ಮನೋಭೂಮಿಕೆ ಸಿದ್ಧಪಡಿಸಬೇಕಾಗಿದೆ ಎಂದು ಮುಖ್ಯಮಂತ್ರಿ ಜೆ.ಎಚ್. ಪಟೇಲ್ ಇಂದು ಇಲ್ಲಿ ಕರೆ ನೀಡಿದರು.

'ದೇಶದಲ್ಲಿ ಜಾತಿ, ಮತ, ಧರ್ಮ, ಭಾಷೆ ಹಾಗೂ ಪ್ರಾಂತ್ಯಗಳಂತಹ ಅತಿ ಸೂಕ್ಷ್ಮ ವಿಚಾರಗಳಲ್ಲಿ ಭಿನ್ನಾಭಿಪ್ರಾಯ ತಲೆದೋರಿ ಸ್ಫೋಟಕ ಪರಿಸ್ಥಿತಿಗೆ ಅವಕಾಶವಾಗದಂತೆ ಹೃದಯ ವೈಶಾಲ್ಯ ಮೆರೆಯಬೇಕಿದೆ' ಎಂದರು.

ಫೀಲ್ಡ್ ಮಾರ್ಷಲ್ ಮಾಣೆಕ್‌ಷಾ ಪರೇಡ್ ಮೈದಾನದಲ್ಲಿ ನಡೆದ ಸ್ವಾತಂತ್ರ್ಯೋತ್ಸವದಲ್ಲಿ ಧ್ವಜಾರೋಹಣ ಮಾಡಿ ಮಾತನಾಡುತ್ತಿದ್ದ ಅವರು, ಗಡಿ ರೇಖೆಯನ್ನು ದಾಟಿ ಒಳನುಗ್ಗುವ ಶತ್ರುಗಳನ್ನು ಭಾರತೀಯ ಸೇನೆ ಹಿಮ್ಮೆಟ್ಟಿಸಿದರೆ ದೇಶದ ಒಳಗಡೆ ಸಂಚು ನಡೆಸುತ್ತಿರುವ ಆಂತರಿಕ ಶತ್ರುಗಳನ್ನು ಹೊಣೆಗಾರಿಕೆಯಿಂದ ಪ್ರಜೆಗಳು ಹತ್ತಿಕ್ಕಬೇಕಾಗಿದೆ ಎಂದರು.

ಸರ್ಕಾರವನ್ನು ಕಿತ್ತೊಗೆಯಲು ಹೊರಟವರ ಬುಡವೇ ಅಲುಗಾಡುತ್ತಿದೆ

ವಿಜಯೇಂದ್ರ ವಿರುದ್ಧ ಭಿನ್ನರ 'ಯುದ್ಧ'



ಗತಿಬಿಂಬ

ವೈ.ಗ. ಜಗದೀಶ್

'ಕಾಂಗ್ರೆಸ್ ನೇತೃತ್ವದ ಸರ್ಕಾರವನ್ನು ಕಿತ್ತೊಗೆಯುವವರೆಗೆ ವಿರಮಿಸುವುದಿಲ್ಲ' ಎಂದು ಬಿಜೆಪಿ ನಾಯಕರು ಅಬ್ಬರಿಸಿ ವಾರ ಕಳೆಯುವಷ್ಟರಲ್ಲೇ, ರಾಜ್ಯದಲ್ಲಿ 'ಕಮಲ'ದ ಬುಡ ಅಲುಗಾಡತೊಡಗಿದೆ.

ವಾಲ್ಮೀಕಿ ಅಭಿವೃದ್ಧಿ ನಿಗಮದ ಅವ್ಯವಹಾರ ಹಾಗೂ ಮುಡಾ ನಿವೇಶನ ಹಂಚಿಕೆಯಲ್ಲಿ ಅಕ್ರಮದ ಹೊಣೆ ಹೊತ್ತು ಮುಖ್ಯಮಂತ್ರಿ ಸಿದ್ದರಾಮಯ್ಯ ರಾಜೀನಾಮೆ ಕೊಡಬೇಕೆಂದು ಆಗ್ರಹಿಸಿ, ವಿಧಾನಮಂಡಲದ ಉಭಯ ಸದನಗಳಲ್ಲಿ ಮೈತ್ರಿಕೂಟದ ನಾಯಕರು ಹೋರಾಟ ನಡೆಸಿದರು. ಬಿಜೆಪಿ ಶಾಸಕಾಂಗ ಪಕ್ಷದ ನಾಯಕ ಆರ್. ಅಶೋಕ ಹಾಗೂ ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ನಡೆಯ ವಿರುದ್ಧ ಬಸನಗೌಡ ಪಾಟೀಲ ಯತ್ನಾಳ ಸದನದಲ್ಲೇ ಕುಟುಕಿದ್ದರು.

ಇಲ್ಲಿನ 'ಹೊಂದಾಣಿಕೆ ರಾಜಕಾರಣ'ದ ಅರಿವಿಲ್ಲದೇ ಇರುವ ಬಿಜೆಪಿಯ ರಾಜ್ಯ ಉಸ್ತುವಾರಿ ರಾಧಾಮೋಹನ್ ದಾಸ್ ಅಗರ್‌ವಾಲ್, ಹೋರಾಟವನ್ನು ತಾರ್ಕಿಕ ಅಂತ್ಯಕ್ಕೆ ಕೊಂಡೊಯ್ಯಬೇಕೆಂದು ಕಟ್ಟಪ್ಪಣೆ ಹೊರಡಿಸಿದರು. ತಮ್ಮ ಪಕ್ಷ ಹಾಗೂ ಜೆಡಿಎಸ್ ನಾಯಕರ ಜತೆಗೆ ಚರ್ಚೆ ಮಾಡದೇ, ಸಿದ್ದರಾಮಯ್ಯ ರಾಜೀನಾಮೆಗೆ ಆಗ್ರಹಿಸಿ ಮೈಸೂರಿನವರೆಗೆ ಪಾದಯಾತ್ರೆ ನಡೆಸುವುದಾಗಿ ವಿಜಯೇಂದ್ರ ಏಕಾಏಕಿ ಘೋಷಿಸಿಬಿಟ್ಟರು.

'ಯಾರನ್ನು ಕೇಳಿ ಯಾತ್ರೆ ಮಾಡುತ್ತಿದ್ದೀರಿ? ನಮ್ಮ ನೈತಿಕ ಬೆಂಬಲ ನಿಮಗೆ ಇಲ್ಲ' ಎಂದು ಜೆಡಿಎಸ್ ನಾಯಕ ಎಚ್.ಡಿ.ಕುಮಾರಸ್ವಾಮಿ ಆರಂಭದಲ್ಲೇ ಅಪಸ್ವರ ತೆಗೆದರು. ಬಿಜೆಪಿ ವರಿಷ್ಠರ ಸಂಧಾನದ ಬಳಿಕ, ಕುಮಾರಸ್ವಾಮಿ ಯೂಟರ್ನ್ ಹೊಡೆದರು.

ಇತ್ತ ಬಿಜೆಪಿಯಲ್ಲಿ, 'ಭ್ರಷ್ಟರು ಭ್ರಷ್ಟರನ್ನು ರಕ್ಷಿಸುವ ಯಾತ್ರೆ. ಸಿದ್ದರಾಮಯ್ಯ ಅವರನ್ನು ಇಳಿಸಿ ಡಿ.ಕೆ. ಶಿವಕುಮಾರ್ ಅವರನ್ನು ಮುಖ್ಯಮಂತ್ರಿಯಾಗಿಸಲು ವಿಜಯೇಂದ್ರ ಯಾತ್ರೆ ನಡೆಸುತ್ತಿದ್ದಾರೆ' ಎಂದು ಟೀಕಿಸಿದ ಯತ್ನಾಳ, ಪಕ್ಷದ ನಾಯಕತ್ವಕ್ಕೆ ಸಡ್ಡು ಹೊಡೆದರು. ಮತ್ತೊಬ್ಬ ಶಾಸಕ ರಮೇಶ ಜಾರಕಿಹೊಳಿ ಅವರನ್ನೂ ತಮ್ಮ ಜತೆ ಸೇರಿಸಿಕೊಂಡರಲ್ಲದೆ, ಕೂಡಲ ಸಂಗಮದಿಂದ ಬಳ್ಳಾರಿಯವರೆಗೆ ಪಾದಯಾತ್ರೆ ನಡೆಸುವುದಾಗಿಯೂ ಘೋಷಿಸಿದರು. ಮೈತ್ರಿ ನಾಯಕರ ಪಾದಯಾತ್ರೆ ಯಶಸ್ವಿಯಾದರೂ ಯಾವುದೇ ಪರಿಣಾಮ ಬೀರಲಿಲ್ಲ. ಆದರೆ, ವಿಜಯೇಂದ್ರ ಅವರ ವರ್ಚಸ್ಸು ಹೆಚ್ಚಿಸಿ, ಪಕ್ಷದಲ್ಲಿ ಹಿಡಿತ ಸಾಧಿಸಲು ನೆರವಾಯಿತು ಎಂಬುದು ಯಾವಾಗ ಅರಿವಿಗೆ ಬಂತೋ ಆಗ ಅವರ ವಿರೋಧಿ ಬಣ ಜಾಗೃತವಾಯಿತು. ವಿಜಯೇಂದ್ರ ವಿರುದ್ಧ ಸೆಟೆದು ನಿಂತಿದ್ದ ಒಂದಿಬ್ಬರ ತಂಡ ಈಗ ಗುಂಪುಗೂಡುತ್ತಿದೆ. ಯಡಿಯೂರಪ್ಪ ಆಪತ್ತಿಗೆ ಸಿಲುಕಿದಾಗೆಲ್ಲ, ಏರಿದ ಧ್ವನಿಯಲ್ಲಿ ಸಮರ್ಥನೆಗೆ ನಿಲ್ಲುತ್ತಿದ್ದ ಹರಿಹರ ಶಾಸಕ ಬಿ.ಪಿ. ಹರೀಶ್, ಈಗ ಎದುರು ಪಾಳಯಕ್ಕೆ ಜಿಗಿದಿದ್ದಾರೆ. ವಿಧಾನ ಪರಿಷತ್ ಸದಸ್ಯ ಸಿ.ಟಿ. ರವಿ, ವಿಧಾನಸಭೆ ವಿರೋಧ ಪಕ್ಷದ ಉಪನಾಯಕ ಅರವಿಂದ ಬೆಲ್ಲದ ಮೆದು ದನಿಯಲ್ಲಿ ಬೆಂಬಲ ಸೂಚಿಸಿದ್ದಾರೆ. ವಿಜಯೇಂದ್ರ ವಿರುದ್ಧ ಸಮರಕ್ಕೆ ವೇದಿಕೆ ಸಿದ್ಧವಾಗುತ್ತಿರುವುದು ಸ್ಪಷ್ಟ.

ಈ ಬೆಳವಣಿಗೆಯ ಮಧ್ಯೆಯೇ, 'ವಿಜಯೇಂದ್ರ ಗೆದ್ದಿರುವುದು ಕಾಂಗ್ರೆಸ್ ಭಿಕ್ಷೆಯಿಂದ' ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ನೀಡಿದ ಹೇಳಿಕೆ 'ಹೊಂದಾಣಿಕೆ ರಾಜಕಾರಣ'ದ ಮಗ್ಗುಲನ್ನು ಬಿಚ್ಚಿಟ್ಟಿದೆ. ಶಿವಕುಮಾರ್ ನೇತೃತ್ವದಲ್ಲಿಯೇ 2023ರ ವಿಧಾನಸಭೆ ಚುನಾವಣೆ ನಡೆದಿತ್ತು. ಶಿಕಾರಿಪುರದಲ್ಲಿ ಪ್ರಬಲರಾಗಿದ್ದ ಕಾಂಗ್ರೆಸ್‌ನ ನಾಗರಾಜ ಗೌಡ ಬದಲಿಗೆ, ಗೋಣಿ ಮಾಲತೇಶ್ ಅವರಿಗೆ ಆ ಪಕ್ಷ ಟಿಕೆಟ್ ನೀಡಿತ್ತು. ನಾಗರಾಜ ಗೌಡ ಬಂಡಾಯ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದರು. ಪಕ್ಷದ ಯಾವೊಬ್ಬ ನಾಯಕರೂ ಶಿಕಾರಿಪುರಕ್ಕೆ ಹೋಗಲಿಲ್ಲ. ಮಾಲತೇಶ್ 7,666 ಮತ ಪಡೆದರೆ, ನಾಗರಾಜ ಗೌಡ 10 ಸಾವಿರ ಮತಗಳ ಅಂತರದಿಂದ ಸೋತಿದ್ದರು. ಕಾಂಗ್ರೆಸ್ ಗೆಲುವಿಗಿಂತ ವಿಜಯೇಂದ್ರ ದಾರಿ ಸಲೀಸು ಮಾಡಿಕೊಡುವ ಲೆಕ್ಕಾಚಾರ ಇದರ ಹಿಂದಿತ್ತು ಎಂಬುದೇನೂ ರಹಸ್ಯವಲ್ಲ.

ಸಿದ್ದರಾಮಯ್ಯ ಸ್ಪರ್ಧಿಸಿದ್ದ ವರುಣ ಕ್ಷೇತ್ರದಲ್ಲಿ ವಿ. ಸೋಮಣ್ಣ ಬೆಂಬಲಕ್ಕೆ ಹಲವರು ನಿಲ್ಲಲಿಲ್ಲ. ಅಮಿತ್ ಶಾ ಭಾಷಣ ಮಾಡುತ್ತಿದ್ದಾಗಲೇ ಯಡಿಯೂರಪ್ಪ ವೇದಿಕೆಯಿಂದ ಇಳಿದು ಹೋಗಿದ್ದರು. ತಮ್ಮ ಸೋಲಿಗೆ ಕೆಲವರ ಪಿತೂರಿ ಕಾರಣ ಎಂದು ಸೋಮಣ್ಣ ಅನೇಕ ಬಾರಿ ಹೇಳಿದ್ದುಂಟು. ಈಗ ಹೊಂದಾಣಿಕೆ ಹಾಗೂ ಕುಟುಂಬ ರಾಜಕಾರಣದ ವಿರುದ್ಧ ಹೋರಾಡುವುದಾಗಿ ಗರ್ಜಿಸುತ್ತಿರುವ ಗುಂಪಿನ ನಡೆ- ನುಡಿಯಲ್ಲಿ, ಯಡಿಯೂರಪ್ಪ ಕುಟುಂಬದ ಹಿಡಿತದಿಂದ ಪಕ್ಷವನ್ನು ಹೊರತರುವ ಯತ್ನ ಕಾಣಿಸುತ್ತದೆ. ಪಾದಯಾತ್ರೆ ಮುನ್ನಡೆಸಿದ ವಿಜಯೇಂದ್ರ, ಪಕ್ಷದಲ್ಲಿ ತಮ್ಮ ಹಿಡಿತ ಬಿಗಿಗೊಳಿಸಲು ಸತತ ಯತ್ನ ನಡೆಸುತ್ತಿದ್ದಾರೆ. 48ರ ಪ್ರಾಯದ ಅವರು ಕನಿಷ್ಠ 20 ವರ್ಷ ರಾಜಕಾರಣ ಮಾಡಬಲ್ಲರು. ಅವರ ಕೈಗೆ ಪಕ್ಷವನ್ನು ಕೊಟ್ಟರೆ ತಮಗೆ ಏಳಿಗೆಯೇ ಇಲ್ಲವೆಂಬುದು ದೆಹಲಿಯಲ್ಲಿ ಕುಳಿತು ಕರ್ನಾಟಕದ ರಾಜಕಾರಣವನ್ನು ನಿಯಂತ್ರಿಸುವವರ ಚಿಂತೆ.

ಯಡಿಯೂರಪ್ಪನವರನ್ನು ಅಧಿಕಾರದಿಂದ ಇಳಿಸಿದಾಗಲೇ, ಅವರನ್ನು ಹೊರಗಟ್ಟುವ ಯತ್ನ ನಡೆದಿತ್ತು. ಲೋಕಸಭೆ ಚುನಾವಣೆಯಲ್ಲಿ ಅಧಿಕಾರ ಹಿಡಿಯುವಷ್ಟು ಸಂಖ್ಯಾಬಲ ಸಿಗುವುದಿಲ್ಲ ಎಂದು ಗೊತ್ತಾದಾಗ ಕರ್ನಾಟಕದಲ್ಲಿ ಸಂಖ್ಯೆ ಹೆಚ್ಚಿಸಿಕೊಳ್ಳುವ ಅನಿವಾರ್ಯ ಪ್ರಧಾನಿ ನರೇಂದ್ರ ಮೋದಿ ಮತ್ತು ಗೃಹ ಸಚಿವ ಅಮಿತ್ ಶಾ ಅವರಿಗೆ ಎದುರಾಯಿತು. ಅದಕ್ಕೆ, ಮತ್ತೆ ಯಡಿಯೂರಪ್ಪನವರ ಆಸರೆ ಬೇಕಾಯಿತು. ವಿಧಾನಸಭೆ ಚುನಾವಣೆ ಸೋಲಿನ ಬಳಿಕ ನಾಯಕತ್ವವನ್ನು ಯಾರಿಗೆ ವಹಿಸಬೇಕು ಎಂಬ ಚರ್ಚೆ ನಡೆದಿತ್ತು. ಮುಖ್ಯ ಸಚೇತಕನ ಸ್ಥಾನ ಸಿಕ್ಕಿದರೂ ಸಾಕೆಂಬ ಹವಣಿಕೆಯಲ್ಲಿ ವಿಜಯೇಂದ್ರ ಇದ್ದರು. ಮಗನಿಗೆ ಪಟ್ಟ ಕಟ್ಟಿದರಷ್ಟೇ ಯಡಿಯೂರಪ್ಪ ಪ್ರಚಾರಕ್ಕೆ ಬರಲಿದ್ದಾರೆ ಎಂಬ ಸುಳಿವು ಪಡೆದ ಮೋದಿ- ಶಾ ಜೋಡಿ, ಅಧ್ಯಕ್ಷ ಸ್ಥಾನವನ್ನೇ ದಯಪಾಲಿಸಿತು. ಚುನಾವಣೆಯಲ್ಲಿ ದೊಡ್ಡಮಟ್ಟದ ಗೆಲುವು ಅಸಾಧ್ಯವೆಂದಾದಾಗ, ಜೆಡಿಎಸ್ ಜತೆ ಮೈತ್ರಿ ಮಾಡಿಕೊಳ್ಳುವ ತೀರ್ಮಾನಕ್ಕೆ ಮೋದಿ-ಶಾ ಬಂದರು. ಮೈತ್ರಿ ಇಲ್ಲದೇ ಚುನಾವಣೆ ಎದುರಿಸಿದ್ದರೆ, ಈಗ ಬಂದಿರುವ ಫಲಿತಾಂಶದ ಬದಲು ಕಾಂಗ್ರೆಸ್ 17, ಬಿಜೆಪಿ 9 ಸ್ಥಾನ ಪಡೆಯುತ್ತಿದ್ದವು.



ಲಿಂಗಾಯತರೆಲ್ಲರೂ ಯಡಿಯೂರಪ್ಪನವರ ಜತೆಗಿಲ್ಲ ಎಂಬುದು ಬಿಜೆಪಿ ವರಿಷ್ಠರಿಗೆ ಗೊತ್ತಾದ ಬಳಿಕ, ಒಂದು ಕುಟುಂಬದ ಹಿಡಿತವನ್ನು ತಪ್ಪಿಸಬೇಕೆಂಬ ಕೂಗು ಏಳಲು ಶುರುವಾಯಿತು. ಲೋಕಸಭೆ ಚುನಾವಣೆಯಲ್ಲಿ ಬಂಡಾಯ ಅಭ್ಯರ್ಥಿಯಾಗಿ ಸ್ಪರ್ಧಿಸುವ ಮುನ್ನ ಕೆ.ಎಸ್. ಈಶ್ವರಪ್ಪ ಇದೇ ಮಾತು ಹೇಳಿದ್ದರು. ಪ್ರಲ್ಹಾದ ಜೋಶಿ, ರಮೇಶ ಜಾರಕಿಹೊಳಿ ಶಿವಮೊಗ್ಗ ಭೇಟಿಯ ಬಳಿಕವೇ ಈಶ್ವರಪ್ಪ ಅವರು ಸ್ಪರ್ಧೆಯ ಘೋಷಣೆ ಮಾಡಿದ್ದರು.

ಬಿಜೆಪಿಯಲ್ಲಿ ಈಗ ಯಡಿಯೂರಪ್ಪ ಬಣ, ರಾಷ್ಟ್ರೀಯ ಸಂಘಟನಾ ಕಾರ್ಯದರ್ಶಿ ಬಿ.ಎಲ್. ಸಂತೋಷ್– ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಬಣ, ಸದಾನಂದ ಗೌಡ, ಬಸವರಾಜ ಬೊಮ್ಮಾಯಿ, ಆರ್. ಅಶೋಕ ಅಂತಹವರ ತಟಸ್ಥ ಬಣಗಳು ಹುರಿಗೊಳ್ಳುತ್ತಿವೆ. ಯಡಿಯೂರಪ್ಪ ಮತ್ತು ವಿಜಯೇಂದ್ರ ವಿರುದ್ಧ ಬಸನಗೌಡ ಪಾಟೀಲ ಯತ್ನಾಳ, ಎಚ್.ವಿಶ್ವನಾಥ್, ಕೆ.ಎಸ್.ಈಶ್ವರಪ್ಪ ಹೀಗೆ ಕೆಲವರೇ ಮಾತನಾಡುತ್ತಿದ್ದರು. ಅವರ ಪೈಕಿ ಯತ್ನಾಳ, ಪಕ್ಷದ ಅಧ್ಯಕ್ಷ ಅಥವಾ ವಿರೋಧ ಪಕ್ಷದ ನಾಯಕ ಸ್ಥಾನದ ಅಪೇಕ್ಷೆಯಲ್ಲಿದ್ದರು. ಅವರನ್ನೇ ಮುಂದೆ ಬಿಟ್ಟು, ವಿಜಯೇಂದ್ರ ಹಟಾವೋ ಹೋರಾಟ ಆರಂಭಿಸಿದಂತಿದೆ. ಭಿನ್ನರ ವಿರುದ್ಧ ಶಿಸ್ತು ಕ್ರಮ ಇಲ್ಲದೇ ಇರುವುದನ್ನು ನೋಡಿದರೆ, ವರಿಷ್ಠರ ಆಶೀರ್ವಾದವೇ ಇದ್ದಂತಿದೆ.

ಯಡಿಯೂರಪ್ಪ ಅಧಿಕಾರದಲ್ಲಿದ್ದಾಗ ಬಣ ರಾಜಕೀಯಕ್ಕೆ ಕಾರಣರಾಗಿದ್ದ ಸಂತೋಷ್ ಈಗ ನೇರವಾಗಿ ಕಾಣಿಸಿಕೊಂಡಿಲ್ಲ. ಎಚ್.ಡಿ.ಕುಮಾರಸ್ವಾಮಿ ನೇತೃತ್ವದ ಮೈತ್ರಿ ಸರ್ಕಾರವನ್ನು ಕೆಡವಲು ಕಾರಣರಾದವರು ಈಗ ಒಂದುಗೂಡಿದ್ದಾರೆ. ವಿಜಯೇಂದ್ರ ವಿರುದ್ಧ ಈಗ ಗುಡುಗುತ್ತಿರುವವರೆಲ್ಲ ಸಂತೋಷ್ ಆಪ್ತ ವರ್ಗದಲ್ಲಿ ಇರುವವರು. ರಮೇಶ ಜಾರಕಿಹೊಳಿ, ಪ್ರಲ್ಹಾದ ಜೋಶಿಯವರ ಖಾಸಾ ಗುಂಪಿನಲ್ಲಿದ್ದಾರೆ.

ಈ ಎಲ್ಲದರ ಮಧ್ಯೆ, ಎಚ್.ಡಿ. ಕುಮಾರಸ್ವಾಮಿ ನಿರ್ದೇಶನದಂತೆ ಇಲ್ಲಿ ಬಿಜೆಪಿ ಚಟುವಟಿಕೆ ನಡೆಯುತ್ತಿದೆ. ಇದು ಮುಂದುವರಿದರೆ ವಿಜಯೇಂದ್ರ ಮತ್ತು ಕುಮಾರಸ್ವಾಮಿ ಮೇಲುಗೈ ಸಾಧಿಸಬಹುದು ಎಂಬ ಆತಂಕವೂ, ಹಿಂದೆ ಕುಮಾರಸ್ವಾಮಿಯವರಿಂದ 'ಪೇಶ್ವೆ' ಎಂದು ಕರೆಸಿಕೊಂಡವರಿಗೆ ಇದ್ದಂತಿದೆ. ಭಿನ್ನರ ಚಟುವಟಿಕೆ ಬಿರುಸಾಗಲೂ ಇದು ಕಾರಣವಾಗಿದೆ.

ತಮ್ಮ ಮನೆ ಭದ್ರಪಡಿಸಿಕೊಂಡು, ಅಲ್ಲಿ ನೆಮ್ಮದಿಯಿಂದ ಬದುಕುವುದು ಜಾಣರ ಲಕ್ಷಣ. ಆದರೆ, ತಮ್ಮ ಮನೆಯ ಗೋಡೆ ಅದುರಿ, ಗಳ ಚದುರಿರುವ ಹೊತ್ತಿನಲ್ಲೇ ಇನ್ನೊಬ್ಬರ ಮನೆ ಮುರಿಯುವ ಕೆಲಸ ದಡ್ಡರ ಗುಣ.

ಚುರುಮುರಿ



ಸ್ಪೆಷಲ್ ಗಿಫ್ಟ್!

● ಬಿ.ಎನ್.ಮಲ್ಲೇಶ್

'ಲೇ ಪಮ್ಮು, ಇವತ್ತು ನಿಂಗೊಂದು ಸರ್‌ಪ್ರೈಜ್ ಗಿಫ್ಟ್ ತಂದಿದೀನಿ ಕಣೆ, ವೆರಿ ಸ್ಪೆಷಲ್... ನಿನಗಾಗಿ' ಎಂದ ತೆಪರೇಸಿ.

ಮಡದಿ ಪಮ್ಮಿಗೆ ಆಶ್ಚರ್ಯ, 'ಹೌದಾ? ಡ್ರಾಮಾ ಅಲ್ಲ ತಾನೆ? ಏನ್ ತಂದಿದೀರಿ?'

'ನೋಡು ಇದೇ ಬ್ಯಾಡ ಅನ್ನೋದು. ನಾ ತಂದಿರೋ ಗಿಫ್ಟು ನಿನ್ ಫ್ರೆಂಡ್ಸ್ ಹತ್ರ ಇರೋಕೆ ಸಾಧ್ಯವೇ ಇಲ್ಲ'.

'ಹೌದಾ? ಅಂಥದೇನಪ ಅದು, ಫಾರಿನ್ ಪರ್ಫ್ಯೂಮಾ?'

'ಏಯ್, ಅದೆಲ್ಲ ಜುಜುಬಿ'.

'ಮತ್ತೆ ಸೀರೆನಾ? ಕಾಂಜೀವರಂ?'

'ಕಾಂಜೀನೂ ಅಲ್ಲ, ಪೀಂಜೀನೂ ಅಲ್ಲ'.

'ಮತ್ತೇನಪ್ಪ ಬಳೆ, ನೆಕ್ಲೇಸ್?'

'ಹ್ಞಾಂ... ಈವರೆಗೆ ಯಾರೂ ಹಾಕಿರದ ಸ್ಪೆಷಲ್ ಡಿಸೈನ್ ನೆಕ್ಲೇಸ್ ತಂದಿದೀನಿ'.

'ಹೌದಾ? ಚಿನ್ನದ್ದಾ... ಏನ್ರಿ ಲಾಟ್ರಿ ಗೀಟ್ರಿ ಹೊಡೀತಾ?'

'ಇದಕ್ಯಾಕೆ ಲಾಟ್ರಿ ಹೊಡೀಬೇಕು ಬಿಡೆ, ನೀನು ಯಾವಾಗ್ಲೂ ಕೇಳ್ತಿದ್ಯೆಲ್ಲ, ನನ್ ಫ್ರೆಂಡ್ಸ್ ಹತ್ರ ಅಂಥ ನೆಕ್ಲೇಸ್ ಇದೆ, ಇಂಥ ಬಳೆ ಇದೆ, ನೀವೇನೂ ಕೊಡ್ಸಲ್ಲ ಅಂತ'.

'ಹೌದುರೀ, ನನ್ ಫ್ರೆಂಡ್ಸ್ ಹತ್ರ ಇರೋ ಒಡವೆ ಡಿಸೈನು ಎಲ್ಲೂ ಸಿಗಲ್ಲ, ಕೆಲವರತ್ರ ಲಿಮಿಟೆಡ್ ಎಡಿಶನ್ಸ್ ಅದಾವೆ ಗೊತ್ತಾ?'

'ಆದ್ರೆ ನಾನು ತಂದಿರೋದು ಓನ್ಲಿ ಒನ್ ಎಡಿಶನ್, ಬೇರೆಲ್ಲೂ ಸಿಗಲ್ಲ'.

'ಮತ್ತೆ ಎಲ್ಲಿ ತೋರಿಸ್ರಿ ನೋಡಾಣ, ಎಷ್ಟಾತು ನೆಕ್ಲೇಸ್‌ಗೆ?'

'ದುಡ್ಡು ಮುಖ್ಯ ಅಲ್ಲ, ಆದ್ರೆ ನಾನು ತಂದಿರೋದು ಡಿಫರೆಂಟ್ ನೆಕ್ಲೇಸ್. ಹೆಸರೇನು ಗೊತ್ತಾ? ಒಲಿಂಪಿಕ್ ನೆಕ್ಲೇಸ್!'

'ಒಲಿಂಪಿಕ್ ನೆಕ್ಲೇಸಾ? ಎಲ್ಲಿ ತೋರ್ಸಿ ನೋಡಾಣ'.

ತೆಪರೇಸಿ ಮೆಲ್ಲಗೆ ಬಾಕ್ಸ್ ತೆರೆದು ನೆಕ್ಲೇಸ್ ತೆಗೆದಿಟ್ಟ. ಅದನ್ನು ನೋಡಿ ಪಮ್ಮಿ ಮುಖ ಒಂಥರಾ ಮಾಡಿದಳು. 'ಏನ್ರಿ ಇದು ಹಿಂಗಿದೆ?'

'ಅದು ಹಂಗೇ ಇರೋದು, ಹೊಸ ಟ್ರೆಂಡ್. ಐದು ಕಂಚು, ಒಂದು ಬೆಳ್ಳಿ ಪದಕದ ನೆಕ್ಲೇಸ್'.

'ಮತ್ತೆ ಚಿನ್ನ?'

'ಚಿನ್ನ ನಮ್ಮೋರು ಗೆಲ್ಲಲಿಲ್ಲ, ನಾನೇನ್ ಮಾಡ್ಲಿ?'

ಸಂಗತ

ಎಂ.ಟೆಕ್: ಓದಲು ನಿರಾಸಕ್ತಿಯೇಕೆ?

ಬೇಡಿಕೆಯೇ ಇರದ ಕೋರ್ಸ್‌ಗಳ ಸೀಟು ಭರ್ತಿಗಾಗಿ ಕೆಇಎ ಮೂಲಕ ಪ್ರವೇಶ ಪರೀಕ್ಷೆ ನಡೆಸಿ, ಸೀಟು ಹಂಚಿಕೆ ಮಾಡುವ ಅಗತ್ಯ ಇದೆಯೇ ಎನ್ನುವ ಪ್ರಶ್ನೆ ಎದ್ದಿದೆ

● ಎಚ್.ಕೆ.ಶರತ್

ಎಂ.ಟೆಕ್ ಕೋರ್ಸ್‌ಗೆ ಪ್ರವೇಶ ನೀಡಲು ನಡೆಸುವ ಪಿಜಿ-ಸಿಇಟಿ (ಸ್ನಾತಕೋತ್ತರ ಸಾಮಾನ್ಯ ಪ್ರವೇಶ ಪರೀಕ್ಷೆ) ರದ್ದುಗೊಳಿಸಿ, ಎಂಜಿನಿಯರಿಂಗ್ ಪದವಿಯಲ್ಲಿ ಗಳಿಸಿದ ಅಂಕಗಳ ಆಧಾರದಲ್ಲಿ ಪ್ರವೇಶ ನೀಡುವುದನ್ನು ಪರಿಗಣಿಸುವಂತೆ ಕೋರಿ ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ), ಉನ್ನತ ಶಿಕ್ಷಣ ಇಲಾಖೆಗೆ ಸಲ್ಲಿಸಿದ್ದ ಪ್ರಸ್ತಾವ ತಿರಸ್ಕೃತಗೊಂಡಿರುವುದಾಗಿ ವರದಿಯಾಗಿದೆ. ಹೀಗಾಗಿ, ಯಥಾರೀತಿಯಲ್ಲೇ ಪ್ರವೇಶಾತಿ ಪ್ರಕ್ರಿಯೆ ಮುಂದುವರಿಯಲಿದೆ.

ಸಾಮಾನ್ಯ ಪ್ರವೇಶ ಪರೀಕ್ಷೆಯನ್ನು ರದ್ದುಗೊಳಿಸಲು ಕೆಇಎ ನೀಡಿರುವ ಕಾರಣಗಳು ಗಮನಾರ್ಹ. ಪ್ರವೇಶ ಪರೀಕ್ಷೆ ತೆಗೆದುಕೊಳ್ಳಲು ವಿದ್ಯಾರ್ಥಿಗಳ ನಿರಾಸಕ್ತಿ, ಪರೀಕ್ಷೆ ತೆಗೆದುಕೊಂಡವರು ಕೂಡ ಒಂದೋ ಪರೀಕ್ಷೆಗೆ ಗೈರಾಗುವುದು ಅಥವಾ ಸ್ನಾತಕೋತ್ತರ ಪದವಿಗೆ ಪ್ರವೇಶ ಪಡೆಯದಿರುವುದನ್ನು ಕೆಇಎ ಉಲ್ಲೇಖಿಸಿದೆ. ಸೀಮಿತ ಸಂಖ್ಯೆಯ ವಿದ್ಯಾರ್ಥಿಗಳ ಸಲುವಾಗಿ ಪ್ರಾಧಿಕಾರದ ಸಂಪನ್ಮೂಲಗಳನ್ನು ವಿನಿಯೋಗಿಸುವುದು ಸೂಕ್ತವಲ್ಲ ಎನ್ನುವುದು ಅದರ ಅಭಿಮತ. ಈ ಬೆಳವಣಿಗೆಯನ್ನು ಕೆಲವರು ಖಾಸಗಿ ಕಾಲೇಜುಗಳ ಕ್ಯಾಪಿಟೇಷನ್ ಲಾಬಿಗೆ ಅನುಕೂಲ ಮಾಡಿಕೊಡುವ ಸಲುವಾಗಿ ಮಾಡಿರುವ ಶಿಫಾರಸು ಎಂದೇ ವಿಶ್ಲೇಷಿಸಿದರು.

ಎಂ.ಟೆಕ್ ಕೋರ್ಸ್‌ಗೆ ಪಿಜಿ-ಸಿಇಟಿ ರದ್ದುಗೊಳಿಸಲು ಕೆಇಎ ನೀಡಿರುವ ಕಾರಣಗಳು ವಾಸ್ತವಿಕ ನೆಲೆಗಟ್ಟಿನಲ್ಲಿಯೇ ಇವೆ. ಆದರೆ, ಸಾಮಾನ್ಯ ಪ್ರವೇಶ ಪರೀಕ್ಷೆ ರದ್ದುಗೊಳಿಸಿ ಪದವಿ ಅಂಕಗಳ ಆಧಾರದಲ್ಲಿ ಸೀಟು ಹಂಚಬಹುದು ಎನ್ನುವ ಸಲಹೆ ಸಮಸ್ಯಾತ್ಮಕ. ಎಲ್ಲ ಕಾಲೇಜು ಮತ್ತು ವಿಶ್ವವಿದ್ಯಾಲಯಗಳ ಎಂಜಿನಿಯರಿಂಗ್ ಪದವಿ ಅಂಕಗಳನ್ನೂ ಒಂದೇ ತಕ್ಕಡಿಯಲ್ಲಿಟ್ಟು ತೂಗುವುದು ಪಾರದರ್ಶಕ ನಡೆಯಲ್ಲ. ಸ್ವಾಯತ್ತ ಕಾಲೇಜುಗಳಲ್ಲಿ ಪರೀಕ್ಷೆಯ ಎಲ್ಲ ಪ್ರಕ್ರಿಯೆಗಳೂ ಆಯಾ ಕಾಲೇಜುಗಳ ಹಂತದಲ್ಲೇ ನಡೆಯುವುದರಿಂದ ಅಲ್ಲಿನ ವಿದ್ಯಾರ್ಥಿಗಳು ಪಡೆಯುವ ಅಂಕಗಳನ್ನು, ವಿಶ್ವವಿದ್ಯಾಲಯ ಹಂತದ ಪರೀಕ್ಷೆಗಳನ್ನು ಎದುರಿಸುವವರ ಅಂಕಗಳಿಗೆ ಸರಿಸಮನಾಗಿ ಪರಿಗಣಿಸಲಾಗದು. ಇನ್ನು ಖಾಸಗಿ ವಿಶ್ವವಿದ್ಯಾಲಯಗಳು ನೀಡುವ ಪದವಿ ಅಂಕಗಳನ್ನು ಯಥಾವತ್ತಾಗಿ ಪರಿಗಣಿಸಿ, ಅದರ ಆಧಾರದಲ್ಲಿ ಪ್ರವೇಶ ನೀಡುವುದು ಸೂಕ್ತವಲ್ಲ.

ಇದೇ ವೇಳೆ, ಎಂ.ಟೆಕ್ ಓದಲು ವಿದ್ಯಾರ್ಥಿಗಳು ಏಕೆ ಆಸಕ್ತಿ ತೋರುತ್ತಿಲ್ಲ ಎಂಬ ಕುರಿತು ಕೂಡ ಪರಾಮರ್ಶಿಸುವ ಅಗತ್ಯ ಇದೆ. ಎಂಜಿನಿಯರಿಂಗ್ ಪದವಿ ನಂತರವೂ ಓದು ಮುಂದುವರಿಸಲು ಬಯಸುವ ವಿದ್ಯಾರ್ಥಿಗಳ ಪೈಕಿ ಹಲವರು ಉನ್ನತ ವ್ಯಾಸಂಗಕ್ಕಾಗಿ ವಿದೇಶಿ ವಿಶ್ವವಿದ್ಯಾಲಯಗಳನ್ನು ಆರಿಸಿಕೊಳ್ಳುತ್ತಿದ್ದಾರೆ. ಮತ್ತೆ ಕೆಲವರು ಐಐಎಂಗಳತ್ತ ಮುಖ ಮಾಡುತ್ತಿದ್ದಾರೆ. ಹೀಗಾಗಿ, ಬಹಳಷ್ಟು ಕಾಲೇಜುಗಳಲ್ಲಿ ಲಭ್ಯವಿದ್ದ ಎಂ.ಟೆಕ್ ಕೋರ್ಸ್‌ಗಳನ್ನು ವಿದ್ಯಾರ್ಥಿಗಳು ದಾಖಲಾಗದ ಕಾರಣಕ್ಕೆ ಮುಚ್ಚಲಾಗಿದೆ. ಎಂ.ಟೆಕ್ ಕೋರ್ಸ್‌ಗಳನ್ನು ಇಂದಿಗೂ ನಡೆಸಿಕೊಂಡು ಹೋಗುತ್ತಿರುವ ಕಾಲೇಜುಗಳಲ್ಲೂ ಪರಿಸ್ಥಿತಿ ಆಶಾದಾಯಕವಾಗಿಲ್ಲ. ಗಣನೀಯ ಸಂಖ್ಯೆಯ ಸೀಟುಗಳು ಭರ್ತಿಯಾಗದೆ ಉಳಿಯುತ್ತಿವೆ. ಹೀಗಾಗಿ, ಬೇಡಿಕೆಯೇ ಇರದ ಕೋರ್ಸ್‌ಗಳ ಸೀಟು ಭರ್ತಿಗಾಗಿ ಪ್ರಾಧಿಕಾರದ ಮೂಲಕ ಪ್ರವೇಶ ಪರೀಕ್ಷೆ ನಡೆಸಿ, ಸೀಟು ಹಂಚಿಕೆ ಮಾಡುವ ಅಗತ್ಯ ಇದೆಯೇ ಎನ್ನುವ ಪ್ರಶ್ನೆ ಎದ್ದಿದೆ.

ಸರ್ಕಾರವು ಪ್ರಾಧಿಕಾರದ ಮೂಲಕ ನಡೆಸುವ ಸೀಟು ಹಂಚಿಕೆ ಪ್ರಕ್ರಿಯೆ ಪೂರ್ಣಗೊಂಡ ನಂತರವೂ ಉಳಿಯುವ ಸೀಟುಗಳಿಗೆ ಕಾಲೇಜುಗಳ ಹಂತದಲ್ಲಿ ಪ್ರವೇಶಾವಕಾಶ ಕಲ್ಪಿಸಲು ಈ ಹಿಂದೆ ವಿಧಿಸುತ್ತಿದ್ದ 'ಪಿಜಿ-ಸಿಇಟಿ ಬರೆದಿರಲೇಬೇಕು' ಎನ್ನುವ ನಿಯಮ ಸಡಿಲಿಸುವ ಕುರಿತು ಚಿಂತಿಸಬೇಕಿದೆ. ಮೊದಲಿಗೆ, ಇನ್ನು ಓದು ಮುಂದುವರಿಸುವುದು ಬೇಡವೆನ್ನುವ ಧೋರಣೆ ತಳೆದು ಪಿಜಿ-ಸಿಇಟಿ ಬರೆಯದ ಕೆಲ ವಿದ್ಯಾರ್ಥಿಗಳು, ನಾನಾ ಕಾರಣಗಳಿಗಾಗಿ ಆನಂತರ ಎಂ.ಟೆಕ್ ಕೋರ್ಸ್‌ಗೆ ಪ್ರವೇಶ ಪಡೆಯಲು ಆಸಕ್ತಿ ತೋರುವುದಿದೆ. ಉಳಿದಿರುವ ಸೀಟುಗಳನ್ನು ಇಂತಹ ವಿದ್ಯಾರ್ಥಿಗಳಿಗೆ ನೀಡಲು ತೊಡಕಾಗದ ಹಾಗೆ ನಿಯಮಾವಳಿಗಳಲ್ಲಿ ಬದಲಾವಣೆ ತರಬೇಕಿದೆ.



ಎಂ.ಟೆಕ್ ಓದಲು ವಿದ್ಯಾರ್ಥಿಗಳು ಏಕೆ ಆಸಕ್ತಿ ತೋರುತ್ತಿಲ್ಲ ಎಂಬ ಕುರಿತೂ ತಾಂತ್ರಿಕ ಶಿಕ್ಷಣ ವಲಯ ಚಿಂತಿಸಬೇಕಿದೆ. ಎಂ.ಟೆಕ್ ಓದುವ ಬದಲು ಉದ್ಯೋಗಕ್ಕೆ ತೆರಳಿ ವೃತ್ತಿ ಅನುಭವ ಪಡೆಯುವುದು ಸೂಕ್ತವೆನ್ನುವ ಅಭಿಪ್ರಾಯವಿದೆ. ಬೋಧನಾ ವೃತ್ತಿ ಆರಿಸಿಕೊಳ್ಳ ಬಯಸುವವರೇ ಹೆಚ್ಚಾಗಿ ಎಂ.ಟೆಕ್.ಗೆ ಪ್ರವೇಶ ಪಡೆಯುವುದು. ಉದ್ಯಮ ವಲಯದ ವೇತನಕ್ಕೆ ಹೋಲಿಸಿದರೆ, ಖಾಸಗಿ ಕಾಲೇಜುಗಳಲ್ಲಿ ಬೋಧಕರಿಗೆ ನೀಡುವ ವೇತನ ಕಡಿಮೆ ಇರುವುದರಿಂದಲೂ ಎಂ.ಟೆಕ್ ಓದಲು ಹಿಂಜರಿಯುತ್ತಿದ್ದಾರೆ.

ಕೆಲ ವರ್ಷಗಳಿಂದ ವಿದ್ಯಾರ್ಥಿಗಳು ಎಂ.ಟೆಕ್‌ಗೆ ದಾಖಲಾಗದೇ ಇರುವುದರಿಂದ ಕಾಲೇಜುಗಳಿಗೆ ಅಗತ್ಯ ಇರುವಷ್ಟು ಹೊಸ ಬೋಧಕರನ್ನು ನೇಮಿಸಿಕೊಳ್ಳುವುದು ದೊಡ್ಡ ಸವಾಲಾಗಿದೆ. ಸಂಶೋಧನಾ ಕೇಂದ್ರಗಳು ಸಂಶೋಧನಾರ್ಥಿಗಳ ಅಭಾವ ಎದುರಿಸುತ್ತಿವೆ. ಎಂಜಿನಿಯರಿಂಗ್ ಪದವಿ ಮುಗಿಸಿದ ವಿದ್ಯಾರ್ಥಿಗಳು ಸ್ಥಳೀಯವಾಗಿಯೇ ಉನ್ನತ ಶಿಕ್ಷಣ ಮುಂದುವರಿಸಲು ತೋರುತ್ತಿರುವ ನಿರಾಸಕ್ತಿ, ನಮ್ಮಲ್ಲಿನ ಶೈಕ್ಷಣಿಕ ಹಾಗೂ ಸಂಶೋಧನಾ ಗುಣಮಟ್ಟ ಹೇಗಿದೆ ಎಂಬುದಕ್ಕೂ ಕನ್ನಡಿ ಹಿಡಿಯುತ್ತಿದೆ. ಪರಿಸ್ಥಿತಿಯ ಸುಧಾರಣೆಗೆ ಏನು ಮಾಡಬೇಕು ಎನ್ನುವ ಚಿಂತನ-ಮಂಥನ ನಡೆದು, ಉನ್ನತ ಶಿಕ್ಷಣ ವಲಯದಲ್ಲಿ ಆಮೂಲಾಗ್ರ ಬದಲಾವಣೆ ತಾರದೇ ಹೋದಲ್ಲಿ ವಿದ್ಯಾರ್ಥಿಗಳು ಇನ್ನು ಮುಂದೆಯೂ ಇತ್ತ ಸುಳಿಯಲಾರರು.

ವಾಚಕರ ವಾಣಿ

ಒಂದು ದೇಶ, ಒಂದು ಚುನಾವಣೆ: ಚರ್ಚೆ ಅವಶ್ಯ

'ಒಂದು ದೇಶ, ಒಂದು ಚುನಾವಣೆ' ಯೋಜನೆಯನ್ನು ಪ್ರಧಾನಿ ನರೇಂದ್ರ ಮೋದಿ ತಮ್ಮ ಸ್ವಾತಂತ್ರ್ಯೋತ್ಸವ ಭಾಷಣದಲ್ಲಿ ಪ್ರಸ್ತಾಪಿಸಿ ಸಮರ್ಥಿಸಿಕೊಂಡಿದ್ದಾರೆ. ಲೋಕಸಭಾ ಅಧಿವೇಶನ ಮುಗಿದ ಬಳಿಕ, ತಮ್ಮ ಪ್ರಮುಖ ಭಾಷಣವೊಂದರಲ್ಲಿ ಸಾರ್ವಜನಿಕವಾಗಿ ಅವರು ಈ ಪ್ರಸ್ತಾಪ ಮಾಡಿರುವುದು 'ಉದ್ದೇಶಿತ' ಯೋಜನೆಯನ್ನು ಜಾಣ್ಮೆಯಿಂದ ಜಾರಿಗೊಳಿಸುವ ಸೂಚನೆಯಂತೆ ತೋರುತ್ತಿದೆ. ಈ ಯೋಜನೆಯ ವಿರುದ್ಧ ಈಗಾಗಲೇ ಬಂದಿರುವ ಮತ್ತು ಮುಂದೆ ಬರಬಹುದಾದ ಆಕ್ಷೇಪಗಳ ನೈತಿಕ ಬಲ ಕುಗ್ಗಿಸುವ ಉಪಾಯವನ್ನೂ ಅವರು ಮಾಡುತ್ತಿರಬಹುದು ಎಂಬ ಅನುಮಾನಕ್ಕೂ ಇಲ್ಲಿ ಆಸ್ಪದವಿದೆ.

ಈ ಯೋಜನೆಯ 'ಒಂದು ಸಾಧಕ'ದ ಬಗ್ಗೆಯೇ ಪ್ರಧಾನಿ ಪದೇ ಪದೇ ಮಾತನಾಡುತ್ತಿದ್ದಾರೆ, 'ಹಲವು ಬಾಧಕ'ಗಳ ಬಗ್ಗೆ ಜಾಣಮೌನ ವಹಿಸಿದ್ದಾರೆ. ಇಡೀ ದೇಶದ ಭವಿಷ್ಯದ ದಿಕ್ಕನ್ನೇ ಬದಲಿಸಬಲ್ಲ ಇಂತಹದ್ದೊಂದು ಪ್ರಮುಖ ನಡೆಯು ಜಾರಿಗೆ ಬರುವ ಮುನ್ನ ದೇಶದಾದ್ಯಂತ ವ್ಯಾಪಕವಾಗಿ ಮತ್ತು ವ್ಯವಸ್ಥಿತವಾಗಿ ಚರ್ಚೆ ಆಗಬೇಕಿರುವುದು ಅಪೇಕ್ಷಾರ್ಹ.

ಎಚ್.ಆನಂದರಾಮ ಶಾಸ್ತ್ರೀ, ಬೆಂಗಳೂರು

ಬೇಡದ್ದನ್ನು ಕೊಟ್ಟರೆ ದಾನವೆನಿಸದು

ಚಿತ್ರದುರ್ಗ ಜಿಲ್ಲೆಯ ನೂರು ಸರ್ಕಾರಿ ಶಾಲಾ ಮಕ್ಕಳಿಗೆ ಹತ್ತು ಸಾವಿರ ಪುಸ್ತಕಗಳನ್ನು ವಿತರಿಸಲಾಗುತ್ತಿದ್ದು, ದಾನಿಗಳು ಪುಸ್ತಕಗಳನ್ನು ಒದಗಿಸಬೇಕು ಎಂದು ಕರ್ನಾಟಕ ಕನ್ನಡ ಬರಹಗಾರರ ಮತ್ತು ಪ್ರಕಾಶಕರ ಸಂಘ ಕೋರಿರುವುದಾಗಿ ವರದಿಯಾಗಿದೆ (ಪ್ರ.ವಾ., ಆ. 15). ಇದೊಂದು ಸ್ತುತ್ಯರ್ಹ ಕೆಲಸ. ನನಗೆ ತಿಳಿದಿರುವಂತೆ, ಒಂದು ಸಂಸ್ಥೆಯವರು, ತಮಗೆ ಮಾರಲು ಸಾಧ್ಯವಿಲ್ಲ ಎಂಬುದು ಖಚಿತವಾದಾಗ, ದಾಸ್ತಾನಿನಲ್ಲಿ ದೂಳು ತಿನ್ನುತ್ತ ಬಿದ್ದಿರುವ ಪುಸ್ತಕಗಳನ್ನು ಪತ್ರಿಕಾ ಪ್ರಕಟಣೆಯ ಮೂಲಕ, ಶಾಲೆಗಳ ಶಿಕ್ಷಕರನ್ನು ಕರೆಸಿಕೊಂಡು, ಆಗಾಗ್ಗೆ ಅವುಗಳನ್ನು ಕೊಡುವ ಪರಿಪಾಟವನ್ನು ಇಟ್ಟುಕೊಂಡಿದ್ದಾರೆ. ಕೆಲವು ವ್ಯಕ್ತಿಗಳೂ ತಮಗೆ ಬೇಡವಾದ, ತುಂಬ ಹಳೆಯದಾದ, ಶಿಥಿಲವಾದ ಪುಸ್ತಕಗಳನ್ನು ಕೊಡುತ್ತಾರೆ. ಇಂಥ ಪುಸ್ತಕಗಳು ಮಕ್ಕಳಲ್ಲಿ ಓದುವ ಆಸಕ್ತಿಯನ್ನು ಉದ್ದೀಪಿಸುವುದಕ್ಕಿಂತ ಅವರನ್ನು ಪುಸ್ತಕಗಳಿಂದ ವಿಮುಖರಾಗುವಂತೆ ಮಾಡುವ ಸಂಭವವೇ ಹೆಚ್ಚು. ತಾವು ಓದಿ ಮನಸಾರೆ ಮೆಚ್ಚಿದ ಪುಸ್ತಕಗಳನ್ನು ಬೇರೆಯವರೂ ಓದಲಿ ಎಂಬ ಸದುದ್ದೇಶದಿಂದ ಕೊಟ್ಟರೆ ಮಾತ್ರ ಅದು ದಾನ. ತಮಗೆ ಬೇಡದ್ದನ್ನು ಕೊಟ್ಟರೆ ಅದು ದಾನವೆನಿಸದು.

ಮಕ್ಕಳಿಗೆ ಒದಗಿಸುವ ಪುಸ್ತಕಗಳು ಚಿಕ್ಕದಾಗಿ, ಅಂದರೆ 150 ಪುಟಗಳಿಗೆ ಮೀರದಂತೆ ಇರಬೇಕು. ಬಳಸುವ ಭಾಷೆ ಸರಳವಾಗಿಯೂ ಹಿತಕರವಾಗಿಯೂ ಇರಬೇಕು ಮತ್ತು ಲೇಖನಗಳು ದೀರ್ಘವಾಗಿ ಇರಬಾರದು. ಲೇಖನಗಳು ಮಧ್ಯೆ ಮಧ್ಯೆ ಕನ್ನಡ ನುಡಿಗಟ್ಟುಗಳು, ಗಾದೆಗಳು, ಸಂದರ್ಭಕ್ಕೆ ತಕ್ಕಂತೆ ಚಿಕ್ಕ ಚಿಕ್ಕ ಕತೆಗಳನ್ನು ಒಳಗೊಂಡಿದ್ದು ಆಕರ್ಷಕವಾಗಿರಬೇಕು. ಮುಖ್ಯವಾಗಿ, ಶಿಕ್ಷಕರು ತಮ್ಮ ವ್ಯಾಪ್ತಿಗೆ ಬರುವ ಪುಸ್ತಕಗಳನ್ನು ಓದಿ, ತರಗತಿಗಳಲ್ಲಿ ಮಕ್ಕಳಿಗೆ ಅವುಗಳ ಸಂಕ್ಷಿಪ್ತ ಪರಿಚಯ ಮಾಡಿಕೊಡುವ ಮೂಲಕ ಅವರಲ್ಲಿ ಓದುವ ಆಸಕ್ತಿ ಕೆರಳುವಂತೆ ಮಾಡಬೇಕು. ಹೀಗೆ ಮಾಡಿದಾಗ ಮಾತ್ರ ಶಾಲೆಗಳಿಗೆ ಪುಸ್ತಕಗಳನ್ನು ಒದಗಿಸುವ ಯೋಜನೆ ಸಫಲವಾಗುತ್ತದೆ.

ಸಿ.ಚಿಕ್ಕತಿಮ್ಮಯ್ಯ ಹಂದನಕೆರೆ, ಬೆಂಗಳೂರು

ಪ್ರಥಮ ಸ್ವಾತಂತ್ರ್ಯೋತ್ಸವ: ಮಾದರಿ ಆಚರಣೆ

ಸಾಹಿತಿ ಹಾಗೂ ಸಾಮಾಜಿಕ ಹೋರಾಟಗಾರರಾಗಿದ್ದ ಬೆಳಗೆರೆ ಕೃಷ್ಣಶಾಸ್ತ್ರಿ ಅವರು ಚಿತ್ರದುರ್ಗ ಜಿಲ್ಲೆಯ ಹೆಗ್ಗೆರಿ ಗ್ರಾಮದಲ್ಲಿ ಶಿಕ್ಷಕರಾಗಿದ್ದರು. ಆಗ ನಡೆದ 1947ರ ಪ್ರಥಮ ಸ್ವಾತಂತ್ರ್ಯ ದಿನಾಚರಣೆ ಸಂದರ್ಭದ ಎರಡು ಅಪರೂಪದ ಸಂಗತಿಗಳನ್ನು ತಮ್ಮ 'ಎಲೆ ಮರೆಯ ಅಲರು' ಎಂಬ ಕೃತಿಯಲ್ಲಿ ದಾಖಲಿಸಿದ್ದಾರೆ.

ಧ್ವಜಾರೋಹಣ ಮಾಡಿದ ಹಿರಿಯರೊಬ್ಬರು 'ನಾವು ಇವತ್ತಿನಿಂದ ಸ್ವತಂತ್ರರು. ನಮ್ಮಲ್ಲಿರುವ ಜಾತಿಯ ವ್ಯವಸ್ಥೆಯನ್ನು ಬಿಟ್ಟುಬಿಡಬೇಕು. ಇಂದು ಸಂಜೆ ನಮ್ಮೂರ ಕೆರೆಯ ದಂಡೆಯ ಮೇಲೆ ಎಲ್ಲರೂ ಕೂಡಿ ಊಟ ಮಾಡೋಣ' ಎಂದು ಸಲಹೆ ನೀಡಿದರು. ಎಲ್ಲರೂ ಒಪ್ಪಿ ಚಪ್ಪಾಳೆ ತಟ್ಟಿದರು. ಗ್ರಾಮಸ್ಥರು ಹಿಟ್ಟು, ಅಕ್ಕಿ, ಬೆಲ್ಲ, ಬೇಳೆಕಾಳು, ಖಾದ್ಯತೈಲ, ತರಕಾರಿ ತಂದು ಶಾಲೆಯ ಆವರಣದಲ್ಲಿ ಇಟ್ಟರು. ಇವನ್ನೆಲ್ಲ ಕೆರೆ ಆವರಣಕ್ಕೆ ಸಾಗಿಸಿ ಅಡುಗೆ ಮಾಡಿದರು. ಸಂಜೆ ಜಾತಿ, ಅಂತಸ್ತು ಮರೆತು ಎಲ್ಲರೂ ಒಂದೇ ಪಂಕ್ತಿಯಲ್ಲಿ ಕುಳಿತು ಊಟ ಮಾಡಿದರು. ಅಂದಿನಿಂದ ಕೆರೆಯ ನೀರು ಬಳಸುವುದಕ್ಕೆ ಮುಕ್ತ ಅವಕಾಶ ನೀಡಲಾಯಿತು.

ಈ ಕಾರ್ಯಕ್ರಮದಿಂದ ಪ್ರಭಾವಿತರಾದ ನೆರೆಯ ಸಾಣೆಕೆರೆ ಗ್ರಾಮದ ಹಿರಿಯರು ಸಾಮೂಹಿಕ ಭಜನೆ ಹಾಗೂ ಮೆರವಣಿಗೆ ನಡೆಸಿದರು. ಮೆರವಣಿಗೆಯು ಗ್ರಾಮದ ದೇವಸ್ಥಾನದ ಹತ್ತಿರ ಬಂತು. 'ಇವತ್ತು ಹರಿಜನರು ದೇವರಿಗೆ ಪೂಜೆ ಮಾಡಲಿ' ಎಂದು ಕೆಲವರು ಹೇಳಿದರು. ಪೂಜಾರಿ ಓಡಿ ಹೋಗಿ ಬಾಗಿಲು ತೆರೆದು ಅವಕಾಶ ಮಾಡಿಕೊಟ್ಟರು. ಪರಿಶಿಷ್ಟ ಸಮುದಾಯದವರು ಪೂಜೆ ಮಾಡಿ ಪ್ರಸಾದ ವಿತರಿಸಿದರು.

ಅಷ್ಟು ವರ್ಷಗಳ ಹಿಂದೆಯೇ ಇಂಥದ್ದೊಂದು ಸೌಹಾರ್ದ ಸಾಧ್ಯವಾಗಿತ್ತು ಎಂಬುದು ಹೆಮ್ಮೆಯ ಸಂಗತಿ. ಆದರೆ ದೇಶದ ಹಲವೆಡೆ ಇಂದಿಗೂ ಜಾತೀಯತೆ ತಾಂಡವವಾಡುತ್ತಿರುವುದು ವಿಷಾದ ಹುಟ್ಟಿಸುತ್ತದೆ. ಇಂತಹ ಸಂದರ್ಭದಲ್ಲಿ, ಸ್ವಾತಂತ್ರ್ಯೋತ್ಸವ ಆಚರಣೆ ಬರೀ ಆಚರಣೆಯಾಗದೆ ಸಾಮಾಜಿಕ ಉನ್ನತಿಗೆ ಕಾರಣವಾಗಬೇಕು.

ಮಲ್ಲಿಕಾರ್ಜುನ ಹೆಗ್ಗಳಗಿ, ಮುಧೋಳ

ಜನೌಷಧ ಕೇಂದ್ರ: ಸದುದ್ದೇಶ ಮುಕ್ಕಾಗದಿರಲಿ

ಸರ್ಕಾರಿ ಆಸ್ಪತ್ರೆಗಳಲ್ಲಿ ಜನೌಷಧ ಕೇಂದ್ರಗಳಿಗೆ ಹೊಸದಾಗಿ ಅನುಮತಿ ನೀಡುವುದಿಲ್ಲ ಎಂದು ವೈದ್ಯಕೀಯ ಶಿಕ್ಷಣ ಸಚಿವ ಡಾ. ಶರಣಪ್ರಕಾಶ ಪಾಟೀಲ ಅವರು ಹೇಳಿರುವುದು ಅಚ್ಚರಿ ಉಂಟುಮಾಡಿದೆ. ಆಸ್ಪತ್ರೆ ಆವರಣದಲ್ಲಿ ಜನೌಷಧ ಕೇಂದ್ರಗಳನ್ನು ತೆರೆಯುವುದು, ರೋಗಿಗಳ ಸಂಬಂಧಿಕರು ಅಗ್ಗದ ಔಷಧವನ್ನು ಹುಡುಕಿಕೊಂಡು ಹೊರಗೆ ಹೋಗುವುದನ್ನು ತಪ್ಪಿಸಬೇಕೆಂಬ ಸದುದ್ದೇಶದಿಂದ. ಅದಕ್ಕೆ ವ್ಯತಿರಿಕ್ತವಾಗಿ, ಆಸ್ಪತ್ರೆಯಿಂದ ದೂರವಿರುವ ಮಾರುಕಟ್ಟೆ ಪ್ರದೇಶದಲ್ಲಿ ಜನೌಷಧ ಕೇಂದ್ರಗಳು ಇದ್ದರೆ, ಜನ ಅವನ್ನು ಅರಸಿಕೊಂಡು ಹೋದಾರೆಯೇ? ಈ ವ್ಯವಸ್ಥೆಯಿಂದ ಖಾಸಗಿ ಅಂಗಡಿಗಳ ವ್ಯಾಪಾರ ವೃದ್ಧಿಸುವುದು ನಿಸ್ಸಂದೇಹ. ಇಂತಹ ತರ್ಕಹೀನ ನಡೆಯಿಂದ ಆಗುವ ಅನನುಕೂಲವನ್ನು ಅನುಭವಿಸಬೇಕಾದುದು ಜನರ ದೌರ್ಭಾಗ್ಯ.


ಎಸ್.ವೆಂಕಟಕೃಷ್ಣ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.

ಅಮೆರಿಕನ್ನರ ತಲಾ ಆದಾಯದ ಕಾಲು ಭಾಗ ತಲುಪಲು ಭಾರತೀಯರಿಗೆ 75 ವರ್ಷ ಬೇಕು: ವಿಶ್ವಬ್ಯಾಂಕ್

‘ಮಧ್ಯಮ ಆದಾಯದ ಬಲೆ’ಯಲ್ಲಿ ಭಾರತ

ಕೇಂದ್ರ ಸರ್ಕಾರವು 2047ರ ಹೊತ್ತಿಗೆ ದೇಶವನ್ನು ‘ವಿಕಸಿತ ಭಾರತ’ವನ್ನಾಗಿ ಮಾಡುವ ಪ್ರತಿಜ್ಞೆ ಮಾಡಿದೆ. ಆದರೆ, ವಿಶ್ವಬ್ಯಾಂಕ್ ನಿಧಾನಗತಿಯ ಆರ್ಥಿಕ ಬೆಳವಣಿಗೆಯ ದೇಶಗಳ ಬಗ್ಗೆ ತನ್ನ ಹೊಸ ವರದಿ ಬಿಡುಗಡೆ ಮಾಡಿದ್ದು, ಭಾರತವೂ ಸೇರಿದಂತೆ 108 ಮಧ್ಯಮ ಆದಾಯದ ದೇಶಗಳಲ್ಲಿ ಪ್ರಗತಿ ನಿರೀಕ್ಷಿತ ಮಟ್ಟದಲ್ಲಿಲ್ಲ; ಈ ದೇಶಗಳ ಆರ್ಥಿಕ ಪ್ರಗತಿ ಈಗಿನ ವೇಗದಲ್ಲಿದ್ದರೆ, ಅಮೆರಿಕದ ಇಂದಿನ ತಲಾ ಆದಾಯಕ್ಕೆ ಸಮನಾಗಲು ಇನ್ನೂ ಹಲವು ದಶಕಗಳು ಬೇಕು ಎಂದು ಹೇಳಿದೆ



ಮಧ್ಯಮ ಆದಾಯದ ಬಲೆಯ ನೋಟ

108	ವಿಶ್ವ ಬ್ಯಾಂಕ್ ಗುರುತಿಸಿರುವ ಮಧ್ಯಮ ಆದಾಯದ ರಾಷ್ಟ್ರಗಳು
₹95,378 ರಿಂದ ₹11.62 ಲಕ್ಷ	ಈ ರಾಷ್ಟ್ರಗಳ ಜನರ ವಾರ್ಷಿಕ ತಲಾ ಆದಾಯ
75%	ಪ್ರಪಂಚದ ಒಟ್ಟು ಜನಸಂಖ್ಯೆಯಲ್ಲಿ ಈ ರಾಷ್ಟ್ರಗಳ ಪಾಲು
60%	ಜಗತ್ತಿನಲ್ಲಿರುವ ಬಡವರ ಪೈಕಿ ಈ ದೇಶಗಳಲ್ಲಿರುವವರ ಪ್ರಮಾಣ
40 ಕೋಟಿ	ಇಲ್ಲಿರುವ ಬಡವರ ಸಂಖ್ಯೆ
40%	ಜಾಗತಿಕ ಮಟ್ಟದ ಆರ್ಥಿಕ ಚಟುವಟಿಕೆಗಳಿಗೆ ಈ ರಾಷ್ಟ್ರಗಳ ಕೊಡುಗೆ ಪ್ರಮಾಣ
60%	ಜಾಗತಿಕವಾಗಿ ಹೊರಸೂಸುವ ಇಂಗಾಲದ ಡೈಆಕ್ಸೈಡ್‌ನಲ್ಲಿ 108 ದೇಶಗಳ ಪಾಲು
1997	ಚೀನಾ ಈ ರಾಷ್ಟ್ರಗಳ ಸಾಲಿಗೆ ಸೇರಿದ ವರ್ಷ
2007	ಭಾರತ ಸೇರ್ಪಡೆಗೊಂಡ ವರ್ಷ

ಪ್ರಜಾವಾಣಿ ವಾರ್ತೆ

ಭಾರತ, ಚೀನಾ, ಬ್ರೆಜಿಲ್, ದಕ್ಷಿಣ ಆಫ್ರಿಕಾ ಸೇರಿದಂತೆ ಜಗತ್ತಿನ 108 ರಾಷ್ಟ್ರಗಳು ಆರ್ಥಿಕ ಬೆಳವಣಿಗೆಯಲ್ಲಿ ಸವಾಲುಗಳನ್ನು ಎದುರಿಸುತ್ತಿದ್ದು, ‘ಮಧ್ಯಮ ಆದಾಯದ ಬಲೆ’ಯಲ್ಲಿ ಸಿಲುಕಿವೆ..

–ಇದು ವಿಶ್ವಬ್ಯಾಂಕ್‌ನ ಹೊಸ ಅಧ್ಯಯನವೊಂದರ ತಿರುಳು. 50 ವರ್ಷಗಳ ಅಂಕಿಸಂಖ್ಯೆ, ಅನುಭವ ಆಧರಿಸಿ, ‘ವಿಶ್ವ ಅಭಿವೃದ್ಧಿ ವರದಿ 2024: ಮಧ್ಯಮ ಆದಾಯದ ಬಲೆ’ ಎನ್ನುವ ಅಧ್ಯಯನ ವರದಿಯನ್ನು ವಿಶ್ವಬ್ಯಾಂಕ್ ಬಿಡುಗಡೆ ಮಾಡಿದೆ. ಅದರಲ್ಲಿ ದೇಶಗಳನ್ನು ಕಡಿಮೆ ಆದಾಯ, ಕೆಳಮಧ್ಯಮ ಆದಾಯ, ಮೇಲುಮಧ್ಯಮ ಆದಾಯ ಮತ್ತು ಉತ್ತಮ ಆದಾಯದ ದೇಶಗಳು ಎಂದು ವಿಂಗಡಿಸಲಾಗಿದೆ. 2023ರ ಕೊನೆಯ ಹೊತ್ತಿಗೆ, ಜಗತ್ತಿನಲ್ಲಿ 108 ಮಧ್ಯಮ ಆದಾಯದ ದೇಶಗಳು ಇದ್ದವು ಎಂದು ವರದಿ ಪಟ್ಟಿ ಮಾಡಿದೆ.

ಈ ದೇಶಗಳು, ತಮ್ಮ ಬೆಳವಣಿಗೆಯ ಹಂತದಲ್ಲಿ, ಅಮೆರಿಕದ ತಲಾ ಆದಾಯದ ಶೇ 10ರಷ್ಟು ತಲುಪುವ ಹೊತ್ತಿಗೆ, ಸ್ಥಗಿತಗೊಳ್ಳುತ್ತವೆ ಅಥವಾ ನಿಧಾನಗತಿಗೆ ಒಳಗಾಗುತ್ತವೆ ಎಂದು ವರದಿ ಹೇಳಿದೆ. ಅಭಿವೃದ್ಧಿ ಹಾಗೆ ಸ್ಥಗಿತಗೊಳ್ಳಲು ಅಥವಾ ಕುಂಠಿತಗೊಳ್ಳಲು ಕಾರಣವಾಗುವ ಅಂಶಗಳನ್ನೂ ವಿಶ್ವಬ್ಯಾಂಕ್ ಗುರುತಿಸಿದೆ. ಅವುಗಳ ಪೈಕಿ ಮುಖ್ಯವಾದವು, ರಾಷ್ಟ್ರಗಳ ನಡುವೆ ಹೆಚ್ಚುತ್ತಿರುವ ಭೌಗೋಳಿಕ–ರಾಜಕೀಯ ಸಂಘರ್ಷಗಳು, ವಯಸ್ಸಾದವರ ಸಂಖ್ಯೆಯಲ್ಲಿ ಹೆಚ್ಚಳ, ಮುಂದುವರಿದ ದೇಶಗಳ ರಕ್ಷಣಾತ್ಮಕತೆ, ಸಾಲದ ಹೊರೆ, ಹವಾಮಾನ ಬದಲಾವಣೆ ಮತ್ತು ಇಂಧನ ಪರಿವರ್ತನೆಯಲ್ಲಿ ವಿಳಂಬ. ಬದಲಾಗುತ್ತಿರುವ ಆರ್ಥಿಕ ಮತ್ತು ಸಾಂಸ್ಥಿಕ ಅಗತ್ಯಗಳಿಗೆ ತಕ್ಕಂತೆ ನೀತಿಗಳನ್ನು ಅಳವಡಿಸಿಕೊಳ್ಳುವುದರಲ್ಲಿ ಈ ರಾಷ್ಟ್ರಗಳು ವಿಫಲವಾಗಿವೆ ಎಂದೂ ವರದಿ ತಿಳಿಸಿದೆ.

ವಿಶ್ವಬ್ಯಾಂಕ್ 2007ರಿಂದ ‘ಮಧ್ಯಮ ಆದಾಯದ ಬಲೆ’ಯ ಪರಿಕಲ್ಪನೆಯನ್ನು ಬಳಸುತ್ತಿದೆ. 34 ವರ್ಷಗಳಲ್ಲಿ ಕೇವಲ 34 ರಾಷ್ಟ್ರಗಳಿಗೆ ಮಾತ್ರ ಈ ಬಲೆಯನ್ನು ದಾಟಲು ಸಾಧ್ಯವಾಗಿದೆ. ಅಂದರೆ, ಆ ದೇಶಗಳು ನಿರೀಕ್ಷಿತ ರೀತಿಯಲ್ಲಿ ಬೆಳವಣಿಗೆ ಸಾಧಿಸಿ, ಉತ್ತಮ ಆದಾಯದ ರಾಷ್ಟ್ರಗಳಾಗಿ ಪರಿವರ್ತನೆಗೊಂಡಿವೆ. ಅವುಗಳ ಪೈಕಿ ಹೆಚ್ಚಿನ ದೇಶಗಳು, ಐರೋಪ್ಯ ಒಕ್ಕೂಟಕ್ಕೆ ಸೇರಿದ ಇಲ್ಲವೇ ಹೊಸದಾಗಿ ತೈಲ ನಿಕ್ಷೇಪಗಳು ಪತ್ತೆಯಾದ ರಾಷ್ಟ್ರಗಳಾಗಿವೆ.

108 ದೇಶಗಳು ಮಧ್ಯಮ ಆದಾಯದ ಬಲೆಯಲ್ಲಿ ಏಕೆ ಸಿಲುಕಿವೆ ಎನ್ನುವುದನ್ನು ವಿಶ್ವಬ್ಯಾಂಕ್‌ನ ಮುಖ್ಯ ಅರ್ಥಶಾಸ್ತ್ರಜ್ಞ ಇಂದರ್‌ಮಿತ್ ಗಿಲ್ ವಿವರಿಸಿದ್ದಾರೆ.

‘ಈ ದೇಶಗಳು ಆರ್ಥಿಕತೆಯಲ್ಲಿ ಮುಂದುವರಿಯಲು ಅತ್ಯಂತ ಹಳೆಯ ತಂತ್ರಗಳ ಮೊರೆ ಹೋಗಿವೆ. ಅವು ದೀರ್ಘ-ಕಾಲದವರೆಗೆ ಹೂಡಿಕೆಯನ್ನು ಅವಲಂಬಿಸಿ, ತಂತ್ರಜ್ಞಾನಗಳ ಅಳವಡಿಕೆ, ಸಂಶೋಧನೆಗಳನ್ನು ನಿರ್ಲಕ್ಷಿಸಿವೆ, ಅಂಥ ರಾಷ್ಟ್ರಗಳಿಗೆ ಹೊಸ ದೃಷ್ಟಿಕೋನ ಬೇಕಿದೆ’ ಎಂದು ಹೇಳಿದ್ದಾರೆ.

ವರದಿಯ ಪ್ರಕಾರ, ಅಮೆರಿಕದ ಇಂದಿನ ತಲಾ ಆದಾಯದ (₹67.42 ಲಕ್ಷ) ಕಾಲು ಭಾಗವನ್ನು ಮುಟ್ಟಲು ಭಾರತಕ್ಕೆ ಇನ್ನೂ 75 ವರ್ಷ ಬೇಕು. ಅದೇ ಪರಿಸ್ಥಿತಿ ಮುಟ್ಟಲು ಚೀನಾಗೆ ಇನ್ನೂ 10 ವರ್ಷಗಳ ಅಗತ್ಯವಿದ್ದರೆ, ಇಂಡೊನೇಷ್ಯಾಗೆ 70 ವರ್ಷ ಬೇಕು.

ಮಧ್ಯಮ ಆದಾಯದ ರಾಷ್ಟ್ರಗಳಲ್ಲಿ ಸರ್ಕಾರದ ನಿಯಮಾವಳಿಗಳು ಸಂಪನ್ಮೂಲದ ಅಪವ್ಯಯಕ್ಕೆ ಕಾರಣವಾಗುವುದಲ್ಲದೇ, ಉತ್ಪಾದನೆ ಮತ್ತು ಸಂಶೋಧನೆಗೆ ತೊಡಕಾಗುತ್ತವೆ ಎಂದು ವಿಶ್ಲೇಷಿಸಲಾಗಿದೆ. ಇಷ್ಟಾಗಿಯೂ, ಭಾರತದ ಇನ್ಫೊಸಿಸ್ ಮತ್ತು ಚೀನಾದ ಅಲಿಬಾಬಾ ಕಂಪನಿಗಳ ಯಶಸ್ಸಿನ ಬಗ್ಗೆ ವರದಿಯಲ್ಲಿ ವಿಶೇಷವಾಗಿ ಉಲ್ಲೇಖಿಸಲಾಗಿದೆ. ಮಧ್ಯಮ ಆದಾಯದ ದೇಶಗಳು ವಿದೇಶಿ ತಂತ್ರಜ್ಞಾನ-ಕೌಶಲದ ಅಳವಡಿಕೆ, ಹಣಕಾಸು, ಮಾನವ ಸಂಪನ್ಮೂಲಗಳ ಸಮರ್ಥ ಬಳಕೆ ಮುಂತಾದ ಕ್ರಮಗಳ ಮೂಲಕ ತಲಾ ಆದಾಯವನ್ನು ಹೆಚ್ಚಿಸಿಕೊಳ್ಳಬಹುದು ಎಂದು ವರದಿ ಸಲಹೆ ನೀಡಿದೆ.

ತೆರಿಗೆ ಪದ್ಧತಿ ಹೇಗಿರಬೇಕು ಎನ್ನುವ ಬಗ್ಗೆಯೂ ವರದಿಯಲ್ಲಿ ಗಮನ ಸೆಳೆಯಲಾಗಿದೆ. ಪ್ರಗತಿಪರ ತೆರಿಗೆ ವ್ಯವಸ್ಥೆಯಿಂದ ಅಸಮಾನತೆಯನ್ನು ಹೋಗಲಾಡಿಸಬಹುದು. ಆದರೆ, ಹೆಚ್ಚು ತೆರಿಗೆ ವಿಧಿಸುವುದರಿಂದ ಉದ್ಯಮಿಗಳು ತಮ್ಮ ದುಡಿಮೆಯನ್ನು ಕಡಿಮೆ ಮಾಡಬಹುದು, ತೆರಿಗೆ ಕಟ್ಟದೇ ತಪ್ಪಿಸಿಕೊಳ್ಳಬಹುದು ಇಲ್ಲವೇ ತೆರಿಗೆ ಕಡಿಮೆ ಇರುವ ಪ್ರದೇಶಕ್ಕೆ ಸ್ಥಳಾಂತರಗೊಳ್ಳಬಹುದು ಎಂದು ವಿಶ್ವಬ್ಯಾಂಕ್ ವರದಿ ಹೇಳಿದೆ.

ಆಧಾರ: ‘ವಿಶ್ವ ಅಭಿವೃದ್ಧಿ ವರದಿ–2024 ಮಧ್ಯಮ ಆದಾಯದ ಬಲೆ’ ವರದಿ

ಅಭಿವೃದ್ಧಿಗೆ ‘3 ಐ’ ಕಾರ್ಯತಂತ್ರ ಸಲಹೆ



‘ಮಧ್ಯಮ ಆದಾಯದ ಬಲೆ’ಯಿಂದ ತಪ್ಪಿಸಿಕೊಂಡು, ಹೆಚ್ಚು ಆದಾಯದ ರಾಷ್ಟ್ರವಾಗಿ ಪರಿವರ್ತನೆಗೊಳ್ಳಲು ಈ ದೇಶಗಳು ‘3 ಐ’ ಕಾರ್ಯತಂತ್ರವನ್ನು ಅನುಸರಿಸಬೇಕು ಎಂದು ವರದಿ ಪ್ರತಿಪಾದಿಸಿದೆ.

‘3 ಐ’ಗಳೆಂದರೆ ಹೂಡಿಕೆ (Investment), ಅಳವಡಿಕೆ (Infusion) ಮತ್ತು ನಾವೀನ್ಯ/ಆವಿಷ್ಕಾರ (Innovation).

ಕಡಿಮೆ ಆದಾಯ ಹೊಂದಿರುವ ರಾಷ್ಟ್ರಗಳು ಈಗ ಹೂಡಿಕೆ ಬಗ್ಗೆ ಮಾತ್ರ ಆದ್ಯತೆ ನೀಡುತ್ತಿವೆ. ಹೂಡಿಕೆಯೊಂದರಿಂದಲೇ ಅಭಿವೃದ್ಧಿ ಸಾಧ್ಯವಿಲ್ಲ. ಬಂಡವಾಳ ಹೂಡಿಕೆಯ ಜೊತೆಗೆ ಹೊಸ ಹೊಸ ತಂತ್ರಜ್ಞಾನಗಳ ಅಳವಡಿಕೆ ಮತ್ತು ಹೊಸ ಕಲ್ಪನೆಗಳು, ಆವಿಷ್ಕಾರಗಳಿಗೂ ಗಮನ ಹರಿಸಬೇಕು ಎಂದು ವರದಿ ಹೇಳಿದೆ.

ಅಭಿವೃದ್ಧಿಯ ವಿವಿಧ ಹಂತಗಳಲ್ಲಿ ದೇಶಗಳು ಈ ಕಾರ್ಯತಂತ್ರವನ್ನು ಹೇಗೆ ಅನುಷ್ಠಾನ ಮಾಡಬೇಕು ಎಂಬುದನ್ನೂ ವಿಶ್ವ ಬ್ಯಾಂಕ್ ವಿವರಿಸಿದೆ.

ಹೂಡಿಕೆ (1i) ಆಧಾರಿತ ಅಭಿವೃದ್ಧಿ ಕಾರ್ಯತಂತ್ರಗಳು ಪ್ರಗತಿಯ ಆರಂಭದ ಹಾದಿಯಲ್ಲಿ ಅಭಿವೃದ್ಧಿಗೆ ವೇಗ ನೀಡುತ್ತವೆ. ಆ ನಂತರದಲ್ಲಿ ಹೊಸ ತಂತ್ರಜ್ಞಾನಗಳನ್ನು ಅಳವಡಿಸುವ (2i) ನೀತಿಗಳಿಗೆ ಆದ್ಯತೆ ನೀಡಬೇಕು. ಬಳಿಕ ಹೊಸ ಕಲ್ಪನೆಗಳು, ಸಂಶೋಧನೆ, ಆವಿಷ್ಕಾರಗಳಿಗೆ (3i) ಸಂಪನ್ಮೂಲಗಳನ್ನು ಒದಗಿಸಬೇಕು.

ವಿಶ್ವಬ್ಯಾಂಕ್‌ನ ಪ್ರಕಾರ, ಕಡಿಮೆ ಆದಾಯದ ರಾಷ್ಟ್ರಗಳು (low income) ಹೂಡಿಕೆಗೆ (1i) ಹೆಚ್ಚು ಆದ್ಯತೆ ನೀಡಬೇಕು, ಕೆಳ ಮಧ್ಯಮ ಆದಾಯದ (low middle income) ದೇಶಗಳು ಹೂಡಿಕೆ ಮತ್ತು ತಂತ್ರಜ್ಞಾನಗಳ ಅಳವಡಿಕೆಗೆ (2i) ಗರಿಷ್ಠ ಪ್ರಮಾಣದಲ್ಲಿ ಒತ್ತು ನೀಡಬೇಕು, ಮೇಲು ಮಧ್ಯಮ ಆದಾಯದ (upper middle income) ದೇಶಗಳು ಹೂಡಿಕೆ, ಅಳವಡಿಕೆಯೊಂದಿಗೆ ಆವಿಷ್ಕಾರಕ್ಕೂ (3i) ಗರಿಷ್ಠ ಆದ್ಯತೆ ನೀಡಬೇಕು.

ಯಾವ ಕ್ಷೇತ್ರಗಳಿಗೆ ಒತ್ತು?: ‘3ಐ’ ಕಾರ್ಯತಂತ್ರವನ್ನು ಅನುಷ್ಠಾನಗೊಳಿಸುವ ಸಂದರ್ಭದಲ್ಲಿ ದೇಶಗಳು ಉದ್ಯಮ (Enterprise), ಕೌಶಲ ವೃದ್ಧಿ/ಪ್ರತಿಭೆ (Talent) ಮತ್ತು ಇಂಧನ (Energy) ಕ್ಷೇತ್ರಗಳಿಗೆ ಒತ್ತು ನೀಡಬೇಕು ಎಂದೂ ವರದಿ ಪ್ರತಿಪಾದಿಸಿದೆ.

ದಕ್ಷಿಣ ಕೊರಿಯಾದ ಯಶೋಗಾಥೆ

1950ರ ದಶಕದಲ್ಲಿ ಅತ್ಯಂತ ಬಡ ರಾಷ್ಟ್ರವಾಗಿದ್ದ ದಕ್ಷಿಣ ಕೊರಿಯಾ ಪವಾಡ ಸದೃಶ ರೀತಿಯಲ್ಲಿ ಅಭಿವೃದ್ಧಿ ಹೊಂದಿದ್ದನ್ನು ವಿಶ್ವ ಬ್ಯಾಂಕ್ ತನ್ನ ವರದಿಯಲ್ಲಿ ಪ್ರಮುಖವಾಗಿ ಉಲ್ಲೇಖಿಸಿದೆ. ಆರ್ಥಿಕತೆಯ ಇತಿಹಾಸದಲ್ಲಿಯೇ ದಾಖಲೆ ಸೃಷ್ಟಿಸಿರುವ ಕೊರಿಯಾ ಏಳು ದಶಕಗಳ ಅವಧಿಯಲ್ಲಿ ಕ್ರಾಂತಿಕಾರಕವಾಗಿ ಪರಿವರ್ತನೆ ಹೊಂದಲು ಕಾರಣವಾದ ಅಂಶಗಳನ್ನೂ ವಿವರಿಸಿದೆ.

ಆರಂಭದಲ್ಲಿ ರಫ್ತು ಉತ್ತೇಜನಕ್ಕೆ ಗಮನಕೊಟ್ಟಿದ್ದ ಕೊರಿಯಾ, ದೇಶಿಯ ಕಂಪನಿಗಳಿಗೆ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಪೈಪೋಟಿ ನಡೆಸಲು ಅವಕಾಶ ಕಲ್ಪಿಸಿತು. ನಂತರದ ವರ್ಷಗಳಲ್ಲಿ ತೆರಿಗೆ ಕಡಿತ ಮಾಡುವುದರ ಜೊತೆಗೆ ದೇಶೀಯ ಮಾರುಕಟ್ಟೆಯನ್ನು ವಿದೇಶಿ ಹೂಡಿಕೆಗೆ ಮುಕ್ತವಾಗಿಸಿತು. ಕೈಗಾರಿಕಾ ನೀತಿಗಳ ಮೂಲಕ ಮೊದಲು ದೊಡ್ಡ ಉದ್ದಿಮೆಗಳಿಗೆ ಉತ್ತೇಜನ ನೀಡಿದ ಸರ್ಕಾರ, ಬಳಿಕ ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳಿಗೆ ಪ್ರೋತ್ಸಾಹ ಕೊಟ್ಟಿತು. ಮೂಲಸೌಕರ್ಯ ಕ್ಷೇತ್ರದಲ್ಲಿ ಹೂಡಿದ ಬಂಡವಾಳ ವೇಗವಾದ ಆರ್ಥಿಕ ಅಭಿವೃದ್ಧಿಗೆ ಕಾರಣವಾಯಿತು. 2000ದ ನಂತರ ಮಾಹಿತಿ ಮತ್ತು ಸಂವಹನ ತಂತ್ರಜ್ಞಾನ, ಮೂಲಸೌಕರ್ಯ ಕ್ಷೇತ್ರದಲ್ಲಿ ಭಾರಿ ಪ್ರಮಾಣದಲ್ಲಿ ಹೂಡಿಕೆಗೆ ಅವಕಾಶ ನೀಡಿದ್ದರಿಂದ ಡಿಜಿಟಲ್ ಮತ್ತು ತಂತ್ರಜ್ಞಾನ ಆಧಾರಿತವಾಗಿಯೂ ಅಭಿವೃದ್ಧಿ ಹೊಂದಿತು.

ಎರಡನೆಯದಾಗಿ, ಕೊರಿಯಾವು ಸಂಶೋಧನೆ ಮತ್ತು ಅಭಿವೃದ್ಧಿಯಲ್ಲಿ ತೊಡಗಿರುವ ಕೈಗಾರಿಕೆಗಳು, ವಿಜ್ಞಾನ, ತಂತ್ರಜ್ಞಾನ ಮತ್ತು ಹೊಸ ಕಲ್ಪನೆಗಳಿಗೆ ಸಂಬಂಧಿಸಿದಂತೆ ಹೊಸ ನೀತಿಗಳನ್ನು ಜಾರಿಗೆ ತಂದಿತು. ತೆರಿಗೆ ವಿನಾಯಿತಿಗಳನ್ನು ಘೋಷಿಸಿತು. ಇದೇ ಸಂದರ್ಭದಲ್ಲಿ ಮಾನವ ಸಂಪನ್ಮೂಲದ ಮೇಲೂ ಬಂಡವಾಳ ಹೂಡಿ, ಉದ್ಯೋಗ ಸೃಷ್ಟಿಗೆ ಅವಕಾಶ ಕಲ್ಪಿಸಿತು. ಮೂರನೆಯದಾಗಿ, ಉದ್ಯಮಗಳೊಂದಿಗೆ ಉತ್ತಮ ಸಂಬಂಧ ಕಾಯ್ದುಕೊಂಡು, ದೇಶದಲ್ಲಿ ಕೈಗಾರಿಕೆಗಳ ಅಭಿವೃದ್ಧಿಗೆ ಪೂರಕವಾದ ನೀತಿಗಳ ಮೂಲಕ ಆರ್ಥಿಕ ಪ್ರಗತಿ ಸಾಧಿಸಿತು.

ಫ್ರುಟ್ಸ್ ಸಲಾಡ್‌ನಂಥ ಪ್ರಣಯ ಕಥೆ



ಮಾಳವಿಕ ನಾಯರ್, ಗಣೇಶ್

‘ದಂಡುಪಾಳ್ಯ’ ಸಿನಿಮಾ ನಿರ್ದೇಶಿಸಿದ್ದ ಶ್ರೀನಿವಾಸ ರಾಜು ಅವರ ಹೊಸ ಪ್ರಯತ್ನದಂತಿದೆ ಈ ಸಿನಿಮಾ. ಕಥೆಯ ಬಗ್ಗೆ ಸುಳಿವು ನೀಡದೆ, ಟೀಸರ್–ಟ್ರೇಲರ್ ಇಲ್ಲದೇ ಬಂದ ಸಿನಿಮಾವಿದು. ‘ಶ್ರೀಮಂತುಡು’, ‘ಅತ್ತರಿಂಟಿಕಿ ದಾರೇದಿ’ ಸಿನಿಮಾಗಳ ರಿಚ್‌ನೆಸ್ ಹೊತ್ತ ಹಾಗೂ ‘ಘಜಿನಿ’ ಸಿನಿಮಾದ ಒಂದೆಳೆ ಹೊಂದಿರುವ ಈ ‘ಕೃಷ್ಣಂ ಪ್ರಣಯ ಸಖಿ’ ಸಿನಿಮಾ ಭಿನ್ನವಾದ ಕಥೆ ಹೊತ್ತುಬಂದಿದ್ದರೂ ಹಲವು ಸಿನಿಮಾಗಳ ಮಿಶ್ರಣದಂತೆ ಕಾಣುತ್ತದೆ.

‘ಕೃಷ್ಣ’(ಗಣೇಶ್) ಶ್ರೀಮಂತ ಕುಟುಂಬದ ಯುವಕ. ಆತನದ್ದು ಕೂಡುಕುಟುಂಬ. ಮನೆಯಲ್ಲಿ ಹತ್ತಾರು ಜನ. ‘ಕೃಷ್ಣ ಗ್ರೂಪ್ ಆಫ್ ಕಂಪನೀಸ್’ ಮುಖ್ಯಸ್ಥನಾಗಿರುವ ಕೃಷ್ಣ, ಕಾರಿನಲ್ಲಿ ಹೋಗುವಾಗ ‘ಪ್ರಣಯ’ಳನ್ನು(ಮಾಳವಿಕ ನಾಯರ್) ನೋಡುತ್ತಾನೆ. ಆಕೆ ‘ಬೆಳಕು’ ಎಂಬ ಅನಾಥಾಶ್ರಮದಲ್ಲಿ ಬೆಳೆದಿರುವಾಕೆ. ಮೊದಲ ನೋಟದಲ್ಲೇ ಆಕೆಯೊಂದಿಗೆ ಪ್ರೀತಿಯಲ್ಲಿ ಬೀಳುವ ‘ಕೃಷ್ಣ’ ಅವಳನ್ನು ಪಡೆಯಲು ಅನಾಥಾಶ್ರಮದ ಡ್ರೈವರ್ ಆಗಿ ಕೆಲಸಕ್ಕೆ ಸೇರಿಕೊಳ್ಳುತ್ತಾನೆ. ಇಲ್ಲಿಂದ ‘ಕೃಷ್ಣಂ ಪ್ರಯಣ ಸಖಿ’ ಪಯಣ ಆರಂಭ.

ನಾವು ನೋಡಿದ ಸಿನಿಮಾ

ಕೃಷ್ಣಂ ಪ್ರಣಯ ಸಖಿ

- ನಿರ್ದೇಶನ: ಶ್ರೀನಿವಾಸ ರಾಜು
- ನಿರ್ಮಾಣ: ಪ್ರಶಾಂತ್ ಜಿ.ರುದ್ರಪ್ಪ
- ತಾರಾಗಣ: ಗಣೇಶ್, ಮಾಳವಿಕ ನಾಯರ್, ಶರಣ್ಯ ಶೆಟ್ಟಿ, ಶ್ರೀನಿವಾಸಮೂರ್ತಿ, ಸಾಧು ಕೋಕಿಲ, ರಂಗಾಯಣ ರಘು, ಶಶಿಕುಮಾರ್, ಶ್ರುತಿ, ಭಾವನ, ಅಶೋಕ್, ರಾಮಕೃಷ್ಣ, ಶಿವಧ್ವಜ್, ಮಾನಸಿ ಸುಧೀರ್

ಗುಣಮಟ್ಟದಲ್ಲಿ ಹಾಗೂ ರಿಚ್‌ನೆಸ್‌ನಲ್ಲಿ ಈ ಸಿನಿಮಾ ಉತ್ಕೃಷ್ಟವಾಗಿ ಮೂಡಿಬಂದಿದೆ. ಒಂದು ಕಂಪನಿಯ ಮುಖ್ಯಸ್ಥನಾಗಿರುವ ಹೀರೊ, ಆತನ ಐಷಾರಾಮಿ ಮನೆ, ಜೀವನ, ದಿನನಿತ್ಯ ಸೀರೆ, ಕುರ್ತಾ, ಒಡವೆ ಧರಿಸಿಕೊಂಡೇ ಇರುವ ಮನೆಮಂದಿ ಹೀಗೆ ತೆಲುಗು ಸಿನಿಮಾಗಳಲ್ಲಿ ಕಂಡು-ಬರುತ್ತಿದ್ದ ರಿಚ್‌ನೆಸ್ ಈ ಸಿನಿಮಾದಲ್ಲಿದೆ. ಇದಕ್ಕಷ್ಟೇ ಒತ್ತು ನೀಡಿರುವಂತೆಯೂ ಕಾಣುತ್ತದೆ. ಸಿನಿಮಾದ ಕಥೆ ಹೀಗೇ ಸಾಗಲಿದೆ ಎನ್ನುವುದನ್ನು ಆರಂಭದಲ್ಲೇ ಊಹಿಸಬಹುದಾಗಿದೆ. ಕಥೆಗೆ ಪೂರಕವಾಗಿ ಪಾತ್ರಗಳನ್ನು ಸೃಷ್ಟಿಸುವುದರ ಬದಲು ಕೂಡುಕುಟುಂಬ ಎನ್ನುವ ಕಾರಣಕ್ಕೆ ಹೆಚ್ಚಿನ ಪಾತ್ರಗಳನ್ನು ತುಂಬಲಾಗಿದೆ. ಅವುಗಳಿಗೆ ಕಥೆಯಲ್ಲಿ ಹೆಚ್ಚಿನ ಪ್ರಾಶಸ್ತ್ಯವೂ ಇಲ್ಲ. ರಂಗಾಯಣ ರಘು ಅವರು ನಿರ್ವಹಿಸಿದ ‘ಬೂಮ್‌ದೇವ್ರು’ ಎನ್ನುವ ಪಾತ್ರದ ಪೋಷಣೆ ತರ್ಕಕ್ಕೆ ಸಿಗುವುದಿಲ್ಲ. ತೆಲುಗು ಸಿನಿಮಾಗಳ ಪ್ರಭಾವಕ್ಕೆ ಸಾಕ್ಷ್ಯವಾಗಿ ಕ್ಲೈಮ್ಯಾಕ್ಸ್‌ನಲ್ಲಿ ಬರುವ ದೃಶ್ಯಗಳು ಸಿಗುತ್ತವೆ. ನಾನ್–ಲೀನಿಯರ್ ಮಾದರಿಯಲ್ಲಿ ಕಥೆ ಹೇಳುತ್ತಾ ಸಾಗಿದ್ದಾರೆ ನಿರ್ದೇಶಕರು. ಇದು ಕೆಲವೆಡೆ ಗೊಂದಲವನ್ನೂ ಮೂಡಿಸಿದೆ.

ಪ್ರೇಕ್ಷಕರನ್ನು ನಗಿಸಲೇಬೇಕೆಂದು ಒಂದೆರಡು ದೃಶ್ಯಗಳನ್ನು, ಸಂಭಾಷಣೆ-ಗಳನ್ನು ಚಿತ್ರಕಥೆಯಲ್ಲಿ ಹೆಣೆಯಲಾಗಿದೆ. ಜೊತೆಗೆ ತರ್ಕಕ್ಕೆ ಸಿಗದ ಚಿತ್ರಕಥೆಯೂ ಕೆಲವೆಡೆ ಇವೆ. ಗಣೇಶ್ ಹಾಗೂ ಸಾಧು ಕೋಕಿಲ ಅವರ ಕಾಮಿಡಿ ಟೈಮಿಂಗ್ ಸಿನಿಮಾದ ಪ್ರಮುಖ ಅಂಶ. ಪ್ರೇಕ್ಷಕರನ್ನು ಹಲವೆಡೆ ಪಂಚ್‌ಲೈನ್‌ಗಳ ಮೂಲಕ ನಗಿಸುತ್ತಾ ಸಾಗುತ್ತದೆ ಈ ಜೋಡಿ. ಗಣೇಶ್ ಅವರ ಸಿನಿಮಾಗಳಲ್ಲಿ ಕಾಣಸಿಗುವ ಫ್ಯಾಮಿಲಿ ಎಂಟರ್‌ಟೈನರ್ ಅಂಶಗಳು ಈ ಸಿನಿಮಾದಲ್ಲಿಯೂ ಇವೆ. ತಮ್ಮ ಪಾತ್ರಗಳಲ್ಲಿ ಗಣೇಶ್ ಹಾಗೂ ಮಾಳವಿಕ ನಾಯರ್ ಜೀವಿಸಿದ್ದಾರೆ. ಆ್ಯಕ್ಷನ್ ದೃಶ್ಯಗಳಲ್ಲೂ ಗಣೇಶ್ ಮಿಂಚಿದ್ದಾರೆ. ಎಂದಿನಂತೆ ಇಡೀ ಸಿನಿಮಾದಲ್ಲಿ ಸಾಧು ಕೋಕಿಲ ನಗಿಸುವ ಜವಾಬ್ದಾರಿ ಹೊತ್ತುಕೊಂಡಿದ್ದಾರೆ.

‘ದ್ವಾಪರ ದಾಟುತ..’ ಹಾಗೂ ‘ನೋಡುತ್ತಾ..ನೋಡುತ್ತಾ..’ ಹಾಡುಗಳು ಈ ಸಿನಿಮಾದ ಹೈಲೈಟ್. ಈ ಹಾಡುಗಳ ಸಾಹಿತ್ಯ, ಸಂಗೀತ, ನೃತ್ಯ ನಿರ್ದೇಶನ ಹಾಗೂ ಸೆರೆಹಿಡಿದಿರುವ ಪರಿ ಸಿನಿಮಾವನ್ನೇ ಎತ್ತಿಹಿಡಿದಿದೆ. ಹೀರೊ ಪ್ರವೇಶಕ್ಕಿಂತ ಹೆಚ್ಚಾದ ಚಪ್ಪಾಳೆ, ಶಿಳ್ಳೆ ಇವುಗಳಿಗೆ ದೊರಕಿದೆ. ಚಿತ್ರದ ಅವಧಿಯನ್ನು ಕೊಂಚ ತಗ್ಗಿಸಬಹುದಿತ್ತು.

– ಅಭಿಲಾಷ್ ಪಿ.ಎಸ್.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ **9606038256**

✗ ಭಾರತವು ಮಾಲ್ದೀವ್ಸ್‌ಗೆ ಸೇರಿದ 28 ದ್ವೀಪಗಳನ್ನು ಇತ್ತೀಚೆಗೆ ಖರೀದಿಸಿದೆ, ಈ ಸಂಬಂಧ ಎರಡು ರಾಷ್ಟ್ರಗಳು ಇತ್ತೀಚೆಗೆ ಒಪ್ಪಂದಕ್ಕೆ ಸಹಿ ಹಾಕಿವೆ ಎಂದು ಹಲವು ಇಂಟರ್‌ನೆಟ್ ಬಳಕೆದಾರರು ಸಾಮಾಜಿಕ ಜಾಲತಾಣಗಳಲ್ಲಿ ಪೋಸ್ಟ್ ಮಾಡುತ್ತಿದ್ದಾರೆ. ಭಾರತದ ವಿದೇಶಾಂಗ ಸಚಿವ ಎಸ್.ಜೈಶಂಕರ್ ಅವರು ಇತ್ತೀಚೆಗೆ ಮಾಲ್ದೀವ್ಸ್‌ಗೆ ಮೂರು ದಿನಗಳ ಭೇಟಿ ನೀಡಿ, ಅಲ್ಲಿನ ಸಮಾರಂಭವೊಂದರಲ್ಲಿ ಭಾಗ-ವಹಿಸಿದ್ದನ್ನು ಪ್ರಸ್ತಾಪಿಸುತ್ತಿದ್ದಾರೆ. ಆದರೆ, ಭಾರತವು ಅಲ್ಲಿನ ದ್ವೀಪಗಳನ್ನು ಖರೀದಿಸಿದೆ ಎಂಬುದು ಸುಳ್ಳು.

✓ ಭಾರತದ ನೆರವಿನಿಂದ 28 ದ್ವೀಪಗಳಲ್ಲಿ ಕೈಗೆತ್ತಿಕೊಳ್ಳಲಾಗಿದ್ದ ಕುಡಿಯುವ ನೀರು ಮತ್ತು ಚರಂಡಿ ವ್ಯವಸ್ಥೆ ಅಭಿವೃದ್ಧಿ ಯೋಜನೆಯನ್ನು ಇತ್ತೀಚೆಗೆ ಉದ್ಘಾಟಿಸಲಾಗಿತ್ತು. ಎಕ್ಸಿಮ್ ಬ್ಯಾಂಕ್ ಆಫ್ ಇಂಡಿಯಾವು ಈ ಯೋಜನೆಗೆ ಆರ್ಥಿಕ ನೆರವು ನೀಡಿದೆ. ಇದೇ ಸಮಾರಂಭವನ್ನು ಮುಂದಿಟ್ಟುಕೊಂಡು ಈ ಭಾರತ ದ್ವೀಪಗಳನ್ನು ಖರೀದಿಸಿದೆ ಎಂದು ಬಲಪಂಥೀಯ ಸಾಮಾಜಿಕ ಜಾಲತಾಣ ಬಳಕೆದಾರರು ಪೋಸ್ಟ್ ಮಾಡುತ್ತಿದ್ದಾರೆ. ಮಾಲ್ದೀವ್ಸ್‌ಗೆ ಜೈಶಂಕರ್ ಅವರು ನೀಡಿರುವ ಭೇಟಿ ಹಾಗೂ ಈ ಸಮಾರಂಭದಲ್ಲಿ ಪಾಲ್ಗೊಂಡಿರುವುದರ ಬಗ್ಗೆ ವಿದೇಶಾಂಗ ವ್ಯವಹಾರಗಳ ಇಲಾಖೆ ಅಧಿಕೃತ ಪತ್ರಿಕಾ ಹೇಳಿಕೆ ನೀಡಿದೆ. ಮಾಲ್ದೀವ್ಸ್ ಅಧ್ಯಕ್ಷ ಮೊಹಮ್ಮದ್ ಮುಯಿಜು ಅವರು ಕೂಡ ತಮ್ಮ ಎಕ್ಸ್ ಖಾತೆಯಲ್ಲಿ ಯೋಜನೆ ಉದ್ಘಾಟನೆ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದನ್ನು ಬರೆದುಕೊಂಡಿದ್ದಾರೆ. ಕೇಂದ್ರ ಸರ್ಕಾರದ ಫ್ಯಾಕ್ಟ್‌ಚೆಕ್ ಘಟಕ ಪಿಐಬಿ ಫ್ಯಾಕ್ಟ್‌ಚೆಕ್ ಕೂಡ ಸಾಮಾಜಿಕ ಜಾಲತಾಣಗಳಲ್ಲಿ ಕಂಡು ಬಂದಿರುವ ಪೋಸ್ಟ್‌ಗಳು ಸುಳ್ಳು ಎಂದು ಹೇಳಿದೆ ಎಂದು ಬೂಮ್ ಫ್ಯಾಕ್ಟ್ ಚೆಕ್ ತಿಳಿಸಿದೆ.

ಗುಂಡಣ್ಣ



ನೀವೇ ದೇವರಾಗಿ!

ನುಡಿ ಬೆಳಗು



ಅಭಿನವ ಗವಿಸಿದ್ಧೇಶ್ವರ ಸ್ವಾಮೀಜಿ, ಗವಿಮಠ, ಕೊಪ್ಪಳ

2

ಮುದುಕನೊಬ್ಬ ರಸ್ತೆಯಲ್ಲಿ ಹೊರಟಿದ್ದ. ಅವನಿಗೆ ಫಿಟ್ಸ್ ಬಂದು ಕೆಳಕ್ಕೆ ಬಿದ್ದುಬಿಟ್ಟ. ಯುವಕನೊಬ್ಬ ಅವನನ್ನು ಹಿಡಿದು ಎತ್ತಿ ದವಾಖಾನೆಗೆ ಸೇರಿಸಿ ಆರೈಕೆ ಮಾಡಿದ. ಆಗ ಆ ಮುದುಕ ಯುವಕನ ಕೈ ಹಿಡಿದು ‘ನೋಡಪ, ನನಗೆ ಯಾರೂ ಇದ್ದಿದಿಲ್ಲ. ನೀನು ನನ್ನ ಪಾಲಿಗೆ ದೇವರು ಬಂದಂಗೆ ಬಂದೆ’ ಎಂದ. ಅಂದರೆ ಚಲೋ ಕೆಲಸ ಮಾಡಿದ್ದಕ್ಕೆ ದೇವರಾದ ಅವ. ನೀವು ದೀಪಾವಳಿ ಹಬ್ಬಕ್ಕೆ ಲಕ್ಷ್ಮೀ ಪೂಜೆ ಮಾಡ್ತೀರಿ. ದೇವರಿಗೆ ಬೆಳ್ಳಿ ಬಂಗಾರದ ಆಭರಣ ಎಲ್ಲಾ ಹಾಕಿ ಪೂಜೆ ಮಾಡುತ್ತೀರಿ. ರಾತ್ರಿ ಒಬ್ಬ ಕಳ್ಳ ಬರ್ತಾನ, ಬೆಳ್ಳಿ ಬಂಗಾರ ಎಲ್ಲಾ ತೆಗೆದುಕೊಂಡು ಹೋಗುವಾಗ ನೀವು ಸಾಕಿದ ನಾಯಿ ನಿಮ್ಮನ್ನು ಎಬ್ಬಿಸುತ್ತದೆ. ಬಂಗಾರ ಉಳೀತದೆ. ಮಾರನೇ ದಿನ ಮನೆಗೆ ಬಂದವರಿಗೆ ನೀವು ‘ನಾಯಿ ನಮ್ಮ ಪಾಲಿಗೆ ದೇವರಾಗಿ ಬಂತು’ ಅಂತೀರಿ. ಅಂದರೆ ಚಲೋ ಕೆಲಸ ಮಾಡಿದರೆ ನಾಯಿ ಕೂಡಾ ದೇವರಾಗಬಹುದಾದರೆ ಮನುಷ್ಯ ಯಾಕೆ ದೇವರಾಗುವುದಿಲ್ಲ?

ನಿಸರ್ಗದಲ್ಲಿ ಯಾವುದೂ ತನ್ನ ಕೆಲಸವನ್ನು ಬಿಟ್ಟಿಲ್ಲ. ತೆಂಗಿನ ಮರ ನೋಡಿ. ತೆಂಗಿನಕಾಯಿಗೆ ಯಾರಾದರೂ ಮೆಶಿನ್ ಹಚ್ಚಿ ನೀರು ತುಂಬಿಸ್ಯಾರೇನು? ಸೂರ್ಯನಿಗೆ ಯಾರಾದರೂ ಅಲಾರಾಂ ಇಟ್ಟು ಎಬ್ಬಿಸ್ಯಾರೇನು? ಗಾಳಿಗೆ ಯಾರಾದರೂ ಫ್ಯಾನ್ ಹಚ್ಚಿ ಮುಂದಕ್ಕೆ ದಬ್ಯಾರೇನು? ನಾವು ಶನಿವಾರ ಹಾಫ್ ಡೇ, ಭಾನುವಾರ ಫುಲ್ ಡೇ ರಜಾ ಅಂತೀವಿ. ಹಾಗೆ ಗಾಳಿ ನಾಳೆ ಅರ್ಧದಿನ ಬೀಸೋದಿಲ್ಲ ಅಂತದೇನು? ಭೂಮಿ ತಾಯಿ ಸದಾ ಕೆಲಸ ಮಾಡ್ತಾಳೆ. ದುಡಿದವಳು ಅವಳು, ಬೆಳೆದವಳು ಅವಳು. ನಾವು ಬರೀ ಪ್ರಶಸ್ತಿ ತಗೊಂಡೋರು ಅಷ್ಟೆ. ತುಂಗಭದ್ರೆ, ಕಾವೇರಿ, ಕೃಷ್ಣೆ ಮುಂತಾದ ನದಿಗಳು ಸದಾ ಹರಿಯುತ್ತವೆ. ಹರಿಯುವ ನದಿ ನಿಂತದೇನು? ಹರಿಯುವ ನದಿ ನಿಲ್ಲಬಾರದು. ನಿಂತರೆ ಗಡವಾಗಿ ವಾಸನೆ ಬರತೈತಿ. ನೀರು ನಿಂತರೆ ಕೆಡುತೈತಿ. ಮನುಷ್ಯ ಕುಂತರೆ ಕೆಡುತ್ತಾನೆ. ನೀರು ಹರಕೋತ ಇರಬೇಕು, ಮನುಷ್ಯ ದುಡುಕೋತ ಇರಬೇಕು.

ನಮ್ಮ ದೇಹ ನೋಡಿ. ಅದರ ಸಿಸ್ಟಂ ಎಷ್ಟು ಕರೆಕ್ಟಾಗಿ ಕೆಲಸ ಮಾಡುತ್ತದೆ. ಯಾವಾಗಲೂ ಕೆಲಸ ಮಾಡುತ್ತಲೇ ಇರುತ್ತದೆ. ಶ್ವಾಸಕೋಶಗಳು, ಹೃದಯ, ರಕ್ತನಾಳಗಳು ಕೆಲಸ ಮಾಡುತ್ತಲೇ ಇರುತ್ತವೆ. ಜೀರ್ಣಾಂಗ ಕೂಡಾ ಸುಮ್ಮನಿರಲ್ಲ. ಮಿದುಳು ಇದೆಯಲ್ಲ. ಅದು ಮಾಸ್ಟರ್. ದೇಹಕ್ಕೆ ಗೊತ್ತಿದೆ ಹೇಗೆ ಕೆಲಸ ಮಾಡಬೇಕು ಅಂತ. ನಾವೇ ಸಿಕ್ಕಿದ್ದೆಲ್ಲಾ ತಿಂದು ಕೆಡಿಸುತ್ತೇವೆ. ಒಮ್ಮೆ ಹೃದಯಕ್ಕೆ ಕೈ ಕೇಳಿತಂತೆ. ‘ನೀನು ಯಾವಾಗಲೂ ಕೆಲಸ ಮಾಡುತ್ತಾ ಇರುತ್ತಿ. ಆದರೂ ಮನುಷ್ಯರು ಬೆಳಿಗ್ಗೆ ಎದ್ದ ತಕ್ಷಣ ನಿನ್ನ ನೋಡಲ್ಲ. ಮುಖ ನೋಡಿಕೊಳ್ಳುತ್ತಾರೆ. ಸ್ನೋ ಹಚ್ಚುತ್ತಾರೆ. ಪೌಡರ್ ಬಳಿದುಕೊಳ್ಳುತ್ತಾರೆ. ಕೂದಲು ಸರಿ ಮಾಡ್ತಾರೆ. ಶಾಂಪು ಹಾಕುತ್ತಾರೆ. ಕೂದಲು ಏನೂ ಕೆಲಸ ಮಾಡಲ್ಲ. ಆದರೂ ಶೋಕಿ ಮಾಡ್ತಾರ. ನೀನು ಬೆಳಗಿನಿಂದ ಬಡಕೋತನೇ ಇದ್ದರೂ ನಿನಗೆ ಗೌರವನೇ ಇಲ್ಲ’ ಅಂತ ಹೇಳಿತಂತೆ. ಅದಕ್ಕೆ ಹೃದಯ ‘ನಿನಗೆ ಕೂದಲ ಚಿಂತೆ ಯಾಕೆ. ಅದು ಬೆಳೀತದೆ. ಬೆಳ್ಳಗಾಗುತ್ತದೆ. ಒಂದು ದಿನ ಬಿದ್ದು ಹೋಗುತ್ತದೆ. ನಾನು ಯಾಕ ದುಡೀತೀನಂದ್ರ ದುಡಿಯೋರು ಬದುಕುತ್ತಾರ ಮತ್ತು ಬದುಕಿಸುತ್ತಾರ’ ಎಂದು ಹೇಳಿತಂತೆ. ಅದಕ್ಕ ನಾವು ಸದಾ ದುಡಕೋತ ಇರಬೇಕು. ❖

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ — ಶುಕ್ರವಾರ ಆಗಸ್ಟ್ 16, 2024

ಶ್ರೀ ಕ್ರೋಧಿ ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಶ್ರಾವಣ ಶುಕ್ಲ ಏಕಾದಶಿ ಗಂ. 9-40 **ನಕ್ಷತ್ರ:** ಮೂಲ ಗಂ. 12-44 **ಯೋಗ:** ವಿಷ್ಕಂಭ ಗಂ. 13-11 **ಕರಣ:** ವಿಷ್ಟಿ ಗಂ. 9-40, ಕರ್ಕಾಟಕ ಮಾಸದ 30 ನೇ ದಿನ, ಮಳೆನಕ್ಷತ್ರ: ಆಶ್ಲೇಷ 4.
ರಾಹುಕಾಲ: ಬೆಳಿಗ್ಗೆ 10-30 – 12-00 **ಸೂರ್ಯೋದಯ:** 06-22 **ಸೂರ್ಯಾಸ್ತ:** 06-48
ಮುಸ್ಲಿಂ ದಿನಾಂಕ: 11 ಸಫರ್
ದಿನ ವಿಶೇಷ: ಝುಲಾನ ಯಾತ್ರಾರಂಭ (ಪೂರ್ವಾಹ್ನ), ವರ ಮಹಾಲಕ್ಷ್ಮಿ ವ್ರತ (ದ. ಭಾರತ), ಪವಿತ್ರ ಏಕಾದಶಿ, ಮಾನಸ ಪೂಜೆ ಮುಕ್ತಾಯ (ಬಂಗಾಳ) **ಅದೃಷ್ಟ ಸಂಖ್ಯೆ:** 1, 8

ಮೇಷ: ಕೌಟುಂಬಿಕ ಸಮಸ್ಯೆಗಳಿಗೆ ಸಂಬಂಧಿಸಿದಂತೆ ಹಿರಿಯರ ಸಲಹೆ ಪಡೆದು, ಅಂತಿಮ ತೀರ್ಮಾನಕ್ಕೆ ಬರುವುದು ಉತ್ತಮ. ದಂತ ವೇದನೆಯಿಂದ ದಂತವೈದ್ಯರನ್ನು ಸಂಪರ್ಕಿಸಬೇಕಾಗಬಹುದು.

ವೃಷಭ: ಸಮಾಜದಲ್ಲಿ ಹೆಸರು ಸಂಪಾದಿಸಲು ಪೂರಕ ವಾತಾವರಣ ಇರಲಿದೆ. ವಸ್ತ್ರ ವಿನ್ಯಾಸದಲ್ಲಿ ವಿಶೇಷ ಪರಿಣತಿ ಪಡೆದುಕೊಳ್ಳುವಿರಿ. ಕೊಡು ಕೊಳ್ಳುವಿಕೆ ವ್ಯವಹಾರಗಳು ಹೆಚ್ಚಲಿದೆ.

ಮಿಥುನ: ತಂದೆಯ ಮನಸ್ಸನ್ನು ನೋಯಿಸದೆ, ಅವರ ಸಲಹೆಯಂತೆ ನಡೆಯುವುದು ಶ್ರೇಯಸ್ಕರವಾಗಿರುತ್ತದೆ. ಹಿರಿಯರ ಆಶೀರ್ವಾದ ಮತ್ತು ಮಾರ್ಗದರ್ಶನ ನಿಮ್ಮ ಪಾಲಿಗಿರುವುದರಿಂದ ಶುಭವಾಗುವುದು.

ಕರ್ಕಾಟಕ: ನಿಂತುಹೋಗಿದ್ದ ಕಾರ್ಯಗಳು ಪುನಃ ಆರಂಭಗೊಳ್ಳುವುದು. ಉದ್ಯೋಗ ನಿಮಿತ್ತ ವಿದೇಶಕ್ಕೆ ಪ್ರಯಾಣಿಸಬೇಕಾದ ಸಾಧ್ಯತೆ ಇದೆ. ಸಾಲದ ಹೊರೆ ಕಡಿಮೆಯಾಗಲಿದೆ.

ಸಿಂಹ: ಸ್ವಾರ್ಥ ಅಪೇಕ್ಷೆ ಇಲ್ಲದೆ ಮಾಡುತ್ತಿರುವ ಕೆಲಸಗಳಿಗೆ ಸಕಾರಾತ್ಮಕ ಪ್ರತಿಫಲ ಇರುತ್ತದೆ. ಸೂಕ್ಷ್ಮ ವಿಚಾರಗಳ ಬಗ್ಗೆ ನಿರ್ಧರಿಸುವಾಗ ಎಚ್ಚರ ವಹಿಸುವುದು ಉತ್ತಮ. ದುರ್ಗಾದೇವಿಯನ್ನು ಪ್ರಾರ್ಥಿಸಿ.

ಕನ್ಯಾ: ವಿದೇಶಿ ಸಂಸ್ಥೆಗಳೊಡನೆ ಸಹಭಾಗಿತ್ವ ಒಪ್ಪಂದ ಮಾಡಿಕೊಳ್ಳುವುದರಿಂದ ಹೆಚ್ಚಿನ ಆದಾಯ ಮತ್ತು ಸಮಾಜದಲ್ಲಿ ಉನ್ನತ ಸ್ಥಾನಮಾನ ಸಿಗುವ ಸಾಧ್ಯತೆ ಇದೆ. ಕೆಲಸದಲ್ಲಿ ದೋಷಗಳುಂಟಾಗಬಹುದು. ಎಚ್ಚರ ವಹಿಸಿ.

ತುಲಾ: ಕಾರ್ಯಸಾಧನೆಗಳಿಗೆ ಆಲಸ್ಯ ಅಡ್ಡಿಯಾಗುವ ಸಂಭವವಿದೆ. ವೃತ್ತಿಯಲ್ಲಿ ಹೊಸ ಬದುಕು ಆರಂಭಿಸಲು ಅವಕಾಶಗಳ ಬಾಗಿಲು ತೆರೆದಿದೆ. ನಿಮ್ಮೆಲ್ಲಾ ಸಮಸ್ಯೆಗಳಿಗೆ ಮುಕ್ತಿ ಸಿಗಲಿದೆ.

ವೃಶ್ಚಿಕ: ಆರ್ಥಿಕ ಸ್ಥಿತಿಯನ್ನು ಇನ್ನಷ್ಟು ಉತ್ತಮಗೊಳಿಸಿಕೊಳ್ಳುವ ಅವಕಾಶ ಸಿಗಲಿದೆ. ಖಾದ್ಯ ತೈಲಗಳ ವ್ಯಾಪಾರಗಳಿಂದ ಹೇರಳ ಲಾಭ ಪಡೆಯುವಿರಿ. ಕಂಕಣ ಬಲದ ಸಾಧ್ಯತೆ ಹೆಚ್ಚಿದೆ.

ಧನು: ಇಂದಿನ ಕೆಲಸವನ್ನು ಇಂದಿನ ದಿನವೇ ಮುಗಿಸುವ ಜವಾಬ್ದಾರಿ ಮೈಗೂಡಿಸಿಕೊಳ್ಳಿ. ನಿಮ್ಮ ಸೃಜನಶೀಲತೆಯನ್ನು ಪ್ರದರ್ಶಿಸಲು ಬೇಕಾದಷ್ಟು ಅವಕಾಶಗಳು ಒದಗಿ ಬರುವುವು. ಹಸಿರು ಬಣ್ಣ ಶುಭತರಲಿದೆ.

ಮಕರ: ಆಭರಣ ಅಥವಾ ಬಟ್ಟೆ ವ್ಯಾಪಾರಿಗಳು ಪತ್ರಿಕೆಯವರ ಸಹಕಾರದಿಂದ ಪ್ರಚಾರ ಪಡೆದುಕೊಳ್ಳಬಹುದು. ಖರ್ಚು ವೆಚ್ಚಗಳ ಮೇಲೆ ಹಿಡಿತ ಸಾಧಿಸಿ. ನಿಮ್ಮ ಆಲೋಚನೆಗಳು ಇತರರ ಮೆಚ್ಚುಗೆಗೆ ಪಾತ್ರವಾಗಲಿದೆ.

ಕುಂಭ: ಕೆಲಸ ಕಾರ್ಯಗಳಲ್ಲಿ ಪ್ರಯತ್ನಕ್ಕೆ ತಕ್ಕ ಫಲ ದೊರಕಲಿದೆ. ಸೋಮಾರಿತನ, ಅತಿಯಾದ ನಿದ್ದೆಯು ದೈನಂದಿನ ಚಟುವಟಿಕೆಗಳಿಗೆ ಅಡ್ಡಿಯುಂಟು ಮಾಡಲಿವೆ. ವಿದೇಶಿ ವಸ್ತು ಖರೀದಿಸುವ ಸಾಧ್ಯತೆ ಇದೆ.


ಮೀನ: ತಾಯಿಯ ದೇಹದಲ್ಲಿ ವಾಯು ಪ್ರಕೋಪದಿಂದ ಹಲವು ಸಮಸ್ಯೆಗಳು ಕಾಡಬಹುದು. ಸ್ಟೇಷನರಿ ಮತ್ತು ಫ್ಯಾನ್ಸಿ ವಸ್ತುಗಳ ಮಾರಾಟದಿಂದ ಲಾಭವಾಗಲಿದೆ. ಅಧ್ಯಯನ ನಿರತರಿಗೆಅಗತ್ಯ ಸಹಾಯ ದೊರಕಲಿದೆ.

ಪದಬಂಧ 5774

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಕಾಮನಬಿಲ್ಲು ಇಲ್ಲಿ ಮೂಡಿದೆ (4)
5.ಮನಸ್ಸಿನ ಬಯಕೆಯಿಲ್ಲಿ ತಿರುವುಮುರುವು ಆಗಿದೆ (4)
8.ಈಕೆ ಕೆಟ್ಟ ಹೆಂಗಸು(3)
9.ತಂದೆ ತಾಯಿ ಇರುವ ಊರು(4)
11.ಪದ್ಯದ ನಿಯತ ಸ್ಥಳಗಳಲ್ಲಿ ಬರುವ ನಿಯತಾಕ್ಷರ (2)
12.ಹಾರಾಡುವಾಗ ಕೇಳಿಸಿದ ಗಾನ! (2)
13.ನಡುವೆ ಪ್ರತಿಯಿದ್ದಾಗ ಎಣೆಯಿಲ್ಲದ್ದು ಕಾಣುವುದು (4)
15.ರೋಗದೊಡನೆ ಬರುವ ಜೋಡುನುಡಿ (3)
16.ಹೂಳಿಟ್ಟ ನಿಧಿಯು ಕರದಲ್ಲಿದೆ (4)
19.ತಪ್ಪು ತಿಳಿವಳಿಕೆ (4)

ಮೇಲಿಂದ ಕೆಳಕ್ಕೆ
12.ಮಿತಿಗೆ ಒಳಪಟ್ಟದ್ದು (4)
3.ಜಿದ್ದು ಈ ರೀತಿ ಬಂದಿದೆ (2)
4.ಉಲ್ಟಾ ಪಲ್ಟಾ ಅಗಿರುವ ದೃಷ್ಟಿ (2)
6.ರಕ್ತವಿಲ್ಲಿ ಉಲ್ಟಾ ಕಾಣುತ್ತಿದೆ (3)
7.ಬೆಟ್ಟಗುಡ್ಡಗಳಿಂದ ಕೂಡಿದ ಪ್ರದೇಶ (4)
8.ಉಲ್ಟಾ ನಿಂತಿರುವ ಗುಂಪು (3)
10.ಸತಿಯಿರುವ ಅತಿಥಿ ಗೃಹ (3)
11.ನಡುವಿರುವ ಮಾಣಿ ನಂಬಲರ್ಹ! (4)
12.ಶಿಲ್ಪಕಲೆಗಳ ನಾಡು ಎಂದು ಹೆಸರಾದ ಜಿಲ್ಲೆ(3)
13.ಕೊನೆಗೆ ಭಾವನಿದ್ದರೆ ಇಲ್ಲದಿರುವುದು! (3)
14.ಮರಳು ತುಂಬಿರುವ ಭೂಮಿ (4)
17.ರೈಲು ಬಂದಿಯಲ್ಲಿನ ಬೋಗಿ (2)
18.ಕಿರಣ ಇಲ್ಲಿ ಕಾಣುತ್ತಿದೆ (2)



5773ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಸರ್ಪದಷ್ಟ 2.ಗಾಲಿ 6.ಕಡಿತ 8.ಪತ್ತಲ 9.ಹೊಸಬದುಕು 12.ಕುಹಕಿ 13.ಹಗುರ 15.ಣ್ಣೆಗೊ 16.ಪ್ರಕರಣ

ಮೇಲಿಂದ ಕೆಳಕ್ಕೆ: 1.ಸಕಾರಣ 2.ದಶಕ 4.ಲಿಶಾಲಬ 5.ತಪರಾಕು 7.ತಲೆಬರಹ 9.ಹೊಟ್ಟೆಕಿಚ್ಚು 10.ಮಂಕುದಿಣ್ಣೆ 11.ಅವಗುಣ 14.ರಥಿಕ

ಸುಡೊಕು 6159

	2			3		4		
4		1	5		2			
				4			5	1
	9				4	6		
6		2		8				5
		4	2			3		
				2				9
	1	3	8		5			
	4		6			8		2

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6158 ಸುಡೊಕು

5	3	1	4	8	6	2	9	7
7	8	4	2	3	9	1	5	6
2	9	6	1	5	7	8	4	3
8	1	7	5	4	2	3	6	9
3	6	2	9	7	1	5	8	4
9	4	5	8	6	3	7	1	2
1	7	8	3	9	4	6	2	5
4	2	3	6	1	5	9	7	8
6	5	9	7	2	8	4	3	1

ಸಿನಿಮಾ ಪುರವಣಿ



ಗಣೇಶ್

ನಟ ಗಣೇಶ್ ಅಭಿನಯದ 'ಕೃಷ್ಣಂ ಪ್ರಣಯ ಸಖಿ' ಚಿತ್ರ ಆ.15ರಂದು ತೆರೆ ಕಂಡಿದೆ. ಹಾಡುಗಳಿಂದ ಗಮನ ಸೆಳೆದಿರುವ ಈ ಚಿತ್ರ ಕುರಿತು ಅವರು ಮಾತನಾಡಿದ್ದಾರೆ.

'ರೆಗ್ಯುಲರ್ ಮಾದರಿ ಬ್ರೇಕ್ ಮಾಡಿದ್ದೇನೆ

ವಿನಾಯಕ ಕೆ.ಎಸ್

● ಈ ಚಿತ್ರದಲ್ಲಿ ನಿಮ್ಮ ಪಾತ್ರವೇನು?

ದೊಡ್ಡ ಕುಟುಂಬದ ಶ್ರೀಮಂತ ಹುಡುಗನೊಬ್ಬನ ಕಥೆ. 'ಕೃಷ್ಣ' ನನ್ನ ಪಾತ್ರದ ಹೆಸರು. ಕುಟುಂಬ, ಜೀವನ, ಪ್ರೀತಿ ಇವುಗಳ ಜೊತೆಗೆ ನಾಯಕನ ಬದುಕಿನ ಪಯಣವನ್ನು ನಿರ್ದೇಶಕರು ಭಿನ್ನ ರೀತಿಯಲ್ಲಿ ಕಟ್ಟಿಕೊಟ್ಟಿದ್ದಾರೆ. ಗಣೇಶ್ ಸಿನಿಮಾ ಎಂದರೆ ಸಾಮಾನ್ಯವಾಗಿ ಒಂದು ಕಲ್ಪನೆ ಇರುತ್ತದೆ. ಆದರೆ ಹಿಂದಿನ ಸಿನಿಮಾಗಳಲ್ಲಿ ನೋಡಿರದಂತಹ ಗಣೇಶ್ ಇಲ್ಲಿದ್ದಾರೆ. ಅದಕ್ಕೆ ಕಾರಣ ಪಾತ್ರ ಪೋಷಣೆ. ಇದೊಂದು ಎಮೋಷನಲ್ ಕಥೆ. ಹಾಗಂತ ನಾಯಕ ಕಣ್ಣೀರು ಹಾಕುವುದಿಲ್ಲ. ವ್ಯಕ್ತಿಯಿಂದ ವ್ಯಕ್ತಿಗೆ ಭಾವನೆಯ ಅಭಿವ್ಯಕ್ತಿ ಭಿನ್ನವಾಗಿರುತ್ತದೆ. ಅದನ್ನು ಇಲ್ಲಿ ಕಾಣಬಹುದು.

● ಇಲ್ಲಿತನಕ ನೀವು ಮಾಡಿದ ಪಾತ್ರಗಳಿಗಿಂತ ಎಷ್ಟು ಭಿನ್ನವಾಗಿದೆ?

ಪ್ರೀತಿಗಾಗಿ ಅಳುವ, ಅಲೆಯುವ ಸಾಕಷ್ಟು ಪಾತ್ರಗಳನ್ನು ಮಾಡಿರುವೆ. ಆದರೆ ಇಲ್ಲಿ ಎಮೋಷನ್ ಬೇರೆಯದೇ ರೀತಿಯಲ್ಲಿದೆ. 2 ಗಂಟೆ 40 ನಿಮಿಷ ನಗಿಸುತ್ತ ಒಂದು ನವಿರಾದ ಕಥೆಯನ್ನು ಹೇಳುತ್ತದೆ. ನಾಯಕಿಗೆ ಅಳುವಿದೆ. ಹೀಗಾಗಿ ನೀವು ನಿರೀಕ್ಷೆ ಮಾಡುವ ರೆಗ್ಯಲುರ್ ಗಣೇಶ್ ಇಲ್ಲಿ ಕಾಣಿಸುವುದಿಲ್ಲ. ಆ ಮಾದರಿಯನ್ನು ಬ್ರೇಕ್ ಮಾಡಿದ್ದೇವೆ.

● ಇದೊಂದು ತ್ರಿಕೋನ ಪ್ರೇಮಕಥೆಯೇ?

ಕೇವಲ ಪ್ರೇಮಕಥೆಯಲ್ಲ. ಕೌಟುಂಬಿಕ ಚಿತ್ರ. ಹೊಸ ಆಯಾಮದ ಕಥೆಯನ್ನು ನಿರ್ದೇಶಕರು ಹೆಣೆದಿದ್ದಾರೆ. ಅದನ್ನು ಈಗಲೇ ಹೇಳಿದರೆ ಚಿತ್ರದ ಕಥೆಯನ್ನು ಬಿಟ್ಟುಕೊಟ್ಟಂತೆ ಆಗುತ್ತದೆ. ಮುಖ್ಯವಾಗಿ ಇಬ್ಬರು ನಾಯಕಿಯರು. ಹಾಡುಗಳು ಚಿತ್ರದ ಪ್ಲಸ್ ಪಾಯಿಂಟ್. 'ದ್ವಾಪರ' ಹಾಡು ಈಗಾಗಲೇ ಸೂಪರ್ ಹಿಟ್ ಆಗಿದೆ. ಹಾಡುಗಳು ದೊಡ್ಡ ಹಿಟ್ ಆಗದೆ ಬಹಳ ಕಾಲವಾಗಿತ್ತು. ಮಕ್ಕಳಿಂದ ಹಿರಿಯರವರೆಗೆ ಎಲ್ಲರೂ ಈ ಹಾಡಿಗೆ ರೀಲ್ಸ್ ಮಾಡುತ್ತಿದ್ದಾರೆ. ಈ ಹಾಡು ಸಹಜವಾಗಿ 2 ಕೋಟಿ ಜನರನ್ನು ತಲುಪಿದೆ. ಚಿತ್ರದ ನಾಲ್ಕೂ ಹಾಡುಗಳು ಹಿಟ್. ಈ ಹಾಡುಗಳು ಚಿತ್ರಕ್ಕೆ ಆಹ್ವಾನ ಪತ್ರಿಕೆಯಿದ್ದಂತೆ.

● ಯಾವುದೇ ಚಿತ್ರ ಬಿಡುಗಡೆಗೆ ಮುನ್ನ ಎಷ್ಟೇ ಭರವಸೆ ಮೂಡಿಸಿದರೂ ಪ್ರೇಕ್ಷಕರು ಚಿತ್ರಮಂದಿರಗಳತ್ತ ಬರದಿರಲು ಕಾರಣ ಏನಿರಬಹುದು?

ಈ ವಿಷಯದಲ್ಲಿ ನಾವು ಪ್ರೇಕ್ಷಕರನ್ನು ದೂರುವುದು ತಪ್ಪಾಗುತ್ತದೆ. ಗುಣಮಟ್ಟ, ಕಂಟೆಂಟ್‌ನೊಂದಿಗೆ ಸಿನಿಮಾ ಚೆನ್ನಾಗಿ ಮಾಡುವುದು ಬಹಳ ಮುಖ್ಯ. ಮೇಕಿಂಗ್ ಕೂಡ ಮಹತ್ವದ್ದು. ಜನರಿಗೆ ಕಥೆ ಕನೆಕ್ಟ್ ಆಗಬೇಕು. ಇಲ್ಲವಾದರೆ ಮನೆ ಬಾಗಿಲಿಗೆ ಹೋಗಿ ಕರೆದರೂ ಜನ ಬರುವುದಿಲ್ಲ. ಸಿನಿಮಾ ವ್ಯಾಪ್ತಿ ಹೆಚ್ಚಾಗಿದೆ. ಇವತ್ತು ನಾವು ಜಾಗತಿಕವಾಗಿ ಸ್ಪರ್ಧೆ ಮಾಡುತ್ತಿದ್ದೇವೆ. ಒಟಿಟಿ, ಬೇರೆ ಭಾಷೆ ಸಿನಿಮಾಗಳ ಪೈಪೋಟಿ ಎಲ್ಲವನ್ನೂ ಮೀರಿ ನಿಲ್ಲುವಂತಹ ಸಿನಿಮಾಗಳು ಬೇಕಿವೆ.

● ಈ ವಾರ 15 ಸಿನಿಮಾಗಳಿವೆ. ಕೆಲ ದೊಡ್ಡ ಸಿನಿಮಾಗಳಿಂದ ಬಹಳ ಪೈಪೋಟಿ ಇದೆ ಅನ್ನಿಸುತ್ತಿಲ್ಲವೇ?

ಯಾವಾಗ ಬಂದರೂ ಈ ಪೈಪೋಟಿ ಇದ್ದೇ ಇದೆ. ಬಿಡುಗಡೆಗೆ ಮುನ್ನ ಎಲ್ಲವೂ ಕೇವಲ ಸಿನಿಮಾ ಅಷ್ಟೆ. ಬಿಡುಗಡೆ ನಂತರ ಸಣ್ಣ, ದೊಡ್ಡ ಎಂಬುದು. ತುಂಬ ಸಿನಿಮಾಗಳಿಂದ ಪ್ರೇಕ್ಷಕರು ಸ್ಪ್ಲಿಟ್ ಆಗಬಹುದು. ಆದರೆ ಇವತ್ತಿನ ಡಾರ್ಕ್ ಸಿನಿಮಾಗಳ ನಡುವೆ ನಮ್ಮದು ಕಲರ್‌ಫುಲ್ ಸಿನಿಮಾ. ರಾಮ್‌ಕಾಮ್ ಕಥೆ. ಹೀಗಾಗಿ ಫ್ಯಾಮಿಲಿ ಆಡಿಯನ್ಸ್ ಬಂದೇ ಬರುತ್ತಾರೆ ಎಂಬ ನಂಬಿಕೆಯಿದೆ.

● ನಿಮ್ಮ ಮುಂದಿನ ಸಿನಿಮಾಗಳು...

ವಿಖ್ಯಾತ್ ನಿರ್ದೇಶನದಲ್ಲಿ ರಮೇಶ್ ಅರವಿಂದ್ ಜೊತೆ ಒಂದು ಸಿನಿಮಾ ಈಗಾಗಲೇ ಘೋಷಣೆಯಾಗಿದೆ. ಇದಲ್ಲದೇ ಇನ್ನೆರಡು ಸಿನಿಮಾಗಳು ಪ್ರಗತಿಯಲ್ಲಿವೆ. ಸದ್ಯ 'ಕೃಷ್ಣಂ...' ಮೇಲೆ ಗಮನವಿದೆ. ಸಿನಿಮಾಗಳು ಕಮರ್ಷಿಯಲ್ ಆಗಿಯೂ ಗೆಲ್ಲಬೇಕು. ಆಗ ಮಾತ್ರ ಸದಭಿರುಚಿಯ ಸಿನಿಮಾಗಳನ್ನು ಮಾಡಲು ಮತ್ತಷ್ಟು ಧೈರ್ಯ ಬರುತ್ತದೆ. ❖

● ನೀವು ಡಾರ್ಕ್, ಪ್ಯಾನ್ ಇಂಡಿಯಾ ಸಿನಿಮಾ ಮಾಡುವ ಆಲೋಚನೆಯಲ್ಲಿ ಇದ್ದೀರಾ?

ಇವತ್ತು ಡಾರ್ಕ್ ಸಿನಿಮಾಗಳ ಯುಗ. ಪ್ರತಿ 5–6 ವರ್ಷಕ್ಕೆ ಒಂದೊಂದು ಜಾನರ್‌ನ ಸಿನಿಮಾಗಳು ಓಡುತ್ತವೆ. 'ರೂಟ್ ಚೆನ್ನಾಗಿರಬೇಕು, ಆಗ ಫ್ರೂಟ್ ಚೆನ್ನಾಗಿರುತ್ತೆ' ಅಂತಾರೆ. 'ನುಡಿ ಬಿಟ್ಟರೆ ನಾಡು ಬಿಟ್ಟಂತೆ' ಎಂದು ಕುವೆಂಪು ಅವರು ಸೊಗಸಾಗಿ ಹೇಳಿದ್ದಾರೆ. ಹೀಗಾಗಿ ಮೊದಲು ನಮ್ಮ ಪ್ರೇಕ್ಷಕರನ್ನು ಗೆಲ್ಲಬೇಕು. ನಂತರ ತಾನಾಗಿಯೇ ಉಳಿದ ಪ್ರೇಕ್ಷಕರನ್ನು ತಲುಪುತ್ತದೆ. ಪ್ಯಾನ್ ಇಂಡಿಯಾದಲ್ಲಿಯೂ ಎಲ್ಲವೂ ಗೆಲ್ಲುತ್ತದೆ ಎನ್ನಲು ಸಾಧ್ಯವಿಲ್ಲ. 'ಕೃಷ್ಣಂ ಪ್ರಣಯ ಸಖಿ'ಯೇ ಯಾಕೆ ಪ್ಯಾನ್ ಇಂಡಿಯಾ ಸಿನಿಮಾ ಆಗಬಾರದು? ಇಲ್ಲಿ ಗೆದ್ದರೆ ನಂತರ ಉಳಿದ ಭಾಷೆಗಳಿಗೆ ಡಬ್ ಮಾಡಬಹುದು. ಇವತ್ತು ನಾವು ಕೊರಿಯನ್, ಇರಾನಿ ಸಿನಿಮಾಗಳನ್ನು ಸಬ್‌ಟೈಟಲ್ ಜೊತೆಗೆ ನೋಡುವುದಿಲ್ಲವೇ? ಹಾಗೆಯೇ ಇಲ್ಲಿ ಗೆದ್ದ ಸಿನಿಮಾಗಳು ಜಗತ್ತಿನ ಬೇರೆ ಭಾಗಗಳನ್ನು ತಲುಪುತ್ತದೆ. ನಾನು ಯಾವತ್ತು ನನ್ನ ಫ್ಯಾಮಿಲಿ ಆಡಿಯನ್ಸ್ ಗಮನದಲ್ಲಿಟ್ಟುಕೊಂಡು ಸಿನಿಮಾ ಮಾಡುತ್ತೇನೆ. ಪ್ಯಾನ್ ಇಂಡಿಯಾ ಎಂಬುದು ಅವರವರ ದೃಷ್ಟಿಕೋನವಷ್ಟೆ.



ಪಾಯಲ್ ಚಂಗಪ್ಪ, ಹರೀಶ್

'ಕ್ರೆಡಿಟ್ ಕುಮಾರ'ನಿಗೆ ಪಾಯಲ್ ಜೋಡಿ

ಸಿನಿಮಾ ಪತ್ರಕರ್ತರಾಗಿ ಕೆಲಸ ಮಾಡುತ್ತಿದ್ದ ಹರೀಶ್ ಸೀನಪ್ಪ ಇದೀಗ ಬೆಳ್ಳಿಪರದೆ ಮೇಲೆ ಹೀರೊ ಆಗಿ ಬರುತ್ತಿದ್ದಾರೆ. 'ಬಾಂಡ್ ರವಿ' ಸಿನಿಮಾ ನಿರ್ದೇಶಿಸಿದ್ದ ಪ್ರಜ್ವಲ್ ಆ್ಯಕ್ಷನ್ ಕಟ್ ಹೇಳುತ್ತಿರುವ 'ಕ್ರೆಡಿಟ್ ಕುಮಾರ' ಸಿನಿಮಾದ ಮುಹೂರ್ತ ಇತ್ತೀಚೆಗೆ ಬೆಂಗಳೂರಿನ ಕಂಠೀರವ ಸ್ಟುಡಿಯೊದಲ್ಲಿ ನಡೆಯಿತು.

ನಟ ಧ್ರುವ ಸರ್ಜಾ ಚಿತ್ರಕ್ಕೆ ಚಾಲನೆ ನೀಡಿದರು. ನಿರ್ದೇಶಕ ಎಸ್.ಮಹೇಂದರ್, ನಿರ್ಮಾಪಕ ಉದಯ್ ಮೆಹ್ತಾ, ನಟ ಪ್ರಮೋದ್ ಹಾಗೂ ನಿರ್ಮಾಪಕ ನರಸಿಂಹ, ಪಾನಿಪುರಿ ಕಿಟ್ಟಿ, ಮಾಸ್ತಿ, ಅಣಜಿ ನಾಗರಾಜ್ ಸೇರಿದಂತೆ ಹಲವರು ಉಪಸ್ಥಿತರಿದ್ದರು.

'ಕುಮಾರನಾಗಿ ಬಣ್ಣದ ಪಯಣ ಆರಂಭಿಸಿದ್ದೇನೆ. 2009ರಲ್ಲಿ ಮೊದಲು ಕೇಬಲ್ ಚಾನಲ್‌ನಲ್ಲಿ ಕೆಲಸ ಮಾಡುವಾಗ ಬಣ್ಣ ಹಚ್ಚಿದ್ದು. ಅವತ್ತು ಕಲಾವಿದ ಆಗಬೇಕು ಎಂದು ಅಂದುಕೊಂಡಿದ್ದೆ. ಈಗ ಆ ಕನಸು ನನಸಾಗಿದೆ. ನಟನೆಯ ತರಗತಿಗೆ ಹೋಗುತ್ತಿದ್ದೇನೆ. ನಾಯಕಿ ಪಾಯಲ್ ಜೊತೆಗೆ ವರ್ಕ್‌ಶಾಪ್‌ಗಳನ್ನೂ ನಡೆಸಿ ದೃಶ್ಯಗಳ ರಿಹರ್ಸಲ್ ಮಾಡುತ್ತಿದ್ದೇನೆ. ಈ ಅನುಭವ ನನಗೆ ಬೇಕಿತ್ತು. ಈ ಅನುಭವ ಇಲ್ಲ ಅಂದಿದ್ರೆ ನನ್ನ ಜೀವನ ಅಪೂರ್ಣ ಆಗುತ್ತಿತ್ತು' ಎಂದರು ಹರೀಶ್.

ಸಾಲ ಮಾಡಿಕೊಂಡು ಒದ್ದಾಡುವ ಒಬ್ಬ ಕ್ಯಾಬ್ ಡ್ರೈವರ್‌ನ ಕಥೆ ಇದಾಗಿದೆ ಎಂದಿದೆ ಚಿತ್ರತಂಡ. 'ಕ್ರೆಡಿಟ್ ಕುಮಾರ'ನಾಗಿ ಹರೀಶ್ ಬಣ್ಣಹಚ್ಚಿದ್ದು, ನಾಯಕಿ ಪಾತ್ರದಲ್ಲಿ ಪಾಯಲ್ ಚಂಗಪ್ಪ ನಟಿಸುತ್ತಿದ್ದಾರೆ. ಕಿರುಚಿತ್ರಗಳ ಮೂಲಕ ಖ್ಯಾತಿಗಳಿಸಿರುವ ಪಾಯಲ್ ಇದೀಗ ನಾಯಕಿಯಾಗಿ ಬೆಳ್ಳಿಪರದೆಗೆ ಹೆಜ್ಜೆ ಇಡುತ್ತಿದ್ದಾರೆ. ಈ ಸಿನಿಮಾವನ್ನು ವಾಗೀಶ್ ಮುತ್ತಿಗೆ ನಿರ್ಮಾಣ ಮಾಡುತ್ತಿದ್ದು, ಸಿನಿಮಾಗೆ ಧರ್ಮ ವಿಶ್ ಸಂಗೀತ ನಿರ್ದೇಶನ ಮಾಡುತ್ತಿದ್ದಾರೆ. ಈ ಸಿನಿಮಾದಲ್ಲಿ ಮೂರು ಹಾಡುಗಳಿದ್ದು, ವಿ.ನಾಗೇಂದ್ರ ಪ್ರಸಾದ್, ಪ್ರಮೋದ್ ಮರವಂತೆ ಹಾಗೂ 'ಭರ್ಜರಿ' ಚೇತನ್ ಸಾಹಿತ್ಯವಿದೆ. ಸದ್ಯ ಮುಹೂರ್ತ ಮಾಡಿಕೊಂಡಿರುವ ತಂಡ ಶೀಘ್ರದಲ್ಲೇ ಚಿತ್ರೀಕರಣಕ್ಕೆ ಹೊರಡಲಿದೆ. ❖

ಇಂಟರ್ವಲ್‌ಗೆ ವಿನಯ್ ಬೆಂಬಲ




ಎಂಜಿನಿಯರಿಂಗ್ ಮುಗಿಸಿದ ಯುವಕರ ಕೆಲಸ ಹುಡುಕಾಟದ ಕಥೆಯನ್ನು ಹೇಳುವ 'ಇಂಟರ್ವಲ್' ಚಿತ್ರದ ಪೋಸ್ಟರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ನಟ ವಿನಯ್ ರಾಜ್‌ಕುಮಾರ್ ಪೋಸ್ಟರ್ ಬಿಡುಗಡೆಗೊಳಿಸಿ ತಂಡಕ್ಕೆ ಶುಭ ಹಾರೈಸಿದರು.

ಭರತ್ ವರ್ಷ ಆ್ಯಕ್ಷನ್ ಕಟ್ ಹೇಳಿರುವ ಚಿತ್ರ ಬಿಡುಗಡೆಗೆ ಸಿದ್ಧವಿದೆ. ಕಿರುತೆರೆ ನಟ ಶಶಿರಾಜ್ ಚಿತ್ರದ ನಾಯಕ. 'ಬೆಂಗಳೂರು ಹಾಗೂ ಶಿವಮೊಗ್ಗದ ಸುತ್ತಮುತ್ತ ಚಿತ್ರೀಕರಣ ನಡೆಸಲಾಗಿದೆ. ಶೀಘ್ರದಲ್ಲಿ ಚಿತ್ರ ತೆರೆಗೆ ಬರಲಿದೆ' ಎಂದರು ನಿರ್ದೇಶಕರು.

ಐದು ಹಾಡುಗಳಿಗೆ ವಿಕಾಸ್ ವಸಿಷ್ಠ ಸಂಗೀತ ನಿರ್ದೇಶನವಿದ್ದು, ಪ್ರಮೋದ್ ಮರವಂತೆ ಹಾಗೂ ಸುಖಿ ಸಾಹಿತ್ಯ ಬರೆದಿದ್ದಾರೆ. ಚಿತ್ರಕ್ಕೆ ರಾಜ್‌ಕಾಂತ್ ಛಾಯಾಚಿತ್ರಗ್ರಹಣ, ಶಶಿಧರ್ ಸಂಕಲನವಿದೆ. ❖

'ಲಡ್ಕಿ'ಗೆ ಸಾಥ್ ನೀಡಿದ ರಾಗಿಣಿ



ಅಮೃತ

ಅಧೀರ ಸಂತು ನಿರ್ಮಿಸಿ, ನಿರ್ದೇಶಿಸಿರುವ 'ಓ ಏ ಲಡ್ಕಿ' ಆಲ್ಬಂ ಸಾಂಗ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ನಟಿ ರಾಗಿಣಿ ದ್ವಿವೇದಿ ಹಾಡನ್ನು ಬಿಡುಗಡೆಗೊಳಿಸಿ ತಂಡಕ್ಕೆ ಶುಭ ಹಾರೈಸಿದರು.

'ಹಾಡು ಸೊಗಸಾಗಿದೆ. ನಿರ್ದೇಶಕರ ವಿಷನ್ ತೆರೆಯ ಮೇಲೆ ಕಾಣುತ್ತಿದೆ. ಉತ್ತಮ ಸ್ಥಳಗಳಲ್ಲಿ ಚಿತ್ರೀಕರಣ ಮಾಡಿದ್ದಾರೆ' ಎಂದರು ರಾಗಿಣಿ.

ಉಗ್ರಂ ರವಿ ಖಳನಾಯಕನಾಗಿ ನಟಿಸಿದ್ದಾರೆ. ವಿದೇಶಿ ಯುವತಿಯಾಗಿ ಅಮೃತ, ಡೆಲಿವರಿ ಬಾಯ್ ಆಗಿ ಸಮೀರ್ ನಗರದ್ ಅಭಿನಯಿಸಿದ್ದಾರೆ. ಎಂ.ಎಸ್.ತ್ಯಾಗರಾಜ್ ಈ ಹಾಡಿಗೆ ಸಂಗೀತ ನೀಡಿದ್ದು, ಎಸ್.ಹಾಲೇಶ್ ಛಾಯಾಚಿತ್ರಗ್ರಹಣವಿದೆ.

'ನಾನು ಉದ್ಯಮಕ್ಕೆ ಹೊಸಬನೇನಲ್ಲ. ಸಾಕಷ್ಟು ಚಿತ್ರಗಳಲ್ಲಿ ಕೆಲಸ ಮಾಡಿರುವೆ. ಉಪೇಂದ್ರ ಅವರ ಸಿನಿಮಾ ಮಾಡಬೇಕಿತ್ತು. ಕಾರಣಾಂತರಗಳಿಂದ ನಿಂತಿದೆ' ಎಂದು ಸಂತು ಹೇಳಿದರು.

ಚಿತ್ರತಂಡದೊಂದಿಗೆ ದತ್ತಣ್ಣ



ಇದು 'ಮೃದುಲ'ಳ ಟ್ರೇಲರ್

ಬಹುತೇಕ ಹೊಸಬರಿಂದಲೇ ಕೂಡಿರುವ 'ಲೈಫ್ ಆಫ್ ಮೃದುಲ' ಚಿತ್ರದ ಟ್ರೇಲರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ.

ಮದನ್ ಮೂವೀಸ್ ಬ್ಯಾನರ್ ಅಡಿಯಲ್ಲಿ ಮದನ್‌ಕುಮಾರ್ ಸಿ., ಚಿತ್ರವನ್ನು ನಿರ್ಮಿಸಿ, ನಾಯಕರಾಗಿ ನಟಿಸಿದ್ದಾರೆ. ಚೇತನ್ ತ್ರಿವೇಣ್ ಚಿತ್ರಕಥೆ ಬರೆದು ನಿರ್ದೇಶಿಸಿದ್ದಾರೆ.

'ನಾನೊಬ್ಬ ಕೆಟ್ಟ ವಿಮರ್ಶಕ. ಅಷ್ಟು ಸುಲಭವಾಗಿ ಸಿನಿಮಾ ಒಪ್ಪಿಕೊಳ್ಳುವವನಲ್ಲ. ನಿರ್ದೇಶಕರು ಪ್ರಚಾರಕ್ಕೆ ಬೈಟ್ಸ್ ಕೊಡಬೇಕೆಂದು ಕೋರಿಕೊಂಡರು. ಚಿತ್ರ ನೋಡಿದ ಮೇಲೆ ಕೊಡುತ್ತೇನೆಂದು ಷರತ್ತು ಹಾಕಿದ್ದೆ. ನಂತರ ಎರಡು ಗಂಟೆ ಸಿನಿಮಾ ನೋಡಿಸಿಕೊಂಡು ಹೋಯಿತು. ಹೆಣ್ಣಿನ ತೊಳಲಾಟ, ಆಕೆಯನ್ನು ರಕ್ಷಣೆ ಮಾಡುವ ರೀತಿಯನ್ನು ಜನರಿಗೆ ತಲುಪಿಸುವ ಪ್ರಯತ್ನ ಮಾಡಲಾಗಿದೆ. ಚಿತ್ರವು ಗಾಢವಾಗಿ ಮನಸ್ಸಿಗೆ ತಟ್ಟುತ್ತದೆ' ಎಂದರು ಹಿರಿಯ ನಟ ದತ್ತಣ್ಣ.

ಕಾಲ್ಪನಿಕ ಡಾರ್ಕ್ ಡ್ರಾಮಾ ಜಾನರ್‌ನ ಕಥೆಯಾಗಿದ್ದು, ಮೃದುಲಾ ಎಂಬುವಳ ಜೀವನದಲ್ಲಿ ಎದುರಾಗುವ ಮೂರು ವಿಭಿನ್ನ ಕಾಲ ಘಟ್ಟಗಳು ಚಿತ್ರದಲ್ಲಿದೆ. ನಾಯಕಿಯಾಗಿ ಪೂಜಾ ಲೋಕಪುರ್ ಅಭಿನಯಿಸಿದ್ದಾರೆ. ಚಿತ್ರಕ್ಕೆ ರಾಹುಲ್ ಎಸ್.ವಾಸ್ತರ್ ಸಂಗೀತ, ಅಚ್ಚುಸುರೇಶ್ ಛಾಯಾಚಿತ್ರಗ್ರಹಣ, ವಸಂತಕುಮಾರ್ ಕೆ. ಸಂಕಲನವಿದೆ. ❖

ಮತ್ತೆ ಬಂದ ಗುರುನಂದನ್



ತಪಸ್ವಿನಿ, ಗುರುನಂದನ್

'ಫಸ್ಟ್ ರ್‍ಯಾಂಕ್ ರಾಜು' ಖ್ಯಾತಿಯ ನಟ ಗುರುನಂದನ್ ವಿರಾಮದ ಬಳಿಕ ಮತ್ತೆ ಸ್ಯಾಂಡಲ್‌ವುಡ್‌ಗೆ ಮರಳಿದ್ದಾರೆ. ಅವರ ನಟನೆಯ ಹೆಸರಿಡದ ಚಿತ್ರವೊಂದು ಇತ್ತೀಚೆಗಷ್ಟೇ ಸೆಟ್ಟೇರಿದೆ. ಅಶ್ವಿನಿ ಪುನೀತ್ ರಾಜ್‌ಕುಮಾರ್ ಚಿತ್ರಕ್ಕೆ ಚಾಲನೆ ನೀಡಿ ತಂಡಕ್ಕೆ ಶುಭ ಹಾರೈಸಿದರು.

ಗುರುನಂದನ್ ನಟನೆಯ ಜೊತೆಗೆ ಮಂಡಿಮನೆ ಟಾಕೀಸ್ ಬ್ಯಾನರ್ ಅಡಿಯಲ್ಲಿ ಈ ಚಿತ್ರವನ್ನು ನಿರ್ಮಿಸುತ್ತಿದ್ದಾರೆ. ಸುಮಂತ್ ಗೌಡ ಆ್ಯಕ್ಷನ್ ಕಟ್ ಹೇಳುತ್ತಿದ್ದು, ಅವರ ಮೊದಲ ಚಿತ್ರವಿದು. ಶಿವಸೇನಾ ಛಾಯಾಚಿತ್ರಗ್ರಹಣ, ಕಿರಣ್ ರವೀಂದ್ರನಾಥ್ ಸಂಗೀತ ನಿರ್ದೇಶನವಿದೆ.

'ಶೀಘ್ರದಲ್ಲಿಯೇ ಚಿತ್ರದ ಶೀರ್ಷಿಕೆ ಘೋಷಿಸುತ್ತೇವೆ. ಮೊದಲ ಹಂತದಲ್ಲಿ 15 ದಿನ ಬೆಂಗಳೂರು ಸುತ್ತಮುತ್ತ ಚಿತ್ರೀಕರಣ ನಡೆಯಲಿದೆ. ಬಳಿಕ ಚಿಕ್ಕಮಗಳೂರು, ಲಡಾಖ್‌ನಲ್ಲಿ ಚಿತ್ರೀಕರಿಸುವ ಯೋಜನೆಯಿದೆ. ಸ್ಟ್ಯಾಂಡ್‌ಅಪ್ ಕಾಮಿಡಿಯನ್ ಕುರಿತಾದ ಸಿನಿಮಾವಿದು' ಎಂದು ಗುರುನಂದನ್ ಮಾಹಿತಿ ನೀಡಿದರು.

ಚಿತ್ರಕ್ಕೆ 'ಹರಿಕಥೆ ಅಲ್ಲ ಗಿರಿಕಥೆ' ಖ್ಯಾತಿಯ ತಪಸ್ವಿನಿ ಪೂಣ್ಣಚ್ಚ ನಾಯಕಿಯಾಗಿದ್ದಾರೆ. ತಬಲ ನಾಣಿ, ಧರ್ಮಣ್ಣ ಸೇರಿದಂತೆ ದೊಡ್ಡ ತಾರಾಬಳಗ ಚಿತ್ರದಲ್ಲಿದೆ. ❖

ದಡೂತಿ ದೇಹದ ಲಾಫಿಂಗ್ ಬುದ್ಧ



ಪ್ರಮೋದ್ ಶೆಟ್ಟಿ

ನಟ ರಿಷಬ್ ಶೆಟ್ಟಿ ನಿರ್ಮಿಸಿ, ಪ್ರಮೋದ್ ಶೆಟ್ಟಿ ಮೊದಲ ಬಾರಿಗೆ ನಾಯಕರಾಗಿ ನಟಿಸಿರುವ 'ಲಾಫಿಂಗ್ ಬುದ್ಧ' ಚಿತ್ರದ ಟ್ರೇಲರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ.

ಪೊಲೀಸ್ ಕಾನ್‌ಸ್ಟೆಬಲ್ ಕಥೆ ಹೊಂದಿರುವ ಚಿತ್ರ ಆಗಸ್ಟ್ 30ರಂದು ತೆರೆಗೆ ಬರಲಿದೆ.

ಪೊಲೀಸ್ ಕಾನ್‌ಸ್ಟೆಬಲ್ 'ಗೋವರ್ಧನ'ನಾಗಿ ಪ್ರಮೋದ್ ಶೆಟ್ಟಿ ನಟಿಸಿದ್ದಾರೆ. ತನ್ನ ದಡೂತಿ ದೇಹದಿಂದ ತಮಾಷೆಗೆ ಒಳಗಾಗುವ ಗೋವರ್ಧನ, ಹಿರಿಯ ಅಧಿಕಾರಿಗಳಿಂದ ಟೀಕೆ, ನಿಂದನೆಗೆ ಗುರಿಯಾಗುತ್ತಾನೆ. ಬಳಿಕ ದೇಹ ಕರಗಿಸಲು ನಡೆಸುವ ಕಸರತ್ತೇ ಚಿತ್ರಕಥೆ ಎಂಬುದು ಟ್ರೇಲರ್‌ನಿಂದ ಗೊತ್ತಾಗುತ್ತಿದೆ.

ಚಿತ್ರಕ್ಕೆ ಭರತ್ ರಾಜ್ ನಿರ್ದೇಶನವಿದೆ. 'ಪೊಲೀಸ್ ಕುಟುಂಬ ಹಾಗೂ ಅವರ ಭಾವನೆಗಳ ಸುತ್ತ ಈ ಸಿನಿಮಾದ ಕಥೆ ಸಾಗುತ್ತದೆ. ನಾನೂ ಈ ಸಿನಿಮಾದಲ್ಲಿ ನಟಿಸಬೇಕಿತ್ತು. ಆದರೆ 'ಕಾಂತಾರ' ಸಿನಿಮಾದ ಚಿತ್ರೀಕರಣದ ಕಾರಣದಿಂದ ಹಿಂದಕ್ಕೆ ಸರಿದೆ. ನನ್ನ ಆ ಪಾತ್ರದ ಜಾಗಕ್ಕೆ ದಿಗಂತ್ ಅವರು ಸೇರ್ಪಡೆಯಾದರು' ಎಂದಿದ್ದರು ನಿರ್ಮಾಪಕ ರಿಷಬ್ ಶೆಟ್ಟಿ.

ತೇಜು ಬೆಳವಾಡಿ 'ಸತ್ಯವತಿ' ಎಂಬ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ದಿಗಂತ್ ಕೂಡ ಪಾತ್ರವೊಂದನ್ನು ನಿಭಾಯಿಸಿದ್ದಾರೆ. ಭದ್ರಾವತಿ ಹಾಗೂ ಸುತ್ತಮುತ್ತಲಿನ ಸ್ಥಳದಲ್ಲೇ ಹೆಚ್ಚು ಚಿತ್ರೀಕರಣ ನಡೆದಿದೆ. ಕೆ.ಎಸ್ ಚಂದ್ರಶೇಖರ್ ಅವರ ಛಾಯಾಚಿತ್ರಗ್ರಹಣ, ಕೆ.ಎಂ.ಪ್ರಕಾಶ್ ಅವರ ಸಂಕಲನ ಈ ಚಿತ್ರಕ್ಕಿದೆ. ❖



ಮಧುಮಿತ

ಆ.23ಕ್ಕೆ 'ಸಿ' ಚಿತ್ರ ತೆರೆಗೆ

ಬಹುತೇಕ ಹೊಸಬರಿಂದಲೇ ಕೂಡಿರುವ 'ಸಿ' ಚಿತ್ರದ ಟ್ರೇಲರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದ್ದು, ಆ. 23ರಂದು ಚಿತ್ರ ತೆರೆಗೆ ಬರುತ್ತಿದೆ. ನಟ ರಾಜವರ್ಧನ್ ಟ್ರೇಲರ್ ಬಿಡುಗಡೆ ಮಾಡಿ ತಂಡಕ್ಕೆ ಶುಭ ಹಾರೈಸಿದರು.

ಕಿರಣ್ ಸುಬ್ರಮಣಿ ನಿರ್ದೇಶನದ ಜೊತೆಗೆ ನಾಯಕನಾಗಿಯೂ ಈ ಸಿನಿಮಾದಲ್ಲಿ ಕಾಣಿಸಿಕೊಂಡಿದ್ದಾರೆ. ಚಿತ್ರಕ್ಕೆ ಎಜಿಎಸ್ ಪ್ರೊಡಕ್ಷನ್ ಬಂಡವಾಳ ಹೂಡಿದೆ. 'ಸಿ' ಎಂಬುದಕ್ಕೆ ಸಿನಿಮಾದಲ್ಲಿ ಮೂರು ಅರ್ಥವಿದೆ. ಆದರೆ ಟ್ರೇಲರಿನಲ್ಲಿ ಒಂದು 'ಸಿ' ಬಗ್ಗೆ ಮಾತ್ರವೇ ತೋರಿಸಿದ್ದೀವಿ. ಮತ್ತೆರಡು 'ಸಿ' ಏನು ಹೇಳುತ್ತದೆ, ಅದರ ಅರ್ಥವೇನು ಎಂಬುದನ್ನು ಚಿತ್ರಮಂದಿರಕ್ಕೆ ಬಂದು ನೋಡಬೇಕು. ಸಸ್ಪೆನ್ಸ್, ಎಮೋಷನ್ಸ್, ಥ್ರಿಲ್ಲರ್ ಹೀಗೆ ಎಲ್ಲ ರೀತಿಯ ಮನರಂಜನೆ ಅಂಶಗಳೂ ಈ ಸಿನಿಮಾದಲ್ಲಿದೆ' ಎಂದರು ನಿರ್ದೇಶಕರು.

ಚಿತ್ರಕ್ಕೆ ಎ.ಬಿ.ಮುರಳೀಧರನ್ ಸಂಗೀತ ನೀಡಿದ್ದಾರೆ. ನವೀನ್ ಸೂರ್ಯ ಮತ್ತು ವೀರೇಶ್ ಕುಮಾರ್ ಛಾಯಾಚಿತ್ರಗ್ರಹಣ, ನವೀನ್ ಸುಂದರರಾವ್ ಸಂಕಲನವಿದೆ. ನಟರಾದ ಪ್ರಶಾಂತ್ ನಟನ, ಸಾನ್ವಿಕಾ, ಶ್ರೀಧರ ರಾಮ್, ಮಧುಮಿತ ಮೊದಲಾದವರು ಚಿತ್ರದ ತಾರಾಬಳಗದಲ್ಲಿದ್ದಾರೆ. ❖

ಪ್ರತಿಭಟನಕಾರರ ಸೋಗಿನಲ್ಲಿ ಧ್ವಂಸಗೊಳಿಸಿದ ದುಷ್ಕರ್ಮಿಗಳು ● ಪೊಲೀಸರ ಮೇಲೆ ಕಲ್ಲು ತೂರಾಟ

ಕೋಲ್ಕತ್ತ: ಆರ್.ಜಿ.ಕರ್ ಆಸ್ಪತ್ರೆ ಮೇಲೆ ದಾಳಿ

ಕೋಲ್ಕತ್ತ (ಪಿಟಿಐ): ಇಲ್ಲಿನ ಆರ್.ಜಿ.ಕರ್ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯ ಆವರಣಕ್ಕೆ ಬುಧವಾರ ತಡರಾತ್ರಿಯ ಬಳಿಕ ನುಗ್ಗಿದ ದುಷ್ಕರ್ಮಿಗಳು, ಆಸ್ಪತ್ರೆಯ ಕಟ್ಟಡ, ವೈದ್ಯಕೀಯ ಯಂತ್ರೋಪಕರಣ, ಪೀಠೋಪಕರಣ, ಔಷಧ ಮತ್ತು ಇತರ ವೈದ್ಯಕೀಯ ಸಲಕರಣೆಗಳನ್ನು ಧ್ವಂಸಗೊಳಿಸಿದರು.

ವೈದ್ಯ ವಿದ್ಯಾರ್ಥಿನಿಯ ಅತ್ಯಾಚಾರ ಮತ್ತು ಕೊಲೆಯನ್ನು ವಿರೋಧಿಸಿ ಮಹಿಳೆಯರು ಪ್ರತಿಭಟನೆ ನಡೆಸುತ್ತಿದ್ದ ವೇಳೆ ಈ ಘಟನೆ ನಡೆದಿದ್ದು, ರಾಜಕೀಯ ಕೆಸರೆರಚಾಟಕ್ಕೂ ಕಾರಣವಾಗಿದೆ.

ಸುಮಾರು 40 ಜನರ ಗುಂಪು ಪ್ರತಿಭಟನಕಾರರ ಸೋಗಿನಲ್ಲಿ ಏಕಾಏಕಿ ಆಸ್ಪತ್ರೆಯ ಆವರಣಕ್ಕೆ ನುಗ್ಗಿದರು. ಅವರು ಆಸ್ಪತ್ರೆಯ ಕೌಂಟರ್‌ಗಳ ಗಾಜುಗಳನ್ನು ಪುಡಿಗಟ್ಟಿದರು. ತುರ್ತು ವಿಭಾಗ ಸೇರಿದಂತೆ ಕೆಲ ವಾರ್ಡ್‌ಗಳಿಗೆ ನುಗ್ಗಿ ಯಂತ್ರೋಪಕರಣಗಳಿಗೆ ಹಾನಿ ಮಾಡಿ, ಹಾಸಿಗೆಗಳನ್ನು ನಾಶಪಡಿಸಿದರು. ಔಷಧ ಕೇಂದ್ರ, ಸಿಸಿಟಿವಿ ಕ್ಯಾಮೆರಾಗಳನ್ನು ಧ್ವಂಸಗೊಳಿಸಿದರು, ಒಟ್ಟಾರೆ ಆಸ್ಪತ್ರೆಯ ಎರಡು ಮಹಡಿಗಳನ್ನು ಹಾನಿ ಮಾಡಿದರು.

ಆಗಸ್ಟ್ 9ರಿಂದ ಆಸ್ಪತ್ರೆಯ ಆವರಣದಲ್ಲಿ ನಡೆಯುತ್ತಿರುವ ಕಿರಿಯ ವೈದ್ಯರ ಪ್ರತಿಭಟನಾ ಸ್ಥಳವನ್ನೂ ದುಷ್ಕರ್ಮಿಗಳು ನಾಶಮಾಡಿದರು. ಅಲ್ಲದೆ ಪೊಲೀಸರ ಮೇಲೆ ಕಲ್ಲು ತೂರಿ ಆಕ್ರೋಶ ವ್ಯಕ್ತಪಡಿಸಿದರು. ಈ ವೇಳೆ ಪೊಲೀಸರು ಅಶ್ರುವಾಯು ಪ್ರಯೋಗಿಸಿ, ಗುಂಪು ಚದುರಿಸಿದರು.

ಈ ಘಟನೆಯಲ್ಲಿ ಕೆಲ ಪೊಲೀಸರಿಗೆ ಗಾಯಗಳಾಗಿವೆ. ಪೊಲೀಸರ ಒಂದು ವಾಹನ ಮತ್ತು ಸ್ಥಳದಲ್ಲಿದ್ದ ಎರಡು ದ್ವಿಚಕ್ರ ವಾಹನಗಳಿಗೆ ಹಾನಿಯಾಗಿದೆ ಎಂದು ಪೊಲೀಸರು ವಿವರಿಸಿದರು.

ಟಿಎಂಸಿ ಗೂಂಡಾಗಳಿಂದ ಕೃತ್ಯ– ಬಿಜೆಪಿ ಆರೋಪ: ಆಸ್ಪತ್ರೆ ಮೇಲಿನ ದಾಳಿಯನ್ನು ಖಂಡಿಸಿರುವ ಬಿಜೆಪಿ ಮುಖಂಡ ಮತ್ತು ವಿರೋಧ ಪಕ್ಷದ ನಾಯಕ ಸುವೇಂದು ಅಧಿಕಾರಿ, 'ಟಿಎಂಸಿ ವರಿಷ್ಠೆ ಮಮತಾ ಬ್ಯಾನರ್ಜಿ ಅವರು ಕಳುಹಿಸಿದ ಟಿಎಂಸಿ ಗೂಂಡಾಗಳು ಈ ದುಷ್ಕೃತ್ಯ ಎಸಗಿದ್ದಾರೆ' ಎಂದು ಆರೋಪ ಮಾಡಿದ್ದಾರೆ.

'ಮಮತಾ ಅವರು ತಮ್ಮ ಈ ಕುತಂತ್ರ ಯೋಜನೆ ಜನರಿಗೆ ತಿಳಿಯುವುದಿಲ್ಲ ಎಂದು ಕೊಂಡಿದ್ದಾರೆ' ಎಂದು ಅವರು 'ಎಕ್ಸ್'ನಲ್ಲಿ ಟೀಕಿಸಿದ್ದಾರೆ.

'ಈ ದುಷ್ಕರ್ಮಿಗಳಿಗೆ ಪೊಲೀಸರೇ ಸುರಕ್ಷಿತ ಮಾರ್ಗವನ್ನು ಕಲ್ಪಿಸಿದ್ದಾರೆ. ಇದರಿಂದಾಗಿ ಅವರು ಆಸ್ಪತ್ರೆಯೊಳಗೆ ನುಗ್ಗಿ ಸಲಕರಣೆಗಳನ್ನು ನಾಶಪಡಿಸಿ, ಪರಾರಿಯಾಗಿದ್ದಾರೆ. ಈ ಮೂಲಕ ಸಿಬಿಐಗೆ ನಿರ್ಣಾಯಕ ಸಾಕ್ಷ್ಯಗಳು ದೊರೆಯದಂತೆ ಕೃತ್ಯ ಎಸಗಿದ್ದಾರೆ' ಎಂದು ಅವರು ಆರೋಪಿಸಿದ್ದಾರೆ.

ಪ್ರತಿಭಟನೆಯಲ್ಲಿ ನರ್ಸ್‌ಗಳು ಭಾಗಿ: ಆಸ್ಪತ್ರೆಯ ನರ್ಸಿಂಗ್ ಸ್ಟೇಷನ್ ಮೇಲೆ ದಾಳಿ ನಡೆದ ಕಾರಣ, ನರ್ಸ್‌ಗಳು ಕಿರಿಯ ವೈದ್ಯರ ಜತೆ ಗುರುವಾರ ಪ್ರತಿಭಟನೆಯಲ್ಲಿ ಪಾಲ್ಗೊಂಡು ಆಕ್ರೋಶ ವ್ಯಕ್ತಪಡಿಸಿದರು.

ವಾರದಿಂದ ರಾಜ್ಯದ ವಿವಿಧ ಆಸ್ಪತ್ರೆಗಳಲ್ಲಿ ಕಿರಿಯ ವೈದ್ಯರು ಪ್ರತಿಭಟನೆ ನಡೆಸುತ್ತಿರುವುದರಿಂದ ರಾಜ್ಯದಾದ್ಯಂತ ವೈದ್ಯಕೀಯ ಸೇವೆಯಲ್ಲಿ ಭಾರಿ ವ್ಯತ್ಯಯ ಉಂಟಾಗಿದ್ದು, ರೋಗಿಗಳು ಚಿಕಿತ್ಸೆಗಾಗಿ ಪರದಾಡುವಂತಾಗಿದೆ.





ಕೋಲ್ಕತ್ತದ ಆರ್.ಜಿ.ಕರ್ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯ ಮೇಲೆ ಬುಧವಾರ ತಡರಾತ್ರಿ ದಾಳಿ ನಡೆಸಿದ ದುಷ್ಕರ್ಮಿಗಳು ವಿವಿಧ ವಾರ್ಡ್‌ಗಳನ್ನು ಧ್ವಂಸಗೊಳಿಸಿದ್ದಾರೆ (ಬಲಚಿತ್ರ) ದಾಳಿಯಿಂದ ಆಸ್ಪತ್ರೆಯಲ್ಲಿನ ವೈದ್ಯಕೀಯ ಯಂತ್ರೋಪಕರಣ ಮತ್ತು ಸಲಕರಣೆಗಳು ಹಾನಿಗೊಂಡಿವೆ –ಪಿಟಿಐ ಚಿತ್ರ

ಆಸ್ಪತ್ರೆಗೆ ಭೇಟಿ ನೀಡಿ, ಪರಿಶೀಲಿಸಿದ ರಾಜ್ಯಪಾಲ

ದುಷ್ಕರ್ಮಿಗಳಿಂದ ಧ್ವಂಸವಾದ ಆರ್.ಜಿ.ಕರ್ ಆಸ್ಪತ್ರೆಗೆ ಗುರುವಾರ ಮಧ್ಯಾಹ್ನ ಭೇಟಿ ನೀಡಿ ಪರಿಶೀಲಿಸಿದ, ಪಶ್ಚಿಮ ಬಂಗಾಳದ ರಾಜ್ಯಪಾಲ ಸಿ.ವಿ. ಆನಂದ ಬೋಸ್ ಅವರು ಘಟನೆಯನ್ನು ತೀವ್ರವಾಗಿ ಖಂಡಿಸಿದರು.

ಆಸ್ಪತ್ರೆ ಬಳಿ ಪ್ರತಿಭಟನೆ ನಡೆಸುತ್ತಿದ್ದ ವೈದ್ಯರ ಜತೆ ಮಾತುಕತೆ ನಡೆಸಿದ ಅವರು, ರಾಜ್ಯದಲ್ಲಿ ಮಹಿಳೆಯರ ಸುರಕ್ಷತೆ ಬಗ್ಗೆ ಕಳವಳ ವ್ಯಕ್ತಪಡಿಸಿದರು.

'ಆಸ್ಪತ್ರೆಯ ಆಸ್ತಿ ಹಾನಿ ಮಾಡಿರುವುದು ಇಡೀ ನಾಗರಿಕ ಸಮಾಜ ತಲೆ ತಗ್ಗಿಸುವಂತಹ ಘಟನೆ. ಯುವತಿಯರಿಗೆ ಸೂಕ್ತ ರಕ್ಷಣೆ ಇಲ್ಲದಿರುವುದು ಮನುಕುಲಕ್ಕೇ ನಾಚಿಕೆಯ ಸಂಗತಿ' ಎಂದು ಅವರು ಸುದ್ದಿಗಾರರಿಗೆ ತಿಳಿಸಿದ್ದರು.

24 ತಾಸು ಸೇವೆ ಸ್ಥಗಿತ: ಐಎಂಎ

ನವದೆಹಲಿ (ಪಿಟಿಐ): ವೈದ್ಯ ವಿದ್ಯಾರ್ಥಿನಿಯ ಅತ್ಯಾಚಾರ ಹಾಗೂ ಕೊಲೆ, ಆರ್.ಜಿ. ಕರ್ ವೈದ್ಯಕೀಯ ಕಾಲೇಜಿನಲ್ಲಿ ನಡೆದ ದೊಂಬಿ ಪ್ರಕರಣವನ್ನು ಖಂಡಿಸಿ ಶನಿವಾರ ಬೆಳಿಗ್ಗೆ 6 ಗಂಟೆಯಿಂದ 24 ತಾಸು ತುರ್ತು ಸೇವೆ ಹೊರತುಪಡಿಸಿದ ಸೇವೆಗಳನ್ನು ರಾಷ್ಟ್ರದಾದ್ಯಂತ ಸ್ಥಗಿತಗೊಳಿಸುವುದಾಗಿ ಭಾರತೀಯ ವೈದ್ಯಕೀಯ ಸಂಘ (ಐಎಂಎ) ಗುರುವಾರ ರಾತ್ರಿ ತಿಳಿಸಿದೆ.

ಅಗತ್ಯ ಸೇವೆ, ತುರ್ತು ಚಿಕಿತ್ಸೆಗಳಿಗೆ ಅಡ್ಡಿಯಾಗುವುದಿಲ್ಲ. ಒಪಿಡಿ ಸೇವೆಗಳು ಲಭ್ಯವಿರುವುದಿಲ್ಲ, ತುರ್ತು ಅಲ್ಲದ ಶಸ್ತ್ರಚಿಕಿತ್ಸೆಗಳನ್ನು ಪ್ರತಿಭಟನೆ ಅವಧಿಯಲ್ಲಿ ನಡೆಸುವುದಿಲ್ಲ ಎಂದು ಐಎಂಎ ಸ್ಪಷ್ಟಪಡಿಸಿದೆ.

ಆಸ್ಪತ್ರೆಯ ಮೇಲಿನ ದಾಳಿಯ ಹಿಂದೆ ವಿರೋಧ ಪಕ್ಷಗಳ ಕೈವಾಡವಿದೆ. ವಿಡಿಯೊಗಳನ್ನು ಗಮನಿಸಿದರೆ ಅಲ್ಲಿ ಏನೇನಾಗಿದೆ ಎಂಬುದು ಸ್ಪಷ್ಟವಾಗುತ್ತದೆ

ಮಮತಾ ಬ್ಯಾನರ್ಜಿ, ಪಶ್ಚಿಮ ಬಂಗಾಳದ ಮುಖ್ಯಮಂತ್ರಿ

ಆಸ್ಪತ್ರೆಗೆ ಬಿಗಿಭದ್ರತೆ

ಈ ಘಟನೆಗೆ ಸಂಬಂಧಿಸಿದಂತೆ 9 ಜನರನ್ನು ಬಂಧಿಸಲಾಗಿದೆ. ಅಲ್ಲದೆ ಆಸ್ಪತ್ರೆಯ ಬಳಿ ಹೆಚ್ಚಿನ ಸಂಖ್ಯೆಯಲ್ಲಿ ಪೊಲೀಸರನ್ನು ನಿಯೋಜಿಸಲಾಗಿದೆ.

'ರಿಕ್ಲೈಮ್ ದಿ ನೈಟ್' ಹೆಸರಿನ ಅಭಿಯಾನವು ಸಾಮಾಜಿಕ ಮಾಧ್ಯಮದ ಮೂಲಕ ವ್ಯಾಪಕವಾಗಿ ಪ್ರಚಾರವಾಗಿದ್ದರಿಂದ ಹೆಚ್ಚಿನ ಜನರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು. ರಾತ್ರಿ 11.55ಕ್ಕೆ ಆರಂಭವಾದ ಈ ಅಭಿಯಾನ, ಕೋಲ್ಕತ್ತದ ಪ್ರಮುಖ ಪ್ರದೇಶಗಳಲ್ಲಿ ಮತ್ತು ಇತರ ಪಟ್ಟಣಗಳಲ್ಲಿಯೂ ನಡೆಯಿತು. ಸ್ವಾತಂತ್ರ್ಯ ದಿನಾಚರಣೆ ಜತೆ ಈ ಅಭಿಯಾನವನ್ನು ಸಂಯೋಜಿಸಿದ್ದರಿಂದ ಹೆಚ್ಚಿನ ಸಂಖ್ಯೆಯಲ್ಲಿ ಜನರು ಪಾಲ್ಗೊಂಡಿದ್ದರು.

ಪೊಲೀಸ್ ಆಯುಕ್ತ ವಿನೀತ್ ಗೋಯಲ್ ಅವರು ಗುರುವಾರ ನಸುಕಿನ 2 ಗಂಟೆಗೆ ಆಸ್ಪತ್ರೆಯ ಆವರಣಕ್ಕೆ ಭೇಟಿ ನೀಡಿ ಪರಿಶೀಲಿಸಿದರು. .

ಬಾಂಗ್ಲಾ ಬೆಳವಣಿಗೆ ಸ್ವಾತಂತ್ರ್ಯದ ಮೌಲ್ಯ ನೆನಪಿಸುತ್ತಿದೆ: ಸಿಜೆಐ

ನವದೆಹಲಿ(ಪಿಟಿಐ): 'ಬಾಂಗ್ಲಾದೇಶದ ಇತ್ತೀಚಿನ ಬೆಳವಣಿಗೆಗಳು ನಮ್ಮ ಸ್ವಾತಂತ್ರ್ಯ ಮತ್ತು ಅದರ ಮೌಲ್ಯಗಳನ್ನು ನಮಗೆ ನೆನಪು ಮಾಡಿ ಕೊಡುತ್ತವೆ' ಎಂದು ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಅಭಿಪ್ರಾಯಪಟ್ಟರು.

ಸುಪ್ರೀಂ ಕೋರ್ಟ್ ಆವರಣದಲ್ಲಿ ಗುರುವಾರ ರಾಷ್ಟ್ರಧ್ವಜಾರೋಹಣ ನೆರವೇರಿಸಿದ ಬಳಿಕ ಅವರು ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿದರು.

'ಸ್ವಾತಂತ್ರ್ಯ ದಿನಾಚರಣೆಯು ರಾಷ್ಟ್ರದ ಜನತೆಗೆ ತಮ್ಮ ಕರ್ತವ್ಯಗಳನ್ನು ನೆನಪಿಸುವ ಜತೆಗೆ, ಪ್ರತಿಯೊಬ್ಬರಿಗೂ ಸಂವಿಧಾನದ ಮೌಲ್ಯಗಳನ್ನು ಅರಿಕೆ ಮಾಡಿಸುತ್ತದೆ' ಎಂದು ಹೇಳಿದರು.

'ಬಾಂಗ್ಲಾದೇಶದಲ್ಲಿ ಇಂದು ಏನಾಗುತ್ತಿದೆ. ಸ್ವಾತಂತ್ರ್ಯವು ನಮಗೆ ಎಷ್ಟು ಅಮೂಲ್ಯವಾದುದು ಎಂಬುದನ್ನು ಸ್ಪಷ್ಟವಾಗಿ ನೆನಪಿಸುತ್ತಿದೆ. ಸ್ವಾತಂತ್ರ್ಯವನ್ನು ಲಘುವಾಗಿ ತೆಗೆದುಕೊಳ್ಳುವುದು ತುಂಬಾ ಸುಲಭ. ಆದರೆ, ಈ ವಿಷಯಗಳು ಎಷ್ಟು ಮುಖ್ಯವೆಂದು ತಿಳಿಯಬೇಕಾದರೆ ದೇಶ ಸಾಗಿ ಬಂದ ಹಿಂದಿನ ಕಥೆಯನ್ನು ಅರ್ಥಮಾಡಿಕೊಳ್ಳುವುದು ಮುಖ್ಯವಾಗಿದೆ' ಎಂದು ಅವರು ಹೇಳಿದರು.

ಕೇಂದ್ರ ಕಾನೂನು ಸಚಿವ ಅರ್ಜುನ್ ರಾಮ್ ಮೇಘವಾಲ್ ಮಾತನಾಡಿ, ಸಂವಿಧಾನವು ಎಲ್ಲಕ್ಕಿಂತ ಶ್ರೇಷ್ಠವಾದುದು ಎಂದರು.



ಬಿಎಸ್‌ಎಫ್‌ನ ಮಹಿಳಾ ತಂಡವು ಬಾಂಗ್ಲಾದೇಶದ ಮಹಿಳಾ ಯೋಧರೊಂದಿಗೆ ಇದೇ ಮೊದಲ ಬಾರಿಗೆ ಸಿಹಿ ಹಂಚಿಕೊಂಡರು –ಪಿಟಿಐ ಚಿತ್ರ

ಮೊದಲ ಬಾರಿಗೆ ಬಾಂಗ್ಲಾ ಸೈನಿಕರ ಜತೆ ಸಿಹಿ ಹಂಚಿಕೊಂಡ ಮಹಿಳಾ ಬಿಎಸ್‌ಎಫ್ ತಂಡ

ನಾದಿಯಾ (ಪಶ್ಚಿಮ ಬಂಗಾಳ) (ಪಿಟಿಐ): ಇದೇ ಮೊದಲ ಬಾರಿಗೆ ಇಲ್ಲಿನ ಗೆಡೆ ಗಡಿ ಪೋಸ್ಟ್‌ನಲ್ಲಿ ಮಹಿಳಾ ತಂಡವೊಂದು ನೆರೆಯ ದೇಶದ ಮಹಿಳಾ ಸೈನಿಕ ತುಕಡಿಯೊಂದಿಗೆ ಸಿಹಿ ಹಂಚಿಕೊಂಡರು.

ಸ್ವಾತಂತ್ರ್ಯೋತ್ಸವದ ಈ ದಿನ ಭಾರತದ ಗಡಿ ಭದ್ರತಾ ಪಡೆಯ (ಬಿಎಸ್‌ಎಫ್) ಮಹಿಳಾ ತಂಡವು ಬಾಂಗ್ಲಾದೇಶದ ಗಡಿ ಭದ್ರತಾ ಮಹಿಳಾ ತಂಡದೊಂದಿಗೆ (ಬಿಜಿಬಿ) ಸಿಹಿ ಹಂಚಿಕೊಂಡಿತು. ಬಾಂಗ್ಲಾದೇಶದಲ್ಲಿ ಗಲಭೆ ನಡೆಯುತ್ತಿರುವ ಕಾರಣದಿಂದಾಗಿ ಬಾಂಗ್ಲಾ–ಭಾರತ ಗಡಿಯುದ್ದಕ್ಕೂ 'ಹೈ ಅಲರ್ಟ್' ಜಾರಿಯಲ್ಲಿದೆ.

ತಂಡದಲ್ಲಿ ಆರು ಮಹಿಳಾ ಕಾನ್‌ಸ್ಟೆಬಲ್‌ಗಳಿದ್ದರು. '

ನರೇಂದ್ರ ಮೋದಿ ಅವರ ಭಾಷಣದ ಅವಧಿ ವಿವರ

(ಅವಧಿ: ನಿಮಿಷಗಳಲ್ಲಿ)



ಪ್ರಧಾನಿ ನರೇಂದ್ರ ಮೋದಿ ಸುದೀರ್ಘ ಭಾಷಣ

ನವದೆಹಲಿ: ಗುರುವಾರ ಆಚರಿಸಿದ 78ನೇ ಸ್ವಾತಂತ್ರ್ಯ ದಿನದ ಅಂಗವಾಗಿ ಪ್ರಧಾನಿ ನರೇಂದ್ರ ಮೋದಿ ಅವರು ಸುದೀರ್ಘ 98 ನಿಮಿಷ ಭಾಷಣ ಮಾಡಿದ್ದಾರೆ. ಈ ಹಿಂದಿನ ಪ್ರಧಾನಿಗಳ ಪೈಕಿ ಇಷ್ಟೊಂದು ಸುದೀರ್ಘ ಭಾಷಣ ಮಾಡಿದ ಹೆಗ್ಗಳಿಕೆಗೆ ಮೋದಿ ಪಾತ್ರರಾಗಿದ್ದಾರೆ.

ಪ್ರಥಮ ಪ್ರಧಾನಿ ಜವಾಹರಲಾಲ್ ನೆಹರೂ ಅವರು ಮೊದಲ ಸ್ವಾತಂತ್ರ್ಯ ದಿನಾಚರಣೆಯಂದು ದೇಶವನ್ನು ಉದ್ದೇಶಿಸಿ 72 ನಿಮಿಷ ಭಾಷಣ ಮಾಡಿದ್ದರು.

1954ರಲ್ಲಿ ನೆಹರೂ ಅವರು 14 ನಿಮಿಷ ಮಾತನಾಡಿದ್ದರು. 1966ರಲ್ಲಿ, ಆಗಿನ ಪ್ರಧಾನಿ ಇಂದಿರಾ ಗಾಂಧಿ ಅವರು ಸಹ 14 ನಿಮಿಷ ಭಾಷಣ ಮಾಡಿದ್ದರು. ಪ್ರಧಾನಿಗಳಿಬ್ಬರು ಮಾಡಿದ ಅತ್ಯಂತ ಕಡಿಮೆ ಅವಧಿಯ ಭಾಷಣಗಳು ಇವು.

ಅಟಲ್ ಬಿಹಾರಿ ವಾಜಪೇಯಿ ಅವರು 2002 ಮತ್ತು 2003ರಲ್ಲಿ ಕ್ರಮವಾಗಿ 25 ಹಾಗೂ 30 ನಿಮಿಷಗಳಷ್ಟು ಭಾಷಣ ಮಾಡಿದ್ದರು. ಮನಮೋಹನ್ ಸಿಂಗ್ ಅವರು ಪ್ರಧಾನಿಯಾಗಿದ್ದಾಗ, 2012 ಮತ್ತು 2013ರಲ್ಲಿ ಕ್ರಮವಾಗಿ 32 ಹಾಗೂ 35 ನಿಮಿಷಗಳಷ್ಟು ಭಾಷಣ ಮಾಡಿದ್ದರು.

'ಮಹಿಳೆಯರ ವಿರುದ್ಧ ಅಪರಾಧ: ತುರ್ತು ಕ್ರಮ ಅಗತ್ಯ'

ರಾಜ್ಯ ಸರ್ಕಾರಗಳಿಗೆ ಪ್ರಧಾನಿ ಮೋದಿ ಕಿವಿಮಾತು● ಅಪರಾಧಿಗಳಲ್ಲಿ ಭಯ ಹುಟ್ಟಿಸುವ ಕೆಲಸವಾಗಬೇಕು; ಸಲಹೆ

ನವದೆಹಲಿ (ಪಿಟಿಐ): ಮಹಿಳೆಯರ ವಿರುದ್ಧ ನಡೆಯುವ ಅಪರಾಧಗಳ ಕುರಿತು ರಾಜ್ಯ ಸರ್ಕಾರಗಳು ಅತ್ಯಂತ ತುರ್ತಾಗಿ ಕ್ರಮ ಕೈಗೊಳ್ಳಬೇಕು ಎಂದು ಪ್ರಧಾನಿ ನರೇಂದ್ರ ಮೋದಿ ಗುರುವಾರ ಹೇಳಿದರು.

ಸ್ವಾತಂತ್ರ್ಯೋತ್ಸವ ಅಂಗವಾಗಿ ಕೆಂಪು ಕೋಟೆಯಿಂದ ಭಾಷಣ ಮಾಡಿದ ಅವರು, ಕೋಲ್ಕತ್ತದಲ್ಲಿ ವೈದ್ಯ ವಿದ್ಯಾರ್ಥಿನಿ ಮೇಲೆ ನಡೆದ ಅತ್ಯಾಚಾರ ಮತ್ತು ಕೊಲೆ ಪ್ರಕರಣವನ್ನು ಪರೋಕ್ಷವಾಗಿ ಪ್ರಸ್ತಾಪಿಸಿದರು.

ಮಹಿಳೆಯರ ಮೇಲೆ ಅತ್ಯಾಚಾರ ಹಾಗೂ ಅವರ ವಿರುದ್ಧ ಹಿಂಸಾಚಾರದ ಘಟನೆಗಳ ಬಗ್ಗೆ ಕಳವಳ ವ್ಯಕ್ತಪಡಿಸಿದ ಅವರು, 'ಈ ವಿಚಾರವಾಗಿ ಜನರಿಂದ ವ್ಯಕ್ತವಾಗುತ್ತಿರುವ ಆಕ್ರೋಶ ನನಗೆ ಅರ್ಥವಾಗುತ್ತದೆ' ಎಂದರು.

'ಮಹಿಳೆಯರ ಮೇಲಿನ ಅಪರಾಧಗಳ ಕುರಿತು ತ್ವರಿತವಾಗಿ ತನಿಖೆ ನಡೆಸಬೇಕು. ಇಂತಹ ಪೈಶಾಚಿಕ ಕೃತ್ಯಗಳನ್ನು ಎಸಗುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು' ಎಂದ ಅವರು, 'ಇಂತಹ ಕೃತ್ಯಗಳ ಬಗ್ಗೆ ಸಮಾಜವು ಸಹ ಆತ್ಮಾವಲೋಕನ ನಡೆಸಬೇಕು' ಎಂದರು.

'ಅಪರಾಧಿಗಳಲ್ಲಿ ಅವರು ಎದುರಿಸಬೇಕಾದ ಶಿಕ್ಷೆ ಬಗ್ಗೆ ಭಯ ಉಂಟಾಗುವಂತೆ ಮಾಡಬೇಕು. ಇಂತಹ ಪಾಪದ ಕೆಲಸಗಳನ್ನು ಮಾಡಿದರೆ, ನಮ್ಮನ್ನು ಗಲ್ಲಿಗೇರಿಸಲಾಗುತ್ತದೆ ಎಂಬ ಅರಿವು ಅಪರಾಧ ಎಸಗುವವರಲ್ಲಿರಬೇಕು ' ಎಂದು ಹೇಳಿದರು. ನೂತನ ಅಪರಾಧಿಕ ಕಾಯ್ದೆಗಳಲ್ಲಿ, ಶಿಕ್ಷೆ ವಿಧಿಸುವುದಕ್ಕಿಂತಲೂ ನ್ಯಾಯ ಒದಗಿಸಲು ಆದ್ಯತೆ ನೀಡಲಾಗಿದೆ ಎಂದು ಅವರು ಹೇಳಿದರು.



78ನೇ ಸ್ವಾತಂತ್ರ್ಯೋತ್ಸವದ ಅಂಗವಾಗಿ ಕೆಂಪುಕೋಟೆಯಿಂದ ಗುರುವಾರ ದೇಶವನ್ನುದ್ದೇಶಿಸಿ ಪ್ರಧಾನಿ ನರೇಂದ್ರ ಮೋದಿ ಭಾಷಣ ಮಾಡಿದರು–ಪಿಟಿಐ ಚಿತ್ರ

'ಬಾಂಗ್ಲಾದ ಪ್ರಗತಿ ಬಯಸುವ ಭಾರತ'

ಬಾಂಗ್ಲಾದೇಶದಲ್ಲಿ ಕಳೆದ ಕೆಲ ದಿನಗಳಿಂದ ನಡೆಯುತ್ತಿರುವ ಪ್ರತಿಭಟನೆ ಹಾಗೂ ಹಿಂಸಾಚಾರವನ್ನು ಪ್ರಸ್ತಾಪಿಸಿದ ಮೋದಿ, 'ಬಾಂಗ್ಲಾದೇಶದಲ್ಲಿರುವ ಹಿಂದೂಗಳು ಸೇರಿದಂತೆ ಎಲ್ಲ ಅಲ್ಪಸಂಖ್ಯಾತರ ಸುರಕ್ಷತೆ ಬಗ್ಗೆ 140 ಕೋಟಿ ಭಾರತೀಯರು ಆತಂಕ ಮನೆ ಮಾಡಿದೆ' ಎಂದು ಹೇಳಿದ್ದಾರೆ.

'ಬಾಂಗ್ಲಾದೇಶದಲ್ಲಿ ಶೀಘ್ರವೇ ಸಹಜಸ್ಥಿತಿ ಮರಳುವ ವಿಶ್ವಾಸ ಇದೆ' ಎಂದ ಅವರು, 'ನೆರೆ ರಾಷ್ಟ್ರ ಅಭಿವೃದ್ಧಿ ಹೊಂದಿ, ಅಲ್ಲಿ ಶಾಂತಿ–ನೆಮ್ಮದಿ ನೆಲೆಸಬೇಕು ಎಂದು ಭಾರತ ಸದಾ ಬಯಸುತ್ತದೆ' ಎಂದಿದ್ದಾರೆ.

ಭ್ರಷ್ಟಾಚಾರವೆಂಬ ಪೀಡೆಯನ್ನು ಕೆಲವರು ವೈಭವೀಕರಿಸುತ್ತಿದ್ದಾರೆ. ಇನ್ನೊಂದೆಡೆ, ದೇಶದ ಪ್ರಗತಿ ಸಹಿಸದವರು ಅರಾಜಕತೆ ಸೃಷ್ಟಿಗೆ ಕಾರಣರಾಗುತ್ತಿದ್ದಾರೆ

ನರೇಂದ್ರ ಮೋದಿ, ಪ್ರಧಾನಿ

ಭಾಷಣದ ಪ್ರಮುಖ ಅಂಶಗಳು

- ವೇತನ ಸಹಿತ ಹೆರಿಗೆ ರಜೆಯನ್ನು 12 ವಾರಗಳಿಂದ 26 ವಾರಗಳಿಗೆ ಹೆಚ್ಚಿಸಲಾಗಿದೆ. ತಾಯಿಯ ಆರೈಕೆಯಲ್ಲಿ ಬೆಳೆಯುವ ಮಗು ಮಾದರಿ ಪ್ರಜೆಯಾಗಬಲ್ಲ ಎಂಬ ಉದಾತ್ತ ಚಿಂತನೆಯೇ ಇಂತಹ ನಿರ್ಧಾರಕ್ಕೆ ಕಾರಣ
- ಉದ್ಯೋಗ, ನಾವೀನ್ಯತೆ, ಉದ್ಯಮಶೀಲತೆ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ 'ಮಹಿಳೆ ಕೇಂದ್ರಿತ ಅಭಿವೃದ್ಧಿ ಮಾದರಿ'ಗೆ ಉತ್ತೇಜನ ನೀಡಲಾಗಿದೆ
- * ವಾಯುಪಡೆ, ನೌಕಾಪಡೆ, ಸೇನೆ ಹಾಗೂ ಬಾಹ್ಯಾಕಾಶ ಕ್ಷೇತ್ರದಲ್ಲಿಯೂ ಮಹಿಳೆಯರು ಛಾಪು ಮೂಡಿಸಿದ್ದಾರೆ
- 'ವಿಕಸಿತ ಭಾರತ 2047' ಎಂಬುದು ಕೇವಲ ಪದಪುಂಜವಲ್ಲ. 140 ಕೋಟಿ ಭಾರತೀಯರ ಕನಸು ಮತ್ತು ಸಂಕಲ್ಪ
- ಭಾರತವನ್ನು ಶಕ್ತಿಶಾಲಿ ರಾಷ್ಟ್ರವನ್ನಾಗಿ ಮಾಡಲು ಬಾಹ್ಯಾಕಾಶ ಕ್ಷೇತ್ರದಲ್ಲಿಯೂ ಪ್ರಗತಿ ಅಗತ್ಯ. ಉಜ್ವಲ ಭವಿಷ್ಯ ಇರುವ ಈ ಕ್ಷೇತ್ರವನ್ನು ಬಲಪಡಿಸಲಾಗುತ್ತಿದೆ
- ಚಂದ್ರಯಾನ ಕಾರ್ಯಕ್ರಮದ ಯಶಸ್ಸು ದೇಶದ ಯುವ ಸಮುದಾಯದಲ್ಲಿ ವೈಜ್ಞಾನಿಕ ಮನೋಧರ್ಮ ಹೆಚ್ಚುವಂತೆ ಮಾಡಿದೆ. ಯುವ ಜನರಲ್ಲಿ ಇಂತಹ ಬದಲಾವಣೆಯನ್ನು ಶೈಕ್ಷಣಿಕ ಸಂಸ್ಥೆಗಳು ಪೋಷಿಸಬೇಕು
- ವಿದೇಶಗಳಲ್ಲಿ ವೈದ್ಯಕೀಯ ಶಿಕ್ಷಣ ಪಡೆಯಲು ವಿದ್ಯಾರ್ಥಿಗಳು ಕೋಟ್ಯಂತರ ರೂಪಾಯಿ ಖರ್ಚು ಮಾಡುತ್ತಾರೆ. ಮುಂದಿನ ಐದು ವರ್ಷಗಳಲ್ಲಿ 75 ಸಾವಿರ ಹೊಸ ವೈದ್ಯಕೀಯ ಸೀಟುಗಳನ್ನು ಸೃಷ್ಟಿಸಲಾಗುವುದು
- 5ಜಿ ತಂತ್ರಜ್ಞಾನಕ್ಕೆ ತ್ವರಿತವಾಗಿ ಚಾಲನೆ ನೀಡಲಾಗಿದ್ದರೂ, 6ಜಿ ತಂತ್ರಜ್ಞಾನ ಕುರಿತು ಸಮರೋಪಾದಿಯಲ್ಲಿ ಕೆಲಸ ಮಾಡಲಾಗುತ್ತಿದೆ
- 'ಭಾರತದಲ್ಲಿ ವಿನ್ಯಾಸಗೊಳಿಸಿ' ಎಂಬ ಮಂತ್ರದಿಂದ ಶುರುವಾದ ನಮ್ಮ ಪಯಣ, ಈಗ 'ವಿಶ್ವಕ್ಕಾಗಿ ವಿನ್ಯಾಸಗೊಳಿಸಿ' ಎಂಬ ಧ್ಯೇಯವಾಕ್ಯದೊಂದಿಗೆ ಸಾಗಬೇಕಿದೆ
- 2036ರ ಒಲಿಂಪಿಕ್ಸ್‌ನ ಆತಿಥ್ಯ ವಹಿಸಬೇಕು ಎಂಬುದು ಭಾರತದ ಕನಸು. ಈ ಕನಸನ್ನು ನನಸು ಮಾಡುವ ನಿಟ್ಟಿನಲ್ಲಿ ಸಿದ್ಧತೆ ನಡೆಸಲಾಗುತ್ತಿದೆ

बिजेपि

बिजेपि

ಬಿಜೆಪಿ, ಆರ್‌ಎಸ್‌ಎಸ್‌ನಿಂದ ಬ್ರಿಟಿಷರ ಒಡೆದು ಆಳುವ ನೀತಿ ಮುಂದುವರಿಕೆ

'ಹರ್ ಘರ್ ನೌಕ್ರಿ' ಇಂದಿನ ತುರ್ತು: ಖರ್ಗೆ

ಪ್ರಜಾವಾಣಿ ವಾರ್ತೆ

ನವದೆಹಲಿ: 'ದೇಶದ ಜನರ ಬದುಕು ದುಸ್ತರವಾಗುತ್ತಿದೆ. 'ಹರ್ ಘರ್ ನೌಕ್ರಿ, ಹರ್ ಘರ್ ನ್ಯಾಯ' ಇಂದಿನ ತುರ್ತು ಆಗಿದೆಯೇ ಹೊರತು, ಜನರಲ್ಲಿ ದ್ವೇಷ ಬಿತ್ತುವ ಉದ್ದೇಶದಿಂದ ರೂಪಿಸಿರುವ 'ದೇಶ ವಿಭಜನೆಯ ಕರಾಳತೆ ಸ್ಮರಿಸುವ ದಿನವಲ್ಲ' ಎಂದು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಗುರುವಾರ ಹೇಳಿದ್ದಾರೆ.

ಪಕ್ಷದ ಕೇಂದ್ರ ಕಚೇರಿಯಲ್ಲಿ ಸ್ವಾತಂತ್ರ್ಯ ದಿನಾಚರಣೆ ಅಂಗವಾಗಿ ರಾಷ್ಟ್ರ ಧ್ವಜಾರೋಹಣ ನಂತರ ನಡೆದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರ್ಕಾರ ಹಾಗೂ ಆರ್‌ಎಸ್‌ಎಸ್ ವಿರುದ್ಧ ವಾಗ್ದಾಳಿ ನಡೆಸಿದರು.

ಪ್ರಧಾನಿ ಮೋದಿ ನೇತೃತ್ವದ ಸರ್ಕಾರಕ್ಕೆ ಅಹಂಕಾರವಿದೆ. ಈ ಕಾರಣಕ್ಕಾಗಿಯೇ ಅದು ವಾಸ್ತವ ಸಂಗತಿಗಳನ್ನು ಅರ್ಥ ಮಾಡಿಕೊಳ್ಳಲು ಸಿದ್ಧವಿಲ್ಲ

ಮಲ್ಲಿಕಾರ್ಜುನ ಖರ್ಗೆ, ಕಾಂಗ್ರೆಸ್ ಅಧ್ಯಕ್ಷ

'ಆಡಳಿತಾರೂಢ ಬಿಜೆಪಿ ಹಾಗೂ ಆರ್‌ಎಸ್‌ಎಸ್ ತಮ್ಮ ಹಿತಾಸಕ್ತಿ ಸಾಧನೆಗಾಗಿ, ಬ್ರಿಟಿಷರ ಒಡೆದು ಆಳುವ ನೀತಿಯನ್ನು ಮುಂದುವರಿಸಿಕೊಂಡು ಹೋಗುತ್ತಿವೆ' ಎಂದು ಖರ್ಗೆ ಟೀಕಿಸಿದರು.

'ಮೋದಿ ನೇತೃತ್ವದ ಸರ್ಕಾರ ಅಸ್ತಿತ್ವಕ್ಕೆ ಬಂದ ಈ 11 ವರ್ಷಗಳ ಅವಧಿಯಲ್ಲಿ ಜನಸಾಮಾನ್ಯರ ಸಂಕಷ್ಟ ಹೆಚ್ಚಾಗಿದೆ. ಅವರ ಜೀವನ ಗುಣಮಟ್ಟ ಸುಧಾರಿಸುವ ಬದಲು ಮತ್ತಷ್ಟು ಹದಗೆಡುತ್ತಿದೆ. ನಿರುದ್ಯೋಗ, ಹಣದುಬ್ಬರ, ಅಸಮಾನತೆ ಹಾಗೂ ಭ್ರಷ್ಟಾಚಾರಗಳೇ ಇದಕ್ಕೆ ಕಾರಣ' ಎಂದು ಅವರು ತಿಳಿಸಿದರು.

ದೇಶದ ಪ್ರಗತಿ ಹಾಗೂ ಜನರ ಶ್ರೇಯೋಭಿವೃದ್ಧಿಗೆ ಕಾಂಗ್ರೆಸ್ ಬದ್ಧವಾಗಿದೆ. ಬಡವರು, ಪರಿಶಿಷ್ಟರು, ಬುಡಕಟ್ಟು ಜನರು, ಮಹಿಳೆಯರು, ರೈತರು ಹಾಗೂ ದುರ್ಬಲ ವರ್ಗದ ಜನರು, ಯುವಕರು ಹಾಗೂ ಮಧ್ಯಮ ವರ್ಗದ ಏಳಿಗೆಗೆ ಪಕ್ಷ ಆದ್ಯತೆ ನೀಡಲಿದೆ ಎಂದೂ ಹೇಳಿದರು.

ಆರ್‌ಎಸ್‌ಎಸ್ ವಿರುದ್ಧ ವಾಗ್ದಾಳಿ

- ಆರ್‌ಎಸ್‌ಎಸ್‌ನವರು ಕಳೆದ 60 ವರ್ಷಗಳಿಂದ ತ್ರಿವರ್ಣ ಧ್ವಜ ಆರೋಹಣ ಮಾಡಲು ಸಿದ್ಧರಿದ್ದಿಲ್ಲ. ಈಗ, 'ಹರ್ ಘರ್ ತಿರಂಗಾ' ಆಂದೋಲನ ಹಮ್ಮಿಕೊಳ್ಳುತ್ತಿದ್ದಾರೆ
- ನಮಗೆ ಸಾಮಾಜಿಕ ನ್ಯಾಯ, ಆರ್ಥಿಕ ಮತ್ತು ರಾಜಕೀಯ ನ್ಯಾಯ ಬೇಕು. ದೇಶವು ಆರ್ಥಿಕ ಅಸಮಾನತೆ ಹಾಗೂ ನಿರುದ್ಯೋಗದಿಂದ ಮುಕ್ತಿ ಬಯಸುತ್ತಿದೆ
- ಸ್ವಾತಂತ್ರ್ಯಕ್ಕಾಗಿ ಹೋರಾಡಿದವರ ಕೊಡುಗೆಗಳನ್ನು ಸ್ಮರಿಸುವುದನ್ನು ಬಿಟ್ಟು, ಈಗ ಕೇಂದ್ರದಲ್ಲಿ ಆಡಳಿತ ನಡೆಸುವವರು ವಿಭಜಕ ಚಿಂತನೆಯನ್ನು ಉತ್ತೇಜಿಸುತ್ತಿದ್ದಾರೆ
- ಸಂಘ ಪರಿವಾರದವರ ದ್ವೇಷ ತುಂಬಿದ ರಾಜಕಾರಣ ದೇಶವನ್ನು ಇಬ್ಭಾಗ ಮಾಡಿರುವುದು ಐತಿಹಾಸಿಕ ಸತ್ಯ.

ರಾಹುಲ್‌ಗೆ 5ನೇ ಸಾಲಿನಲ್ಲಿ ಆಸನ: ಅಸಮಾಧಾನ

ನವದೆಹಲಿ (ಪಿಟಿಐ): ಕೆಂಪು ಕೋಟೆಯಲ್ಲಿ ನಡೆದ ಸ್ವಾತಂತ್ರ್ಯ ದಿನಾಚರಣೆ ಸಮಾರಂಭದಲ್ಲಿ ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರನ್ನು ಐದನೇ ಸಾಲಿನಲ್ಲಿ ಕೂರಿಸುವ ಮೂಲಕ ಅವರಿಗೆ ಅಗೌರವ ತೋರಲಾಗಿದೆ ಎಂದು ಕಾಂಗ್ರೆಸ್ ಗುರುವಾರ ಅಸಮಾಧಾನ ವ್ಯಕ್ತಪಡಿಸಿದೆ.

'ಇದು ಪ್ರಧಾನಿ ಮೋದಿ ಅವರ ಸಣ್ಣತನ ಮತ್ತು ಪ್ರಜಾಪ್ರಭುತ್ವದ ಸಂಪ್ರದಾಯಗಳಿಗೆ ತೋರಿದ ಅಗೌರವವಾಗಿದೆ' ಎಂದು ಕಾಂಗ್ರೆಸ್ ದೂರಿದೆ.

'ಅತಿಥಿಗಳ ಹುದ್ದೆಗನುಸಾರವಾಗಿ ಆಸನ ವ್ಯವಸ್ಥೆ ಮಾಡಲಾಗಿದೆ' ಎಂದು ಸಮಾರಂಭ ಆಯೋಜಕರ ಮೂಲಗಳು ತಿಳಿಸಿದ ಬಳಿಕ ವಿರೋಧ ಪಕ್ಷದಿಂದ ವಾಗ್ದಾಳಿ ವ್ಯಕ್ತವಾಗಿದೆ.

ಪ್ರಸಕ್ತ ವರ್ಷ ಪ್ಯಾರಿಸ್ ಒಲಿಂಪಿಕ್ಸ್ ಪದಕ ವಿಜೇತರನ್ನು ಸ್ವಾತಂತ್ರ್ಯ ದಿನಾಚರಣೆಯಲ್ಲಿ ವಿಶೇಷ ಅತಿಥಿಗಳಾಗಿ ಗೌರವಿಸಲು ನಿರ್ಧರಿಸಿದ್ದರಿಂದ, ಈ ರೀತಿಯ ಆಸನ ವ್ಯವಸ್ಥೆ ಕಲ್ಪಿಸಲಾಗಿದೆ ಎಂದು ಮೂಲಗಳು ಹೇಳಿವೆ.

ಇದಕ್ಕೆ ಪ್ರತಿಕ್ರಿಯಿಸಿರುವ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ (ಸಂಘಟನೆ) ಕೆ.ಸಿ.ವೇಣುಗೋಪಾಲ್, 'ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರನ್ನು ಕೊನೆಯ ಸಾಲಿನಲ್ಲಿ ಕೂರಿಸಿದ್ದು ಪ್ರಧಾನಿ ಮೋದಿ ಅವರ ದುರಹಂಕಾರವನ್ನು ತೋರಿಸುತ್ತದೆ. ಜೂನ್ 4ರಂದು ದೇಶದ ಜನತೆ ನೀಡಿದ್ದ ತೀರ್ಪಿನಿಂದ ಅವರು ಇನ್ನೂ ಪಾಠ ಕಲಿತಂತಿಲ್ಲ. ಈಗ ಎಚ್ಚೆತ್ತುಕೊಳ್ಳುವ ಸಮಯ ಬಂದಿದೆ' ಎಂದು ಹೇಳಿದ್ದಾರೆ.

'ಒಲಿಂಪಿಯನ್‌ಗಳು ಎಲ್ಲ ಗೌರವಕ್ಕೂ ಅರ್ಹರು. ಆದರೆ ಅಮಿತ್ ಶಾ ಮತ್ತು ನಿರ್ಮಲಾ ಸೀತಾರಾಮನ್ ಅವರಂತಹ ಸಂಪುಟ ಸಚಿವರು, ಅವರಿಗಿಂತ ಮುಂದಿನ ಸಾಲಿನಲ್ಲಿ ಹೇಗೆ ಸ್ಥಾನ ಪಡೆದರು' ಎಂದು ಅವರು ಪ್ರಶ್ನಿಸಿದ್ದಾರೆ.

ಶಿಷ್ಟಾಚಾರದ ಪ್ರಕಾರ ಲೋಕಸಭೆ ಮತ್ತು ರಾಜ್ಯಸಭೆಯ ವಿರೋಧ ಪಕ್ಷದ ನಾಯಕರಿಗೆ ಮೊದಲ ಸಾಲಿನಲ್ಲಿ ಆಸನದ ವ್ಯವಸ್ಥೆ ಮಾಡಬೇಕು. ಆದರೆ ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಮತ್ತು ರಾಜ್ಯಸಭೆ ವಿರೋಧ ಪಕ್ಷದ ನಾಯಕರೂ ಆದ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರನ್ನು ಐದನೇ ಸಾಲಿನಲ್ಲಿ ಕೂರಿಸಲಾಗಿತ್ತು ಎಂದು ಅವರು ಹೇಳಿದ್ದಾರೆ.



ಪ್ಯಾರಿಸ್ ಒಲಿಂಪಿಕ್ಸ್ ಪದಕ ವಿಜೇತರ ಹಿಂದಿನ ಸಾಲಿನಲ್ಲಿ ರಾಹುಲ್ ಗಾಂಧಿ ಕುಳಿತಿದ್ದರು– ಪಿಟಿಐ ಚಿತ್ರ

ಜಾತ್ಯತೀತ ಸಂಹಿತೆ: ಮೋದಿ ಮಾತಿಗೆ ಕಟುಟೀಕೆ

ಒಂದನೇ ಪುಟದಿಂದ...

ಏಕರೂಪ ನಾಗರಿಕ ಸಂಹಿತೆ ಕುರಿತ ವಾದಗಳನ್ನು 'ಕೋಮುವಾದಿ ವಿರುದ್ಧ ಜಾತ್ಯತೀತ' ಎಂಬ ಮತ್ತೊಂದು ಹಂತಕ್ಕೆ ತಲುಪಿಸಿರುವ ಮೋದಿ, 'ಈ ವಿಚಾರ ಕುರಿತು ವ್ಯಾಪಕ ಚರ್ಚೆ ನಡೆಸಬೇಕು' ಎಂದಿದ್ದಾರೆ.

'ಪ್ರಸಕ್ತ ನಾಗರಿಕ ಸಂಹಿತೆ ಕೋಮುವಾದಿ ಸ್ವರೂಪದ್ದಾಗಿದೆ ಎಂಬುದು ಸಮಾಜದ ದೊಡ್ಡ ವರ್ಗವೊಂದರ ನಂಬಿಕೆ. ಈ ವರ್ಗದ ಅನಿಸಿಕೆಯಲ್ಲಿ ಸತ್ಯವೂ ಇದೆ. ಈ ಸಂಹಿತೆ ದೇಶವನ್ನು ಧರ್ಮದ ಆಧಾರದಲ್ಲಿ ವಿಭಜಿಸುತ್ತದೆ ಹಾಗೂ ಅಸಮಾನತೆಯನ್ನು ಪ್ರೋತ್ಸಾಯಿಸುತ್ತದೆ' ಎಂದು ಹೇಳಿದ್ದಾರೆ.

'ಏಕರೂಪ ನಾಗರಿಕ ಸಂಹಿತೆ ಅನುಷ್ಠಾನ ಸಂವಿಧಾನದ ಆಶಯವೂ ಆಗಿದ್ದು, ಸುಪ್ರೀಂ ಕೋರ್ಟ್ ಕೂಡ ಇದರ ಅಗತ್ಯವನ್ನು ಹಲವು ಬಾರಿ ಒತ್ತಿ ಹೇಳಿದೆ. ಇಂತಹ ಸಂಹಿತೆಯನ್ನು ಜಾರಿಗೊಳಿಸುವ ಮೂಲಕ ಸಂವಿಧಾನ ನಿರ್ಮಾತೃಗಳ ಕನಸನ್ನು ನನಸು ಮಾಡಬೇಕಿದೆ' ಎಂದಿದ್ದಾರೆ.

ಜಾತ್ಯತೀತ ನಾಗರಿಕ ಸಂಹಿತೆ ಜಾರಿಯಿಂದ ಧರ್ಮದ ಆಧಾರದಲ್ಲಿ ನಡೆಯುವ ತಾರತಮ್ಯದಿಂದ ಮುಕ್ತರಾಗಬಹುದು ಎಂದರು.

ಪದೇಪದೇ ನಡೆಯುವ ಚುನಾವಣೆಗಳಿಂದ ಅಭಿವೃದ್ಧಿ ಕಾರ್ಯಕ್ಕೆ ಅಡ್ಡಿಯಾಗುತ್ತದೆ. 'ಒಂದು ದೇಶ–ಒಂದು ಚುನಾವಣೆ' ಕುರಿತು ಒಮ್ಮತ ಮೂಡಿಸಲು ಸರ್ಕಾರ ಪ್ರಯತ್ನಿಸಲಿದೆ ಎಂದ ಅವರು, ರಾಜಕೀಯ ಹಿನ್ನೆಲೆ ಇಲ್ಲದ ಕುಟುಂಬದವರು ಹೆಚ್ಚಿನ ಸಂಖ್ಯೆಯಲ್ಲಿ ರಾಜಕೀಯ ಪ್ರವೇಶಿಸಬೇಕು ಎಂದರು.

'ಅಂಬೇಡ್ಕರ್‌ಗೆ ಅವಮಾನ'

'ಜಾತ್ಯತೀತ ನಾಗರಿಕ ಸಂಹಿತೆ' ಜಾರಿಯ ಅಗತ್ಯವಿದೆ ಎಂದು ಪ್ರತಿಪಾದಿಸಿರುವ ಪ್ರಧಾನಿ ನರೇಂದ್ರ ಮೋದಿ ವಿರುದ್ಧ 'ಇಂಡಿಯಾ' ಅಂಗಪಕ್ಷಗಳು ಹಾಗೂ ಇತರ ವಿಪಕ್ಷಗಳು ಗುರುವಾರ ವಾಗ್ದಾಳಿ ನಡೆಸಿವೆ.

'ಇಂತಹ ಹೇಳಿಕೆ ಮೂಲಕ ಪ್ರಧಾನಿ ಮೋದಿ ಅವರು ಡಾ.ಬಿ.ಆರ್. ಅಂಬೇಡ್ಕರ್ ಅವರಿಗೆ ಅವಮಾನ ಮಾಡಿದ್ದಾರೆ. ಮುಂಬರುವ ವಿಧಾನಸಭೆ ಚುನಾವಣೆಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಸಮುದಾಯಗಳ ನಡುವಿನ ಸಾಮರಸ್ಯ ಕೆಡಿಸಲು ಈ ವಿಭಜಕ ತಂತ್ರ ಬಳಸುತ್ತಿದ್ದಾರೆ' ಎಂದು 'ಇಂಡಿಯಾ'ದ ಪಕ್ಷಗಳು ಟೀಕಿಸಿವೆ.

'ಮೋದಿ ನೇತೃತ್ವದ ಸರ್ಕಾರ ಜನರು ಎದುರಿಸುತ್ತಿರುವ ಸಮಸ್ಯೆಗಳನ್ನು ನಿರ್ಲಕ್ಷಿಸುತ್ತಿದೆ. ಹಿಂಡೆನ್‌ಬರ್ಗ್ ವರದಿಯಲ್ಲಿ ಅದಾನಿ ಸಮೂಹ ಕುರಿತು ಎತ್ತಿರುವ ಪ್ರಶ್ನೆಗಳು ಸೇರಿದಂತೆ ಇತರ ವಿಚಾರಗಳನ್ನು ಗಮನಿಸದ ಸರ್ಕಾರ, ತನ್ನ ವಿಭಜಕ ಕಾರ್ಯಸೂಚಿಯನ್ನು ಬಳಸುತ್ತಿದೆ' ಎಂದು ಕಾಂಗ್ರೆಸ್, ಸಿಪಿಎಂ, ಸಿಪಿಐ ಹಾಗೂ ಆರ್‌ಜೆಡಿ ಟೀಕಿಸಿವೆ.

ಮಣಿಪುರಕ್ಕೆ ಭೇಟಿ ನೀಡಿ: ಪ್ರಧಾನಿಗೆ ರಾಹುಲ್ ಮನವಿ

ನವದೆಹಲಿ (ಪಿಟಿಐ): 'ಹಿಂಸಾಪೀಡಿತ ಮಣಿಪುರಕ್ಕೆ ಭೇಟಿ ನೀಡುವಂತೆ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಮತ್ತೊಮ್ಮೆ ಮನವಿ ಮಾಡುತ್ತೇನೆ' ಎಂದು ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು ಗುರುವಾರ ಹೇಳಿದ್ದಾರೆ.

ರಾಜ್ಯ ಹಾಗೂ ಕೇಂದ್ರ ಸರ್ಕಾರವು ಘರ್ಷಣೆಯನ್ನು ಆದಷ್ಟು ಬೇಗ ಶಾಂತಿಯುತವಾಗಿ ಬಗೆಹರಿಸಲು ಮುಂದಾಗಬೇಕು ಎಂದು ಈ ವೇಳೆ ಒತ್ತಾಯಿಸಿದ್ದಾರೆ.

'ದೆಹಲಿಯಲ್ಲಿ ನೆಲೆಸಿರುವ ಮಣಿಪುರದ ಜನರನ್ನು ಭೇಟಿಯಾಗಿದ್ದೆ; ಜನಾಂಗೀಯ ಸಂಘರ್ಷದಿಂದ ಎದುರಿಸಿದ ಹೃದಯವಿದ್ರಾವಕ ಘಟನೆಗಳನ್ನು ಹಂಚಿಕೊಂಡರು' ಎಂದರು.

ಮಣಿಪುರದ ಜನರ ಕೈಹಿಡಿದಿರುವ ಚಿತ್ರವೊಂದನ್ನು ರಾಹುಲ್ ಗಾಂಧಿ ತಮ್ಮ 'ಎಕ್ಸ್' ಖಾತೆಯಲ್ಲಿ ಹಂಚಿಕೊಂಡಿದ್ದಾರೆ.

ಸ್ವಾತಂತ್ರ್ಯ ದಿನಾಚರಣೆ ವೇಳೆ ರಾಜ್ಯಗಳಲ್ಲಿ ತ್ರಿವರ್ಣ ಧ್ವಜಾರೋಹಣ

ಸಿ.ಎಂ.ಗೆ ಗೌರವ ದೊರೆತು 50 ವರ್ಷ

ಪ್ರಜಾವಾಣಿ ವಾರ್ತೆ

ಚೆನ್ನೈ: ಸ್ವಾತಂತ್ರ್ಯ ದಿನಾಚರಣೆ ದಿನದಂದು ರಾಜ್ಯಗಳ ರಾಜಧಾನಿಗಳಲ್ಲಿ ರಾಷ್ಟ್ರಧ್ವಜಾರೋಹಣ ನೆರವೇರಿಸುವ ಗೌರವ ಮುಖ್ಯಮಂತ್ರಿಗಳಿಗೆ ದೊರೆತು ಬರೋಬ್ಬರಿ 50 ವರ್ಷಗಳಾಗಿವೆ.



ಎಂ. ಕರುಣಾನಿಧಿ

ದೇಶಕ್ಕೆ ಸ್ವಾತಂತ್ರ್ಯ ದೊರೆತ 27 ವರ್ಷಗಳ ಬಳಿಕ, ಅಂದರೆ 1974ರಲ್ಲಿ ಮುಖ್ಯಮಂತ್ರಿಗಳಿಗೆ ತಮ್ಮ ರಾಜ್ಯಗಳಲ್ಲಿ ತ್ರಿವರ್ಣ ಧ್ವಜಾರೋಹಣ ನೆರವೇರಿಸುವ ಅವಕಾಶ ಸಿಕ್ಕಿತು. ಅದಕ್ಕೂ ಮೊದಲು ಸ್ವಾತಂತ್ರ್ಯ ದಿನಾಚರಣೆ ಮತ್ತು ಗಣರಾಜ್ಯೋತ್ಸವ ದಿನಗಳಂದು ಆಯಾ ರಾಜ್ಯಗಳ ರಾಜ್ಯಪಾಲರಿಗೆ ಈ ಅವಕಾಶವಿತ್ತು.

ಮುಖ್ಯಮಂತ್ರಿಗಳಿಗೆ ಈ ಅವಕಾಶ ದೊರೆಯಲು ತಮಿಳುನಾಡಿನ ಆಗಿನ ಮುಖ್ಯಮಂತ್ರಿ ಎಂ. ಕರುಣಾನಿಧಿ ಕಾರಣ. ಸ್ವಾತಂತ್ರ್ಯೋತ್ಸವ ಮತ್ತು ಗಣರಾಜ್ಯೋತ್ಸವ ದಿನಗಳಂದು ತ್ರಿವರ್ಣ ಧ್ವಜಾರೋಹಣದ ಅವಕಾಶ ರಾಜ್ಯಪಾಲರಿಗೆ ಮಾತ್ರ ಇರುವುದು ಕರುಣಾನಿಧಿ ಅವರನ್ನು ಕೆರಳಿಸಿತ್ತು.

ಇಂದಿರಾಗೆ ಪತ್ರ ಬರೆದಿದ್ದ ಕರುಣಾನಿಧಿ: ಈ ಕುರಿತು ಆಗಿನ ಪ್ರಧಾನಿ ಇಂದಿರಾಗಾಂಧಿ ಅವರಿಗೆ 1974ರ ಫೆಬ್ರುವರಿಯಲ್ಲಿ ಪತ್ರ ಬರೆದಿದ್ದ ಕರುಣಾನಿಧಿ ಅವರು, 'ರಾಜ್ಯಗಳ ಚುನಾಯಿತ ಮುಖ್ಯಮಂತ್ರಿಗೆ ಅನ್ಯಾಯ ಮಾಡಲಾಗುತ್ತಿದೆ' ಎಂದು ಉಲ್ಲೇಖಿಸಿದ್ದರು. ಇದರ ಬೆನ್ನಲ್ಲೇ ಜುಲೈನಲ್ಲಿ ಈ ಕುರಿತು ಆದೇಶ ಹೊರಡಿಸಿದ ಕೇಂದ್ರ ಸರ್ಕಾರ, 'ಸ್ವಾತಂತ್ರ್ಯ ದಿನಾಚರಣೆ ದಿನದಂದು ರಾಜ್ಯಗಳಲ್ಲಿ ಮುಖ್ಯಮಂತ್ರಿಯವರು ರಾಷ್ಟ್ರಧ್ವಜಾರೋಹಣ ಮಾಡಬೇಕು' ಎಂದು ಹೇಳಿತು. ಅದಾಗ್ಯೂ ಗಣರಾಜ್ಯೋತ್ಸವ ದಿನದಂದು ಈ ಗೌರವ ರಾಜ್ಯಪಾಲರ ಬಳಿಯೇ ಉಳಿಯಿತು.

ಹೀಗಾಗಿ 50 ವರ್ಷಗಳ ಹಿಂದೆ ಮುಖ್ಯಮಂತ್ರಿಗಳು ಮೊದಲ ಬಾರಿಗೆ ತಮ್ಮ ರಾಜ್ಯಗಳ ರಾಜಧಾನಿಗಳಲ್ಲಿ ರಾಷ್ಟ್ರಧ್ವಜವನ್ನು ಹಾರಿಸಿದರು.

'ಡಿಎಂಕೆ ಇಯರ್ಸ್' ಮತ್ತು ದ್ರಾವಿಡ ದಿಗ್ಗಜರಾದ ಸಿ.ಎನ್.ಅಣ್ಣಾದೊರೈ, ಎಂ.ಜಿ ರಾಮಚಂದ್ರನ್ ಅವರ ಜೀವನಚರಿತ್ರೆಗಳ ಲೇಖಕರಾದ ಆರ್. ಕಣ್ಣನ್ ಅವರು, '1974ರಿಂದ ಈ ಗೌರವ ದೊರೆತ ಕಾರಣಕ್ಕೆ ದೇಶದ ಮುಖ್ಯಮಂತ್ರಿಗಳು ಕರುಣಾನಿಧಿ ಅವರಿಗೆ ಕೃತಜ್ಞರಾಗಿರಬೇಕು' ಎಂದು 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದರು.

ಆತ್ಮಗೌರವದ ವಿಷಯ: ಇದು ಆತ್ಮಗೌರವದ ವಿಷಯವಾಗಿದೆ ಎಂದು ಭಾವಿಸಿದ್ದ ಕರುಣಾನಿಧಿ ಅವರು ಈ ಕುರಿತು ಪ್ರಧಾನಿಗೆ ಪತ್ರ ಬರೆದು ಒತ್ತಾಯಿಸಿದ್ದರು. ಕರುಣಾನಿಧಿ ಅವರ ಮನವಿಗೆ ಕೇಂದ್ರ ಸರ್ಕಾರ ಸಮ್ಮತಿಸಿತು. 1974ರ ಆಗಸ್ಟ್ 15ರಂದು ಅವರು ರಾಷ್ಟ್ರಧ್ವಜಾರೋಹಣ ಮಾಡಿದರು. ಆ ಬಳಿಕ ಅವರಿಗೆ 14 ಬಾರಿ ತ್ರಿವರ್ಣಧ್ವಜ ಹಾರಿಸುವ ಗೌರವ ದೊರೆತಿತ್ತು ಎಂದು ಅವರು ತಿಳಿಸಿದರು.

ಮುಖ್ಯಾಂಶಗಳು

- 1974ರಿಂದ ಮುಖ್ಯಮಂತ್ರಿಗಳಿಗೆ ದೊರೆತ ಗೌರವ
- ಧ್ವಜಾರೋಹಣ: ರಾಜ್ಯಪಾಲರಿಗೆ ಮಾತ್ರ ಅವಕಾಶವಿತ್ತು
- ಅನ್ಯಾಯ ವಿರೋಧಿಸಿ ಕೇಂದ್ರಕ್ಕೆ ಪತ್ರ ಬರೆದಿದ್ದ ಆಗಿನ ಸಿ.ಎಂ. ಕರುಣಾನಿಧಿ

ಟೊಮೆಟೊ ಧಾರಣೆ ಇಳಿಕೆ

ಬಾಂಗ್ಲಾಕ್ಕೆ ಪೂರೈಕೆ ಬಂದ್ • ಕೋಲಾರ ರೈತರಿಗೆ ಸಂಕಷ್ಟ

ಪ್ರಜಾವಾಣಿ ವಾರ್ತೆ



ಬೆಂಗಳೂರು: ಬಾಂಗ್ಲಾದೇಶದಲ್ಲಿ ತಲೆದೋರಿರುವ ರಾಜಕೀಯ ಬಿಕ್ಕಟ್ಟು ಕೋಲಾರ ಜಿಲ್ಲೆಯ ಟೊಮೆಟೊ ಬೆಳೆಗಾರರ ಮೇಲೂ ಪರಿಣಾಮ ಬೀರಿದೆ.

ಬಾಂಗ್ಲಾ ಬಿಕ್ಕಟ್ಟಿಗೂ ಮೊದಲು ಕೋಲಾರದ ಎಪಿಎಂಸಿಯಲ್ಲಿ 15 ಕೆ.ಜಿ ತೂಕದ ಒಂದು ಬಾಕ್ಸ್ ಟೊಮೆಟೊ ದರವು ₹1,100ರಿಂದ ₹1,200 ಇತ್ತು. ಸದ್ಯ ₹350ರಿಂದ ₹480ಕ್ಕೆ ಇಳಿದಿದೆ. ಕಳೆದ 15 ದಿನಗಳ ಹಿಂದೆ ಪ್ರತಿ ಕೆ.ಜಿಗೆ ₹40 ಇದ್ದ ಚಿಲ್ಲರೆ ಟೊಮೆಟೊ ಧಾರಣೆಯು ಸದ್ಯ ₹12ಕ್ಕೆ ಇಳಿಕೆಯಾಗಿದ್ದು, ಬೆಳೆಗಾರರು ಕಂಗಾಲಾಗಿದ್ದಾರೆ.

ಕೋಲಾರ ಜಿಲ್ಲೆಯಲ್ಲಿ ಬೆಳೆಯುವ ಟೊಮೆಟೊ ನೇರವಾಗಿ ಬಾಂಗ್ಲಾಕ್ಕೆ ರಫ್ತು ಆಗುವುದಿಲ್ಲ. ಜಿಲ್ಲೆಯಿಂದ ಪಶ್ಚಿಮ ಬಂಗಾಳದ ಮಾರುಕಟ್ಟೆಗೆ ಹೆಚ್ಚಿನ ಪ್ರಮಾಣದಲ್ಲಿ ಪೂರೈಕೆಯಾಗುತ್ತದೆ. ಅಲ್ಲಿಂದ ಬಾಂಗ್ಲಾದ ವಿವಿಧ ಮಾರುಕಟ್ಟೆಗಳಿಗೆ ರವಾನೆಯಾಗುತ್ತದೆ. ಸದ್ಯ ಅಲ್ಲಿ ಅಶಾಂತಿ ತಲೆದೋರಿರುವುದರಿಂದ ಮಾರಾಟದಲ್ಲಿ ಅರ್ಧದಷ್ಟು ಕುಸಿತವಾಗಿದೆ.

‘ಕಳೆದ ಹದಿನೈದು ದಿನಗಳಲ್ಲಿ ಪಶ್ಚಿಮ ಬಂಗಾಳಕ್ಕೆ ಪೂರೈಕೆಯಾಗುತ್ತಿದ್ದ ಟೊಮೆಟೊದಲ್ಲಿ ಶೇ 50ರಷ್ಟು ಕಡಿಮೆಯಾಗಿದೆ’ ಎಂದು ಕೋಲಾರದ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಕಾರ್ಯದರ್ಶಿ ಕಿರಣ್ ನಾರಾಯಣಸ್ವಾಮಿ ತಿಳಿಸಿದ್ದಾರೆ.

‘ಈ ಮೊದಲು ಪ್ರತಿದಿನ ಉತ್ತಮ ಗುಣಮಟ್ಟದ 40ರಿಂದ 50 ಲಾರಿ ಲೋಡ್‌ನಷ್ಟು ಟೊಮೆಟೊವನ್ನು ಪಶ್ಚಿಮ ಬಂಗಾಳಕ್ಕೆ ರವಾನಿಸಲಾಗುತ್ತಿತ್ತು. ಸದ್ಯ 20 ಲೋಡ್‌ನಷ್ಟು ಟೊಮೆಟೊ ಪೂರೈಕೆಯಾಗುತ್ತಿದೆ’ ಎಂದು ಅವರು ಹೇಳುತ್ತಾರೆ.

ಕೋಲಾರ ಜಿಲ್ಲೆಯಲ್ಲಿ 4 ಸಾವಿರ ಹೆಕ್ಟೇರ್‌ಗೂ ಹೆಚ್ಚು ಪ್ರದೇಶದಲ್ಲಿ ಟೊಮೆಟೊ ಬೆಳೆಯಲಾಗುತ್ತಿದೆ. ಇಲ್ಲಿಂದ ತಮಿಳುನಾಡು, ಕೇರಳ ಮತ್ತು ಆಂಧ್ರಪ್ರದೇಶಕ್ಕೆ ಪೂರೈಕೆಯಾಗುತ್ತದೆ.

‘ಭಾರತದ ಗಡಿಗಳ ಮೂಲಕ ಟೊಮೆಟೊ ತುಂಬಿದ ಲಾರಿಗಳನ್ನು ಬಾಂಗ್ಲಾಕ್ಕೆ ಪ್ರವೇಶಿಸಲು ನಿರ್ಬಂಧಿಸಲಾಗಿದೆ. ಅಲ್ಲದೆ, ಪಶ್ಚಿಮ ಬಂಗಾಳದ ಲಾರಿ ಮಾಲೀಕರು ಬಾಂಗ್ಲಾಕ್ಕೆ ಹೋಗಲು ಭಯಪಡುತ್ತಿದ್ದಾರೆ. ಹಾಗಾಗಿ, ಸ್ಥಳೀಯ ಮಾರುಕಟ್ಟೆಗಳಿಗಷ್ಟೇ ಪೂರೈಸುತ್ತಿದ್ದೇವೆ’ ಎಂದು ವರ್ತಕ ಶರ್ತಾಜ್ ಖಾನ್ ಹೇಳುತ್ತಾರೆ.

ಸಿದ್ಧ ಉಡುಪು ಜವಳಿ ರಫ್ತು ಶೇ 4ರಷ್ಟು ಹೆಚ್ಚಳ

ಮುಂಬೈ (ಪಿಟಿಐ): ಜುಲೈ ತಿಂಗಳಲ್ಲಿ ದೇಶದ ಜವಳಿ ಮತ್ತು ಸಿದ್ಧ ಉಡುಪುಗಳ ರಫ್ತು ಪ್ರಮಾಣವು ಶೇ 4.73ರಷ್ಟು ಏರಿಕೆಯಾಗಿದೆ ಎಂದು ಭಾರತೀಯ ಜವಳಿ ಉದ್ಯಮ ಒಕ್ಕೂಟ (ಸಿಐಟಿಐ) ಗುರುವಾರ ತಿಳಿಸಿದೆ.

2023ರ ಜುಲೈನಲ್ಲಿ ₹23.55 ಕೋಟಿ ಮೌಲ್ಯದ ಜವಳಿ ಮತ್ತು ಸಿದ್ಧ ಉಡುಪು ರಫ್ತು ಮಾಡಲಾಗಿತ್ತು. ಈಗ ₹24.65 ಕೋಟಿಯಷ್ಟು ರಫ್ತಾಗಿದೆ. ಸಿದ್ಧ ಉಡುಪು ರಫ್ತು ₹10.72 ಕೋಟಿಯಷ್ಟಾಗಿದ್ದು, ಶೇ 11ರಷ್ಟು ಏರಿಕೆಯಾಗಿದೆ. ಜವಳಿ ರಫ್ತು ಮೌಲ್ಯವು ₹13.93 ಕೋಟಿಯಾಗಿದೆ ಎಂದು ತಿಳಿಸಿದೆ.

‘ಅಮೆರಿಕ, ಐರೋಪ್ಯ ಒಕ್ಕೂಟ, ಬ್ರಿಟನ್‌ನಲ್ಲಿ ಸಿದ್ಧ ಉಡುಪುಗಳಿಗೆ ಬೇಡಿಕೆ ಹೆಚ್ಚಿದ್ದರಿಂದ ರಫ್ತು ಪ್ರಮಾಣದಲ್ಲಿ ಏರಿಕೆಯಾಗಿದೆ’ ಎಂದು ಸಿಐಟಿಐ ಅಧ್ಯಕ್ಷ ರಾಕೇಶ್ ಮೆಹ್ರಾ ಹೇಳಿದ್ದಾರೆ.

ಮಹಿಳಾ ಪೈಲಟ್‌ಗಳ ಸಂಖ್ಯೆ ಹೆಚ್ಚಳಕ್ಕೆ ಇಂಡಿಗೊ ನಿರ್ಧಾರ

ನವದೆಹಲಿ (ಪಿಟಿಐ): ಪ್ರಸ್ತುತ ಇಂಡಿಗೊ ವಿಮಾನಯಾನ ಕಂಪನಿಯಲ್ಲಿ 800ಕ್ಕೂ ಹೆಚ್ಚು ಮಹಿಳಾ ಪೈಲಟ್‌ಗಳಿದ್ದು, ಮುಂದಿನ ವರ್ಷದ ಆಗಸ್ಟ್‌ನೊಳಗೆ ಈ ಸಂಖ್ಯೆಯನ್ನು ಒಂದು ಸಾವಿರಕ್ಕೆ ಏರಿಸಲು ಕಂಪನಿಯು ನಿರ್ಧರಿಸಿದೆ.

ಕೆಲಸದಲ್ಲಿ ವೈವಿಧ್ಯತೆಯ ಜೊತೆಗೆ ವಿಮಾನಯಾನ ಕ್ಷೇತ್ರದಲ್ಲಿ ಮಹಿಳೆಯರ ಪಾಲ್ಗೊಳ್ಳುವಿಕೆಯನ್ನು ಹೆಚ್ಚಿಸುವ ನಿಟ್ಟಿನಲ್ಲಿ ಈ ತೀರ್ಮಾನ ಕೈಗೊಳ್ಳಲಾಗಿದೆ. ಇದರಿಂದ ವಿಮಾನಗಳ ಹಾರಾಟ ಮತ್ತು ಸಂಪರ್ಕ ಜಾಲವನ್ನು ಮತ್ತಷ್ಟು ಬಲಪಡಿಸಲು ನೆರವಾಗಲಿದೆ ಎಂದು ಇಂಡಿಗೊ ತಿಳಿಸಿದೆ.

‘ಎಂಜಿನಿಯರಿಂಗ್ ಹಾಗೂ ವಿಮಾನ ಸಿಬ್ಬಂದಿ ಸೇರಿ ಎಲ್ಲಾ ವಿಭಾಗದಲ್ಲಿನ ಕೆಲಸದ ವಿಸ್ತರಣೆಗೆ ಕ್ರಮವಹಿಸಲಾಗಿದೆ’ ಎಂದು ಕಂಪನಿಯ ಮಾನವ ಸಂಪನ್ಮೂಲ ವಿಭಾಗದ ಮುಖ್ಯಸ್ಥ ಸುಖಜಿತ್ ಎಸ್. ಪಸ್ರಿಚಾ ತಿಳಿಸಿದ್ದಾರೆ.

ಜಾಗತಿಕ ಮಟ್ಟದಲ್ಲಿ ಮಹಿಳಾ ಪೈಲಟ್‌ಗಳ ಸರಾಸರಿ ಪ್ರಮಾಣ ಶೇ 7ರಿಂದ ಶೇ 9ರಷ್ಟಿದೆ. ಇದಕ್ಕೆ ಹೋಲಿಸಿದರೆ ಇಂಡಿಗೊದಲ್ಲಿ ಶೇ 14ರಷ್ಟು ಮಹಿಳಾ ಪೈಲಟ್‌ಗಳಿದ್ದಾರೆ ಎಂದು ಅವರು ತಿಳಿಸಿದ್ದಾರೆ.

ಪ್ರಸ್ತುತ ಪ್ರತಿದಿನ ಇಂಡಿಗೊ ಕಂಪನಿಯ 2 ಸಾವಿರಕ್ಕೂ ಹೆಚ್ಚು ವಿಮಾನಗಳು ಹಾರಾಟ ನಡೆಸುತ್ತಿದ್ದು, 5 ಸಾವಿರಕ್ಕೂ ಹೆಚ್ಚು ಪೈಲಟ್‌ಗಳಿದ್ದಾರೆ. 77ನೇ ಸ್ವಾತಂತ್ರ್ಯದ ದಿನಾಚರಣೆ ಅಂಗವಾಗಿ ಬುಧವಾರ ಹೊಸದಾಗಿ 77 ಮಹಿಳಾ ಪೈಲಟ್‌ಗಳು ಕಂಪನಿಗೆ ಸೇರ್ಪಡೆಯಾಗಿದ್ದಾರೆ.

ಡೆವಲಪರ್‌ಗಳ ವೈಫಲ್ಯ: 2,000 ವಸತಿ ಯೋಜನೆ ಸ್ಥಗಿತ

ಮನೆ ಹಸ್ತಾಂತರ ವಿಳಂಬ

ನವದೆಹಲಿ (ಪಿಟಿಐ): ಬೆಂಗಳೂರು ಸೇರಿ ದೇಶದ 42 ನಗರಗಳಲ್ಲಿ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರದಡಿ (ರೇರಾ) ನೋಂದಣಿಯಾಗಿರುವ ಸುಮಾರು 2 ಸಾವಿರ ವಸತಿ ನಿರ್ಮಾಣ ಯೋಜನೆಗಳು ಸ್ಥಗಿತಗೊಂಡಿವೆ. ಇದರಿಂದ 5.08 ಲಕ್ಷ ಮನೆಗಳ ನಿರ್ಮಾಣ ಪೂರ್ಣಗೊಂಡಿಲ್ಲ ಎಂದು ದತ್ತಾಂಶ ವಿಶ್ಲೇಷಣಾ ಸಂಸ್ಥೆ ಪ್ರಾಪ್‌ಈಕ್ವಿಟಿ ವರದಿ ತಿಳಿಸಿದೆ.

ಡೆವಲಪರ್‌ಗಳು ಮನೆ ಖರೀದಿದಾರರಿಂದ ಪಡೆದ ಹಣದ ನಿರ್ವಹಣೆಯಲ್ಲಿ ಲೋಪ ಎಸಗಿರುವುದೇ ಯೋಜನೆಗಳ ಸ್ಥಗಿತಕ್ಕೆ ಮೂಲ ಕಾರಣವಾಗಿದೆ. ಸಕಾಲದಲ್ಲಿ ಯೋಜನೆಗಳನ್ನು ಕಾರ್ಯಗತಗೊಳಿಸುವ ಸಾಮರ್ಥ್ಯವು ಅವರಲ್ಲಿ ಕಡಿಮೆಯಿದೆ ಎಂದು ತಿಳಿಸಿದೆ.

ಟೈರ್ 1 ವ್ಯಾಪ್ತಿಯ 14 ನಗರಗಳಲ್ಲಿ 1,636 ಯೋಜನೆಗಳು ಸ್ಥಗಿತಗೊಂಡಿದ್ದು, ಒಟ್ಟು 4.31 ಲಕ್ಷ ಮನೆಗಳು ಅಪೂರ್ಣಗೊಂಡಿವೆ. ಟೈರ್ 2 ನಗರಗಳಲ್ಲಿ 76,256 ಮನೆಗಳ ನಿರ್ಮಾಣ ಸ್ಥಗಿತಗೊಂಡಿದೆ ಎಂದು ತಿಳಿಸಿದೆ.

2018ರಲ್ಲಿ 4.65 ಲಕ್ಷ ಮನೆಗಳ ನಿರ್ಮಾಣ ಸ್ಥಗಿತಗೊಂಡಿತ್ತು. ಈಗ ಅವುಗಳ ಸಂಖ್ಯೆ 5.08 ಲಕ್ಷಕ್ಕೆ ಮುಟ್ಟಿದೆ ಎಂದು ವಿವರಿಸಿದೆ.

‘ಬಹಳಷ್ಟು ಡೆವಲಪರ್‌ಗಳಿಗೆ ಯೋಜನೆಗಳನ್ನು ಕಾರ್ಯಗತಗೊಳಿಸುವ ಸಾಮರ್ಥ್ಯವಿಲ್ಲ. ಗ್ರಾಹಕರಿಂದ ಮುಂಗಡವಾಗಿ ಪಡೆದ ಹಣವನ್ನು ಅನ್ಯ ಉದ್ದೇಶಕ್ಕೆ ಬಳಸಿದ್ದಾರೆ. ಈ ಹಣವನ್ನು ಹೊಸದಾಗಿ ಜಮೀನು ಖರೀದಿಸಲು ಅಥವಾ ಸಾಲ ಮರುಪಾವತಿಗೆ ಬಳಕೆ ಮಾಡಿದ್ದಾರೆ’ ಎಂದು ಸಂಸ್ಥೆಯ ಸಂಸ್ಥಾಪಕ ಮತ್ತು ಸಿಇಒ ಸಮೀರ್ ಜಸುಜಾ ಹೇಳಿದ್ದಾರೆ.

ಇದರಿಂದ ಮನೆ ಖರೀದಿದಾರರಿಗೆ ತೊಂದರೆಯಾಗಿದೆ. ನಿಗದಿತ ಅವಧಿಯೊಳಗೆ ಡೆವಲಪರ್‌ಗಳಿಗೆ ಯೋಜನೆಗಳನ್ನು ಪೂರ್ಣಗೊಳಿಸುವ ಸಾಮರ್ಥ್ಯವಿದೆಯೇ ಎಂಬ ಬಗ್ಗೆ ಖರೀದಿದಾರರಿಗೆ ತಿಳಿಸುವ ಕೆಲಸ ಆಗಬೇಕಿದೆ. ಈ ಬಗ್ಗೆ ಸ್ವತಂತ್ರವಾಗಿ ಮೂರನೇ ವ್ಯಕ್ತಿಯಿಂದ ಯೋಜನೆಗಳ ಬಗ್ಗೆ ಆಡಿಟ್ ನಡೆಸುವ ಅಗತ್ಯವಿದೆ ಎಂದು ಹೇಳಿದ್ದಾರೆ.

ಬೆಂಗಳೂರಿನಲ್ಲಿ 225 ವಸತಿ ನಿರ್ಮಾಣ ಯೋಜನೆಗಳು ಸ್ಥಗಿತಗೊಂಡಿವೆ. ಒಟ್ಟು 39,908 ಮನೆಗಳು ಅಪೂರ್ಣಗೊಂಡಿದ್ದು, ಹಣ ಪಾವತಿಸಿರುವ ಗ್ರಾಹಕರಿಗೆ ಇನ್ನೂ ಹಸ್ತಾಂತರವಾಗಿಲ್ಲ.

ನೋಯ್ಡಾದಲ್ಲಿ 74,645, ಗುರುಗ್ರಾಮ 52,509, ಗಾಜಿಯಾಬಾದ್ 15,278, ಮುಂಬೈ 37,883, ಥಾಣೆ 57,520 ಮತ್ತು ಪುಣೆಯಲ್ಲಿ 24,129 ಮನೆಗಳ ನಿರ್ಮಾಣ ಸ್ಥಗಿತಗೊಂಡಿದೆ.

ವ್ಯಾಜ್ಯ ಹೆಚ್ಚಳ: ದೇಶದ ವಿವಿಧ ನ್ಯಾಯಾಲಯಗಳಲ್ಲಿ ರಿಯಲ್ ಎಸ್ಟೇಟ್‌ಗೆ ಸಂಬಂಧಿಸಿದ ದಾವೆಗಳ ಸಂಖ್ಯೆ ಹೆಚ್ಚುತ್ತಿದೆ. ಮನೆ ಖರೀದಿಗೂ ಮೊದಲು ಖರೀದಿದಾರರು ಸ್ಥಗಿತಗೊಂಡಿರುವ ಪ್ರಾಜೆಕ್ಟ್‌ಗಳ ಬಗ್ಗೆ ತಿಳಿದುಕೊಳ್ಳಬೇಕು. ವೃತ್ತಿಪರ ತಜ್ಞರ ಮೂಲಕ ಮಾಹಿತಿ ಪಡೆದುಕೊಳ್ಳಬೇಕು ಎಂದು ಸಮೀರ್ ಜಸುಜಾ ಸಲಹೆ ನೀಡಿದ್ದಾರೆ.

ಕೇಂದ್ರದಿಂದ ಆರ್ಥಿಕ ನೆರವು



ವಸತಿ ನಿರ್ಮಾಣ ಯೋಜನೆಗಳ ವಿಳಂಬ ತಡೆಯಲು ಕೇಂದ್ರ ಸರ್ಕಾರವು 2019ರಲ್ಲಿ ಕೈಗೆಟಕುವ ದರದ ಮನೆಗಳ ವಿಶೇಷ ನಿಧಿಯನ್ನು (ಎಸ್‌ಡಬ್ಲ್ಯುಎಎಂಐಎಚ್) ಸ್ಥಾಪಿಸಿದೆ. ಕೈಗೆಟಕುವ ದರದಡಿ ಮಧ್ಯಮ ವರ್ಗದ ಮನೆಗಳ ನಿರ್ಮಾಣ ಪೂರ್ಣಗೊಳಿಸಲು ಈ ನಿಧಿಯಡಿ ಡೆವಲಪರ್‌ಗಳಿಗೆ ಆರ್ಥಿಕ ನೆರವು ನೀಡಲಾಗುತ್ತದೆ.

ಕಳೆದ ಐದು ವರ್ಷಗಳಲ್ಲಿ ಈ ನಿಧಿಯಡಿ ನೆರವು ಪಡೆದು ಅಪೂರ್ಣಗೊಂಡಿದ್ದ 32 ಸಾವಿರ ಮನೆಗಳನ್ನು ಪೂರ್ಣಗೊಳಿಸಲಾಗಿದೆ. ಈ ನಿಧಿಯ ಮೂಲಕ ಪ್ರತಿ ವರ್ಷ 20 ಸಾವಿರ ಮನೆಗಳಂತೆ ಮುಂದಿನ ಮೂರು ವರ್ಷದಲ್ಲಿ 60 ಸಾವಿರ ಮನೆಗಳನ್ನು ಪೂರ್ಣಗೊಳಿಸುವ ಗುರಿ ಹೊಂದಲಾಗಿದೆ ಎಂದು ಪ್ರಾಪ್‌ಈಕ್ವಿಟಿ ಸಂಸ್ಥೆ ತಿಳಿಸಿದೆ.

ಸುದ್ದಿ 2 ನಿಮಿಷ

ಚಿನ್ನದ ಆಮದು ಶೇ 4ರಷ್ಟು ಇಳಿಕೆ

ನವದೆಹಲಿ (ಪಿಟಿಐ): ಜಾಗತಿಕ ಆರ್ಥಿಕ ಅನಿಶ್ಚಿತತೆಯಿಂದಾಗಿ ಏಪ್ರಿಲ್–ಜುಲೈ ಅವಧಿಯಲ್ಲಿ ದೇಶದ ಚಿನ್ನದ ಆಮದು ಪ್ರಮಾಣವು ಶೇ 4.23ರಷ್ಟು ಇಳಿಕೆಯಾಗಿದೆ.

ಹಿಂದಿನ ವರ್ಷದ ಇದೇ ಅವಧಿಯಲ್ಲಿ ಚಿನ್ನದ ಆಮದು ಮೌಲ್ಯವು ₹1.10 ಲಕ್ಷ ಕೋಟಿ ಇತ್ತು. ಈ ಜುಲೈನಲ್ಲಿ ₹1.06 ಲಕ್ಷ ಕೋಟಿಗೆ ಇಳಿದಿದೆ ಎಂದು ಕೇಂದ್ರ ಸರ್ಕಾರದ ಅಂಕಿ–ಅಂಶಗಳು ತಿಳಿಸಿವೆ.

ಜುಲೈನಲ್ಲಿ ಆಮದು ಪ್ರಮಾಣವು ಶೇ 10.65ರಷ್ಟು ಇಳಿಕೆಯಾಗಿದೆ. ₹26,274 ಕೋಟಿ ಮೌಲ್ಯದ ಚಿನ್ನವನ್ನು ಆಮದು ಮಾಡಿಕೊಳ್ಳಲಾಗಿದೆ. ಜೂನ್‌ನಲ್ಲಿ (–) ಶೇ 38.66 ಮತ್ತು ಮೇ ತಿಂಗಳಲ್ಲಿ (–) ಶೇ 9.76ರಷ್ಟು ಪೂರೈಕೆ ಕಡಿಮೆಯಾಗಿದೆ. ಏಪ್ರಿಲ್‌ನಲ್ಲಿ ₹26,106 ಕೋಟಿ ಮೌಲ್ಯದ ಹಳದಿ ಲೋಹ ಆಮದಾಗಿತ್ತು.



‘ಚಿನ್ನದ ದರದಲ್ಲಿ ಏರಿಕೆ ಆಗಿರುವುದೇ ಆಮದು ಪ್ರಮಾಣವು ಕುಸಿಯಲು ಕಾರಣವಾಗಿದೆ. ಆದರೆ, ದೇಶದಲ್ಲಿ ಸೆಪ್ಟೆಂಬರ್‌ನಿಂದ ಹಬ್ಬದ ಋತು ಆರಂಭವಾಗುತ್ತಿದೆ. ಕೇಂದ್ರ ಬಜೆಟ್‌ನಲ್ಲಿ ಸರ್ಕಾರವು ಚಿನ್ನ ಮತ್ತು ಬೆಳ್ಳಿ ಮೇಲಿನ ಆಮದು ಸುಂಕವನ್ನು ಶೇ 15ರಿಂದ ಶೇ 6ಕ್ಕೆ ಇಳಿಸಿದೆ. ಇದರಿಂದ ಆಮದು ಪ್ರಮಾಣ ಏರಿಕೆಯಾಗಲಿದೆ’ ಎಂದು ಆಭರಣ ತಯಾರಕರು ಹೇಳಿದ್ದಾರೆ.

ಚಿನ್ನದ ಆಮದಿನಲ್ಲಿ ಇಳಿಕೆಯಾಗಿರುವುದರಿಂದ ಜುಲೈನಲ್ಲಿ ವ್ಯಾಪಾರದ ಕೊರತೆ ಅಂತರವು ₹1.97 ಲಕ್ಷ ಕೋಟಿ ಆಗಿದೆ. ಈ ಹಣಕಾಸು ವರ್ಷದ ಮೊದಲ ನಾಲ್ಕು ತಿಂಗಳಲ್ಲಿ ಈ ಕೊರತೆ ಅಂತರವು ₹7.18 ಲಕ್ಷ ಕೋಟಿ ಆಗಿದೆ.

ಸೌಹಾರ್ದಯುತವಾಗಿ ಸಮಸ್ಯೆ ಇತ್ಯರ್ಥಕ್ಕೆ ಒತ್ತು: ಎಸ್‌ಬಿಐ ಹೇಳಿಕೆ

ಮುಂಬೈ (ಪಿಟಿಐ): ಠೇವಣಿ ಹಿಂಪಡೆಯುವಂತೆ ಸೂಚಿಸಿರುವ ಕರ್ನಾಟಕ ರಾಜ್ಯ ಸರ್ಕಾರದ ಜೊತೆಗೆ ಸೌಹಾರ್ದಯುತವಾಗಿ ಸಮಸ್ಯೆ ಬಗೆಹರಿಸಿಕೊಳ್ಳಲು ಚರ್ಚೆ ನಡೆಸಲಾಗುತ್ತಿದೆ ಎಂದು ಸರ್ಕಾರಿ ಸ್ವಾಮ್ಯದ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ (ಎಸ್‌ಬಿಐ) ಹಾಗೂ ಪಂಜಾಬ್ ನ್ಯಾಷನಲ್ ಬ್ಯಾಂಕ್ (ಪಿಎನ್‌ಬಿ) ಗುರುವಾರ ತಿಳಿಸಿವೆ.

ರಾಜ್ಯದ ವಿವಿಧ ಮಂಡಳಿಗಳು ಈ ಎರಡೂ ಬ್ಯಾಂಕ್‌ಗಳಲ್ಲಿ ಇಟ್ಟಿದ್ದ ನಿಶ್ಚಿತ ಠೇವಣಿ ಹಣವನ್ನು ವಂಚಿಸಿವೆ. ಇದಕ್ಕೆ ಪರಿಹಾರ ನೀಡಲು ನಿರಾಕರಿಸುತ್ತಿವೆ. ಹಾಗಾಗಿ, ಈ ಬ್ಯಾಂಕ್‌ಗಳಲ್ಲಿನ ಖಾತೆ ಸ್ಥಗಿತಗೊಳಿಸಿ ನಿಶ್ಚಿತ ಠೇವಣಿ ಮತ್ತಿತರ ಹೂಡಿಕೆ ಹಿಂಪಡೆಯುವಂತೆ ಸರ್ಕಾರವು ನಿಗಮ, ಮಂಡಳಿಗಳು, ಅಧೀನ ಸಂಸ್ಥೆಗಳು, ಸ್ಥಳೀಯ ಸಂಸ್ಥೆಗಳು ಮತ್ತು ವಿಶ್ವವಿದ್ಯಾಲಯಗಳಿಗೆ ಸೂಚಿಸಿದೆ.

ಸರ್ಕಾರದ ಆದೇಶ ಹೊರಡಿಸಿರುವ ಬೆನ್ನಲ್ಲೇ ಎರಡೂ ಬ್ಯಾಂಕ್‌ಗಳು ಪ್ರತ್ಯೇಕವಾಗಿ ಹೇಳಿಕೆ ನೀಡಿದ್ದು, ‘ಈ ಸಮಸ್ಯೆ ಬಗೆಹರಿಸಿಕೊಳ್ಳುವ ಪ್ರಕ್ರಿಯೆಯು ಪ್ರಗತಿಯಲ್ಲಿದೆ. ಹಾಗಾಗಿ, ಇದರ ಬಗ್ಗೆ ಯಾವುದೇ ಅಭಿಪ್ರಾಯ ವ್ಯಕ್ತಪಡಿಸುವುದಿಲ್ಲ’ ಎಂದು ತಿಳಿಸಿವೆ.



ಪಾರ್ಸಿ ಹೊಸ ವರ್ಷ

ಪಾರ್ಸಿ ಹೊಸ ವರ್ಷದ (ನವರೂಜ್) ಸಂಭ್ರಮದ ಅಂಗವಾಗಿ ಮುಂಬೈನ ದಾದರ್ ಪಾರ್ಸಿ ಕಾಲೊನಿಯಲ್ಲಿ ಇರುವ ಅಗ್ನಿ ದೇವಾಲಯಕ್ಕೆ ಹಿರಿಯ ನಾಗರಿಕರೊಬ್ಬರು ಪ್ರಾರ್ಥನೆ ಸಲ್ಲಿಸಲು ತೆರಳಿದರು –ಪಿಟಿಐ ಚಿತ್ರ

ಕಿಸಾನ್ ಕಿ ಬಾತ್ ಕಾರ್ಯಕ್ರಮ



ಶಿವರಾಜ್ ಸಿಂಗ್ ಚೌಹಾಣ್

ನವದೆಹಲಿ (ಪಿಟಿಐ): ರೈತರಿಗೆ ಕೃಷಿ ಬಗ್ಗೆ ವೈಜ್ಞಾನಿಕ ಅರಿವು ಮೂಡಿಸಲು ಸರ್ಕಾರವು ಮಾಸಿಕ ‘ಕಿಸಾನ್ ಕಿ ಬಾತ್’ ರೇಡಿಯೊ ಕಾರ್ಯಕ್ರಮ ಹಮ್ಮಿಕೊಳ್ಳಲು ತೀರ್ಮಾನಿಸಿದೆ ಎಂದು ಕೇಂದ್ರ ಕೃಷಿ ಸಚಿವ ಶಿವರಾಜ್ ಸಿಂಗ್ ಚೌಹಾಣ್ ತಿಳಿಸಿದ್ದಾರೆ.

ಆಧುನಿಕ ಕೃಷಿ ಪದ್ಧತಿ ಬಗ್ಗೆ ಅರಿವು ಮೂಡಿಸುವುದು ಇದರ ಉದ್ದೇಶವಾಗಿದೆ. ವೈಜ್ಞಾನಿಕ ಮಾಹಿತಿ ಮೂಲಕ ರೈತರನ್ನು ಆರ್ಥಿಕವಾಗಿ ಸಬಲಗೊಳಿಸಲಾಗುತ್ತದೆ ಎಂದು ತಿಳಿಸಿದ್ದಾರೆ.

ಕೃಷಿ ವಿಜ್ಞಾನಿಗಳು, ಕೃಷಿ ಇಲಾಖೆಯ ಅಧಿಕಾರಿಗಳು, ಸಚಿವರು ಕೃಷಿ ಪದ್ಧತಿಯಲ್ಲಿ ಅನುಸರಿಸಬೇಕಿರುವ ವಿಧಾನಗಳು ಮತ್ತು ವೈಜ್ಞಾನಿಕ ಪ್ರಗತಿ ಕುರಿತು ರೈತರಿಗೆ ಮಾಹಿತಿ ನೀಡಲಿದ್ದಾರೆ ಎಂದು ಹೇಳಿದ್ದಾರೆ.

ದೇಶದ ಕೃಷಿ ವಲಯದ ಪುನಶ್ಚೇತನಕ್ಕೆ ಒತ್ತು ನೀಡುವುದು ಈ ರೇಡಿಯೊ ಕಾರ್ಯಕ್ರಮ ಉದ್ದೇಶವಾಗಿದೆ. ರೈತರು ಮತ್ತು ಕೃಷಿ ವಿಜ್ಞಾನ ಕೇಂದ್ರಗಳನ್ನು ಒಂದೇ ವೇದಿಕೆಯಡಿ ತರುವ ನಿಟ್ಟಿನಲ್ಲಿ ಕಾರ್ಯಕ್ರಮಗಳನ್ನು ರೂಪಿಸಲಾಗುತ್ತದೆ ಎಂದು ತಿಳಿಸಿದ್ದಾರೆ.


ವಿನಿಮಯ ದರ	
$ ಡಾಲರ್	83.97
£ ಪೌಂಡ್	107.76
€ ಯುರೊ	92.07
¥ ಯೆನ್ (100ಕ್ಕೆ)	56

ಎನ್.ಆರ್.ಪುರ ರಬ್ಬರ್



(ಪ್ರತಿ ಕೆ.ಜಿಗೆ)	
ಆರ್‌ಎಸ್‌ಎಸ್‌-4	₹234
ಆರ್‌ಎಸ್‌ಎಸ್‌-5	₹227
ಗುಡ್ ಲಾಟ್	₹216

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100ಕ್ಕೆ	₹490
12 ಕ್ಕೆ	₹68
ಮೈಸೂರು	
100ಕ್ಕೆ	₹495

ಪ್ರಜಾವಾಣಿ ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

ಸಂಕ್ಷಿಪ್ತ ಸುದ್ದಿ

ಪ್ಯಾಲೆಸ್ಟೀನ್: 40 ಸಾವಿರ ದಾಟಿದ ಸಾವಿನ ಸಂಖ್ಯೆ

ದೋಹಾ (ಎಪಿ): ಇಸ್ರೇಲ್ ಮತ್ತು ಹಮಾಸ್ ನಡುವಿನ ಯುದ್ಧದಲ್ಲಿ ಈವರೆಗೆ ಒಟ್ಟು 40,000ಕ್ಕೂ ಅಧಿಕ ಪ್ಯಾಲೆಸ್ಟೀನಿಯರು ಸಾವಿಗೀಡಾಗಿದ್ದಾರೆ ಎಂದು ಗಾಜಾದ ಆರೋಗ್ಯ ಸಚಿವಾಲಯ ಪ್ರಕಟಿಸಿದೆ.

ಕಳೆದ ವರ್ಷ ಹಮಾಸ್ ಬಂಡುಕೋರರು ದಕ್ಷಿಣ ಇಸ್ರೇಲ್‌ನಲ್ಲಿ ಏಕಾಏಕಿ ದಾಳಿ ನಡೆಸಿ ಸುಮಾರು 1,200 ಜನರನ್ನು ಹತ್ಯೆ ಮಾಡಿ, 250 ಜನರನ್ನು ಅಪಹರಿಸಿ ಗಾಜಾಕ್ಕೆ ಕರೆತಂದಿದ್ದರು. ಇದರ ಪ್ರತೀಕಾರಕ್ಕೆ ಮುಂದಾದ ಇಸ್ರೇಲ್, ಹಮಾಸ್ ಮೇಲೆ ಯುದ್ಧ ಸಾರಿತು. 2023ರ ಅಕ್ಟೋಬರ್ 7ರಂದು ಯುದ್ಧ ಪ್ರಾರಂಭವಾದ ನಂತರ 10 ತಿಂಗಳುಗಳಿಂದ ಇಸ್ರೇಲ್, ಗಾಜಾದ ಮೇಲೆ ನಿರಂತರವಾಗಿ ದಾಳಿ ಮುಂದುವರಿಸಿದೆ.

ಸಿರಿಯಾ: ಇರಾನ್ ಸೇನಾ ಸಲಹೆಗಾರ ಸಾವು

ದುಬೈ (ರಾಯಿಟರ್ಸ್): ಇತ್ತೀಚೆಗೆ ಸಿರಿಯಾ ಮೇಲೆ ಇಸ್ರೇಲ್ ನಡೆಸಿದ್ದ ವೈಮಾನಿಕ ದಾಳಿಯಲ್ಲಿ ಗಾಯಗೊಂಡಿದ್ದ ಇರಾನ್ ರೆವಲ್ಯೂಷನರಿ ಗಾರ್ಡ್‌ನ ವಾಯುಪಡೆಯ ಸಲಹೆಗಾರ ಕರ್ನಲ್ ಅಹ್ಮದ್‌ರೆಜಾ ಅಫ್ಶಾರಿ ಮೃತಪಟ್ಟಿದ್ದಾರೆ ಎಂದು ಫಾರ್ಸ್ ಸುದ್ದಿ ಸಂಸ್ಥೆ ವರದಿ ಮಾಡಿದೆ.

‘ಬಾಂಬ್ ದಾಳಿಯಲ್ಲಿ ಗಾಯಗೊಂಡಿದ್ದ ಅಫ್ಶಾರಿ ಸಾವಿಗೀಡಾಗಿದ್ದಾರೆ ಎಂದು ರೆವಲ್ಯೂಷನರಿ ಗಾರ್ಡ್‌ನ ಕಮಾಂಡರ್ ಹೊಸೇನ್ ಸಲಾಮಿ ತಿಳಿಸಿದ್ದಾರೆ’ ಎಂದು ವರದಿ ಮಾಡಲಾಗಿದೆ. ಆದರೆ ಅಫ್ಶಾರಿ ಸಾವಿನ ನಿಖರ ದಿನಾಂಕವನ್ನು ಬಹಿರಂಗಪಡಿಸಲಾಗಿಲ್ಲ. ಜುಲೈ ಕೊನೆಯಲ್ಲಿ ಅಥವಾ ಆಗಸ್ಟ್ ಮೊದಲ ವಾರದಲ್ಲಿ ನಡೆದಿದ್ದ ದಾಳಿಯ ವೇಳೆ ಅವರು ಗಾಯಗೊಂಡಿರುವ ಸಾಧ್ಯತೆಯಿದೆ ಎನ್ನಲಾಗಿದೆ.

ಅಮೆರಿಕ ಮತ್ತು ಇಸ್ರೇಲ್ ಸೇನೆಯು, ಸಿರಿಯಾದಲ್ಲಿರುವ ಇರಾನ್ ಬೆಂಬಲಿತ ಬಣಗಳ ವಿರುದ್ಧ ಹಲವು ವೈಮಾನಿಕ ದಾಳಿ ನಡೆಸಿವೆ.

ಶ್ರೀಲಂಕಾ: ಚುನಾವಣೆ ಕಣದಲ್ಲಿ 39 ಅಭ್ಯರ್ಥಿಗಳು

ಕೊಲಂಬೊ (ಪಿಟಿಐ): ‘ಶ್ರೀಲಂಕಾದ ಅಧ್ಯಕ್ಷೀಯ ಚುನಾವಣೆಗೆ ಮತದಾನವು ಸೆಪ್ಟೆಂಬರ್ 21ರಂದು ನಡೆಯಲಿದೆ. ಈ ಸ್ಥಾನಕ್ಕೆ ನಾಮಪತ್ರ ಸಲ್ಲಿಸಲು ಬುಧವಾರ ಕೊನೆಯ ದಿನವಾಗಿತ್ತು. ಇದೇ ಮೊದಲ ಬಾರಿಗೆ ಈ ಸ್ಥಾನಕ್ಕೆ ಸುಮಾರು 39 ಅಭ್ಯರ್ಥಿಗಳು ನಾಮಪತ್ರ ಸಲ್ಲಿಸಿದ್ದಾರೆ. ಆದರೆ, ಇವರಲ್ಲಿ ಒಬ್ಬರೂ ಮಹಿಳೆಯರಿಲ್ಲ’ ಎಂದು ಚುನಾವಣಾ ಆಯೋಗ ಹೇಳಿದೆ.

‘ಒಟ್ಟು 40 ನಾಮಪತ್ರಗಳು ಸಲ್ಲಿಕೆಯಾಗಿದ್ದವು. ಒಬ್ಬರು ತಮ್ಮ ನಾಮಪತ್ರವನ್ನು ವಾಪಸು ಪಡೆದರು. ಇನ್ನು ಮೂರು ನಾಮಪತ್ರಗಳ ಕುರಿತು ಆಕ್ಷೇಪಗಳಿದ್ದವು. ಆ ಎಲ್ಲ ನಾಮಪತ್ರಗಳನ್ನು ಅಸಿಂಧು ಮಾಡಲಾಯಿತು’ ಎಂದು ಆಯೋಗ ಮಾಹಿತಿ ನೀಡಿದೆ. ಅಧ್ಯಕ್ಷೀಯ ಸ್ಪರ್ಧೆಯಲ್ಲಿ ಹಾಲಿ ಅಧ್ಯಕ್ಷ ರಾನಿಲ್ ವಿಕ್ರಮಸಿಂಘೆ, ರಾಜಪಕ್ಸೆ ಮನೆತನದ ನಮಲ್ ರಾಜಪಕ್ಸೆ, ಈಗಿನ ವಿರೋಧ ಪಕ್ಷದ ನಾಯಕ ಸಜಿತ್ ಪ್ರೇಮದಾಸ, ಮಾರ್ಕ್ಸ್‌ವಾದಿ ಜೆಬಿಪಿ ನಾಯಕ ಅನುರಾ ಕುಮಾರ ದಿಸ್ಸಾನಾಯಕೆ ಇದ್ದಾರೆ.

ಅಫ್ಗಾನಿಸ್ತಾನ: 14 ಲಕ್ಷ ಹೆಣ್ಣುಮಕ್ಕಳು ಶಿಕ್ಷಣ ವಂಚಿತ

ಕಾಬೂಲ್ (ಎಪಿ): ಅಫ್ಗಾನಿಸ್ತಾನದ ತಾಲಿಬಾನ್ ಸರ್ಕಾರವು ಉದ್ದೇಶಪೂರ್ವಕವಾಗಿ 14 ಲಕ್ಷ ಹೆಣ್ಣುಮಕ್ಕಳನ್ನು ಶಾಲೆಗಳಿಂದ ಹೊರಗುಳಿಯುವಂತೆ ಮಾಡಿದೆ ಎಂದು ಯುನೆಸ್ಕೊ ಗುರುವಾರ ಹೇಳಿದೆ. ಹೆಣ್ಣುಮಕ್ಕಳು ಪ್ರೌಢ ಮತ್ತು ಉನ್ನತ ಶಿಕ್ಷಣ ಪಡೆಯುವುದಕ್ಕೆ ಅಫ್ಗಾನಿಸ್ತಾನದಲ್ಲಿ ನಿಷೇಧ ಹೇರಲಾಗಿದೆ.

2021ರಲ್ಲಿ ಅಫ್ಗಾನಿಸ್ತಾನದ ಆಡಳಿತವನ್ನು ತನ್ನ ಕೈವಶ ಮಾಡಿಕೊಂಡಿದ್ದ ತಾಲಿಬಾನ್, ಹೆಣ್ಣುಮಕ್ಕಳು ಆರನೇ ತರಗತಿಗಿಂತ ಹೆಚ್ಚಿನ ಶಿಕ್ಷಣ ಪಡೆಯುವುದನ್ನು ನಿಷೇಧಿಸಿತ್ತು. ಇದೀಗ ತಾಲಿಬಾನ್ ಆಡಳಿತ ಮೂರು ವರ್ಷ ಪೂರ್ಣಗೊಂಡಿದ್ದು, ಈ ನಿಷೇಧ ತೆರವುಗೊಳಿಸುವ ಯಾವುದೇ ಲಕ್ಷಣಗಳು ಗೋಚರಿಸುತ್ತಿಲ್ಲ.

2023ರ ಏಪ್ರಿಲ್ ಬಳಿಕ 3 ಲಕ್ಷ ಹೆಣ್ಣುಮಕ್ಕಳು ಒಳಗೊಂಡಂತೆ ತಾಲಿಬಾನ್ ಸಂಘಟನೆ ಅಧಿಕಾರ ವಹಿಸಿಕೊಂಡ ನಂತರ ಸುಮಾರು 14 ಲಕ್ಷ ಹೆಣ್ಣುಮಕ್ಕಳು ಪ್ರೌಢ ಶಾಲಾ ಶಿಕ್ಷಣ ಪಡೆಯುವ ಅವಕಾಶ ಕಳೆದುಕೊಂಡಿದ್ದಾರೆ ಎಂದು ಯುನೆಸ್ಕೊ ತಿಳಿಸಿದೆ. ಈ ನಿಷೇಧ ಜಾರಿಗೂ ಮುನ್ನ ಶಾಲೆಗಳಿಂದ ದೂರವುಳಿದವರನ್ನೂ ಸೇರಿಸಿಕೊಂಡರೆ, ಸುಮಾರು 25 ಲಕ್ಷ ಹೆಣ್ಣುಮಕ್ಕಳು ಶಿಕ್ಷಣದಿಂದ ವಂಚಿತರಾಗಿದ್ದಾರೆ.

ಬಾಂಗ್ಲಾದೇಶ: ಹಸೀನಾ ಸೇರಿ 9 ಮಂದಿ ವಿರುದ್ಧ ದೂರು

ನರಮೇಧ ಆರೋಪ: ತನಿಖೆ ಶುರು



ಶೇಖ್ ಹಸೀನಾ

ಢಾಕಾ (ಪಿಟಿಐ): ಈಚೆಗೆ ನಡೆದ ವಿದ್ಯಾರ್ಥಿಗಳ ಪ್ರತಿಭಟನೆ ಸಂದರ್ಭದಲ್ಲಿ ನಡೆದ ನರಮೇಧ ಮತ್ತು ಮನುಕುಲದ ವಿರುದ್ಧದ ಅಪರಾಧ ಆರೋಪಗಳಿಗೆ ಸಂಬಂಧಿಸಿದಂತೆ ಬಾಂಗ್ಲಾದೇಶದ ಇಂಟರ್‌ನ್ಯಾಷನಲ್ ಕ್ರೈಮ್ಸ್ ಟ್ರಿಬ್ಯುನಲ್, ಮಾಜಿ ಪ್ರಧಾನಿ ಶೇಖ್ ಹಸೀನಾ ಮತ್ತು ಇತರೆ 9 ಮಂದಿ ವಿರುದ್ಧ ತನಿಖೆ ಆರಂಭಿಸಿದೆ.

ಶೇಖ್ ಹಸೀನಾ, ಅವಾಮಿ ಲೀಗ್ ಪ್ರಧಾನ ಕಾರ್ಯದರ್ಶಿ ಮತ್ತು ಮಾಜಿ ಸಚಿವ ಒಬೈದುಲ್ ಖಾದರ್, ಮಾಜಿ ಗೃಹ ಸಚಿವ ಅಸದುಝ್ಜಮಾನ್ ಖಾನ್ ಕಮಲ್ ಹಾಗೂ ಇತರ ಕೆಲವರ ವಿರುದ್ಧ ಬುಧವಾರ ಟ್ರಿಬ್ಯುನಲ್‌ಗೆ ದೂರು ನೀಡಲಾಗಿದೆ.

‘ಬುಧವಾರ ರಾತ್ರಿ ತನಿಖೆ ಆರಂಭವಾಗಿದೆ’ ಎಂದು ದೂರುದಾರರ ಪರ ವಕೀಲರಾದ ಎಂ.ಎಚ್. ತಮೀಮ್ ಅವರು ಗುರುವಾರ ಖಚಿತಪಡಿಸಿದ್ದಾರೆ.

ಪ್ರತಿಭಟನೆ ವೇಳೆ ಮೃತಪಟ್ಟಿದ್ದ ಒಂಬತ್ತನೇ ತರಗತಿ ವಿದ್ಯಾರ್ಥಿ ಆರಿಫ್ ಅಹ್ಮದ್ ಸಿಯಾಮ್ ಅವರ ತಂದೆ ಬುಲ್‌ಬುಲ್ ಕಬೀರ್ ಅವರು ಟ್ರಿಬ್ಯುನಲ್‌ಗೆ ದೂರು ನೀಡಿದ್ದಾರೆ.

ಶೇಖ್ ಹಸೀನಾ ಹಾಗೂ ಇತರರು ವಿದ್ಯಾರ್ಥಿಗಳ ಪ್ರತಿಭಟನೆಯನ್ನು ಹತ್ತಿಕ್ಕಲು ಹಿಂಸಾತ್ಮಕ ಮಾರ್ಗವನ್ನು ತೆಗೆದುಕೊಂಡಿದ್ದರು. ಇದರಿಂದಾಗಿ ವ್ಯಾಪಕ ಸಾವು–ನೋವು ಸಂಭವಿಸಿದೆ ಎಂದು ದೂರಿನಲ್ಲಿ ಆರೋಪಿಸಲಾಗಿದೆ.

ಮುಂದಿನ ವಾರ ವಿಶ್ವಸಂಸ್ಥೆ ತಂಡ ಭೇಟಿ

ಶೇಖ್ ಹಸೀನಾ ಅವರು ರಾಜೀನಾಮೆ ನೀಡುವ ಮುನ್ನ ಹಾಗೂ ಬಳಿಕ ನಡೆದ ಪ್ರತಿಭಟನಕಾರರ ಹತ್ಯೆಗೆ ಸಂಬಂಧಿಸಿದಂತೆ ತನಿಖೆಗೆ ತಂಡವನ್ನು ಕಳುಹಿಸಲು ವಿಶ್ವಸಂಸ್ಥೆಯು ನಿರ್ಧರಿಸಿದೆ. ಈ ತಂಡ ಮುಂದಿನ ವಾರ ಭೇಟಿ ನೀಡಲಿದೆ ಎಂದು ಪ್ರಕಟಣೆ ತಿಳಿಸಿದೆ.

1971ರಲ್ಲಿ ಸ್ವಾತಂತ್ರ್ಯ ಪಡೆದ ಬಳಿಕ ವಿಶ್ವಸಂಸ್ಥೆಯು ಬಾಂಗ್ಲಾದೇಶಕ್ಕೆ ಸತ್ಯ–ಶೋಧನಾ ತಂಡವನ್ನು ಕಳುಹಿಸಲು ನಿರ್ಧರಿಸಿರುವುದು ಇದೇ ಮೊದಲು ಎಂದು ಬಾಂಗ್ಲಾದ ನೂತನ ಸರ್ಕಾರದ ಅಧಿಕಾರಿಯೊಬ್ಬರು ‘ಎಕ್ಸ್’ನಲ್ಲಿ ಹೇಳಿದ್ದಾರೆ.

ವಿಶ್ವಸಂಸ್ಥೆಯ ಮಾನವ ಹಕ್ಕುಗಳ ಹೈ ಕಮಿಷನರ್ ವೋಲ್ಕರ್ ಟರ್ಕ್ ಅವರು ಮಧ್ಯಂತರ ಸರ್ಕಾರದ ಮುಖ್ಯಸ್ಥ ಮೊಹಮ್ಮದ್ ಯೂನಸ್ ಅವರೊಂದಿಗೆ ಮಾತುಕತೆ ವೇಳೆ ಈ ವಿಷಯ ತಿಳಿಸಿದ್ದಾರೆ ಎಂದು ಅವರು ಮಾಹಿತಿ ನೀಡಿದ್ದಾರೆ.

ಪಿಸ್ತೂಲ್ ಕುರಿತು ವಿವರಿಸಿದ ಮನು ಭಾಕರ್, ಹರ್ಮನ್ ಪ್ರೀತ್ ಸಿಂಗ್ ಬಳಗದಿಂದ ಹಾಕಿ ಸ್ಟಿಕ್ ಉಡುಗೊರೆ

ಒಲಿಂಪಿಕ್ಸ್ ತಂಡದೊಂದಿಗೆ ಮೋದಿ ಸಂವಾದ

ನವದೆಹಲಿ (ಪಿಟಿಐ): ಪ್ಯಾರಿಸ್ ಒಲಿಂಪಿಕ್ ಕೂಟದಲ್ಲಿ ಸ್ಪರ್ಧಿಸಿ ಮರಳಿರುವ ಭಾರತದ ಕ್ರೀಡಾಪಟುಗಳೊಂದಿಗೆ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಗುರುವಾರ ತಮ್ಮ ನಿವಾಸದಲ್ಲಿ ಸಂವಾದ ನಡೆಸಿದರು.

ಶೂಟಿಂಗ್‌ನಲ್ಲಿ ಎರಡು ಕಂಚಿನ ಪದಕಗಳನ್ನು ಗೆದ್ದು ಐತಿಹಾಸಿಕ ಸಾಧನೆ ಮಾಡಿದ ಮನು ಭಾಕರ್ ಅವರು ಪಿಸ್ತೂಲ್ ಕಾರ್ಯನಿರ್ವಹಣೆಯ ಕುರಿತು ಪ್ರಧಾನಿಗೆ ವಿವರಿಸಿದರು. ಮೋದಿ ಅವರು ಮನು ಅವರ ಪದಕಗಳನ್ನು ನೋಡಿ, ಅಭಿನಂದಿಸಿದರು. 10 ಮೀ ಏರ್ ಪಿಸ್ತೂಲ್ ಮಿಶ್ರ ತಂಡ ವಿಭಾಗದಲ್ಲಿ ಮನು ಅವರ ಜೊತೆಗೆ ಸ್ಪರ್ಧಿಸಿದ್ದ ಸರಬ್ಜೋತ್ ಸಿಂಗ್ ಅವರೊಂದಿಗೂ ಮೋದಿಯವರು ಮಾತನಾಡಿದರು.

ಪುರುಷರ 50 ಮೀಟರ್ ತ್ರೀ ಪೊಸಿಷನ್ ರೈಫಲ್‌ನಲ್ಲಿ ಕಂಚು ಗೆದ್ದ ಸ್ವಪ್ನಿಲ್ ಕುಸಾಳೆ ಅವರೊಂದಿಗೂ ಕೆಲಹೊತ್ತು ಮಾತುಕತೆ ನಡೆಸಿದರು. ಪುರುಷರ 57 ಕೆ.ಜಿ. ವಿಭಾಗದ ಫ್ರೀಸ್ಟೈಲ್ ಕುಸ್ತಿಯಲ್ಲಿ ಕಂಚಿನ ಪದಕ ಜಯಿಸಿದ ಅಮನ್ ಸೆಹ್ರಾವತ್ ಅವರು ತಮ್ಮ ಹಸ್ತಾಕ್ಷರ ಇರುವ ಪೋಷಾಕನ್ನು ಮೋದಿ ಅವರಿಗೆ ಉಡುಗೊರೆಯಾಗಿ ನೀಡಿದರು. ಅಮನ್ ಅವರ ಬೆನ್ನು ತಟ್ಟಿದ ಪ್ರಧಾನಿ ಅಭಿನಂದಿಸಿದರು.

ಸತತ ಎರಡನೇ ಒಲಿಂಪಿಕ್ಸ್‌ನಲ್ಲಿ ಕಂಚು ಜಯಿಸಿದ ಭಾರತ ಪುರುಷರ



ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಕಂಚಿನ ಪದಕ ಜಯಿಸಿದ ಭಾರತ ಪುರುಷರ ಹಾಕಿ ತಂಡದ ಆಟಗಾರರು ಗುರುವಾರ ಪ್ರಧಾನಿ ನರೇಂದ್ರ ಮೋದಿಯವರಿಗೆ ಆಟಗಾರರ ಹಸ್ತಾಕ್ಷರ ಇರುವ ಹಾಕಿ ಸ್ಟಿಕ್ ಮತ್ತು ಪೋಷಾಕನ್ನು ಕಾಣಿಕೆ ನೀಡಿದರು –ಪಿಟಿಐ ಚಿತ್ರ

ಹಾಕಿ ತಂಡದ ಎಲ್ಲ ಆಟಗಾರರು ಹಸ್ತಾಕ್ಷರ ಹಾಕಿದ ಸ್ಟಿಕ್ ಅನ್ನು ನಾಯಕ ಹರ್ಮನ್‌ಪ್ರೀತ್ ಸಿಂಗ್ ಅವರು ಮೋದಿ ಅವರಿಗೆ ಕಾಣಿಕೆಯಾಗಿ ನೀಡಿದರು. ಗೋಲ್‌ಕೀಪರ್ ಪಿ.ಆರ್. ಶ್ರೀಜೇಶ್ ಮತ್ತು ಸಹ ಆಟಗಾರರು ಈ ಸಂದರ್ಭದಲ್ಲಿ ಹಾಜರಿದ್ದರು.

ಆದರೆ ಬೆಳ್ಳಿ ಪದಕ ವಿಜೇತ ಜಾವೆಲಿನ್ ಥ್ರೋ ಅಥ್ಲೀಟ್ ನೀರಜ್ ಚೋಪ್ರಾ ಅವರು ಗೈರು ಹಾಜರಾಗಿದ್ದರು. ನೀರಜ್ ಅವರು ಪ್ಯಾರಿಸ್‌ನಿಂದ ಜರ್ಮನಿಗೆ ತೆರಳಿದ್ದಾರೆ. ತಮ್ಮ ಗಾಯದ ಚಿಕಿತ್ಸೆಗಾಗಿ ಅವರು ಜರ್ಮನಿಯ ವೈದ್ಯರಿಂದ ಸಲಹೆ ಪಡೆಯಲಿದ್ದು ಕೆಲವು ದಿನಗಳ ನಂತರ ಭಾರತಕ್ಕೆ ಮರಳುವ ಸಾಧ್ಯತೆ ಇದೆ.

ಈ ಬಾರಿ ಅಲ್ಪ ಅಂತರದಲ್ಲಿ ಪದಕ ಕೈತಪ್ಪಿಸಿಕೊಂಡ ಬ್ಯಾಡ್ಮಿಂಟನ್ ಆಟಗಾರ ಲಕ್ಷ್ಯ ಸೇನ್, ವೇಟ್‌ಲಿಫ್ಟರ್ ಮೀರಾಬಾಯಿ ಚಾನು ಹಾಗೂ ಬಾಕ್ಸರ್ ಲವ್ಲಿನಾ ಬೋರ್ಗೊಹೈನ್ ಅವರೊಂದಿಗೂ ಮೋದಿ ಅವರು ಮಾತುಕತೆ ನಡೆಸಿದರು.

ಈ ಸಂದರ್ಭದಲ್ಲಿ ಕ್ರೀಡಾ ಸಚಿವ ಮನ್ಸುಖ್ ಮಾಂಡವೀಯ ಮತ್ತು ಭಾರತ ಒಲಿಂಪಿಕ್ ಸಂಸ್ಥೆ ಅಧ್ಯಕ್ಷೆ ಪಿ.ಟಿ. ಉಷಾ ಹಾಜರಿದ್ದರು.

ಈ ಸಮಾರಂಭಕ್ಕೂ ಮುನ್ನ ಭಾರತ ತಂಡದ ಕ್ರೀಡಾಪಟುಗಳು ಕೆಂಪುಕೋಟೆಯಲ್ಲಿ ನಡೆದ ಸ್ವಾತಂತ್ರ್ಯೋತ್ಸವ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.


ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಎರಡು ಕಂಚಿನ ಪದಕಗಳನ್ನು ಜಯಿಸಿದ ಶೂಟರ್ ಮನು ಭಾಕರ್ ಅವರು ಬಳಕೆ ಮಾಡಿದ ಪಿಸ್ತೂಲ್ ಕುರಿತು ಪ್ರಧಾನಿ ನರೇಂದ್ರ ಮೋದಿ ಮಾಹಿತಿ ಪಡೆದರು –ಪಿಟಿಐ ಚಿತ್ರ

ಅಮನ್ ಸೆಹ್ರಾವತ್‌ಗೆ ಬಡ್ತಿ

ನವದೆಹಲಿ (ಪಿಟಿಐ): ಪ್ಯಾರಿಸ್ ಒಲಿಂಪಿಕ್ಸ್ ಕಂಚಿನ ಪದಕ ವಿಜೇತ ಕುಸ್ತಿಪಟು ಅಮನ್ ಸೆಹ್ರಾವತ್ ಅವರಿಗೆ ಉತ್ತರ ರೈಲ್ವೆ ವಲಯ ಬಡ್ತಿ ನೀಡಿದೆ. ವಿಶೇಷ ಕರ್ತವ್ಯ ಅಧಿಕಾರಿ (ಒಎಸ್‌ಡಿ) ಹುದ್ದೆಗೆ ಬುಧವಾರ ಬಡ್ತಿ ನೀಡಲಾಗಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

'ಅಮನ್ ಸೆಹ್ರಾವತ್ ಅವರ ಒಲಿಂಪಿಕ್ ಪದಕ ಗೆಲುವಿಗೆ ಉತ್ತರ ರೈಲ್ವೆಯ ಪ್ರಧಾನ ಮುಖ್ಯ ಸಿಬ್ಬಂದಿ ಅಧಿಕಾರಿ ಸುಜಿತ್ ಕುಮಾರ್ ಮಿಶ್ರಾ ಅವರು ಬಡ್ತಿ ನೀಡಿದರು ಮತ್ತು ಅವರನ್ನು ವಿಶೇಷ ಕರ್ತವ್ಯ ಅಧಿಕಾರಿಯಾಗಿ (ಒಎಸ್‌ಡಿ) ನೇಮಿಸಿದರು' ಎಂದು ಮುಖ್ಯ ಸಾರ್ವಜನಿಕ ಸಂಪರ್ಕ ಅಧಿಕಾರಿ ಹಿಮಾಂಶು ಎಸ್ .ಉಪಾಧ್ಯಾಯ ತಿಳಿಸಿದ್ದಾರೆ.

ರ್‍ಯಾಪಿಡ್ ಸುತ್ತಿನ ನಂತರ ನಿಪೊಮ್‌ನಿಷಿ ಮುನ್ನಡೆ

ಸೇಂಟ್ ಲೂಯಿ ಚೆಸ್ ಟೂರ್ನಿ

ಸೇಂಟ್ ಲೂಯಿ (ಅಮೆರಿಕ), (ಪಿಟಿಐ): ಫಿಡೆಯನ್ನು ಪ್ರತಿನಿಧಿಸುತ್ತಿರುವ ರಷ್ಯಾದ ಇಯಾನ್ ನಿಪೊಮ್‌ನಿಷಿ ಅವರು ಸೇಂಟ್ ಲೂಯಿ ರ್‍ಯಾಪಿಡ್ ಮತ್ತು ಬ್ಲಿಟ್ಜ್ ಚೆಸ್ ಟೂರ್ನಿಯ ರ್‍ಯಾಪಿಡ್ ಸುತ್ತಿನ ನಂತರ ಅಗ್ರಸ್ಥಾನ ಪಡೆದರು. ಈ ಟೂರ್ನಿ ಗ್ರ್ಯಾಂಡ್ ಚೆಸ್ ಟೂರ್‌ನ ಭಾಗವಾಗಿದೆ.

ನಿಪೊಮ್‌ನಿಷಿ, ಇರಾನ್ ಮೂಲದ ಫ್ರಾನ್ಸ್ ಆಟಗಾರ ಅಲಿರೇಜಾ ಫಿರೋಜ್ ಮತ್ತು ಫ್ರಾನ್ಸ್‌ನ ಮ್ಯಾಕ್ಸಿಂ ವೇಷಿಯರ್ ಲಗ್ರಾವ್ ಅವರು ತಲಾ 11 ಪಾಯಿಂಟ್ಸ್ ಸಂಗ್ರಹಿಸಿದ್ದಾರೆ. ನಿಪೊಮ್‌ನಿಷಿ ಟೈಬ್ರೇಕರ್‌ನಲ್ಲಿ ಮುಂದಿದ್ದಾರೆ.

ಐದು ದಿನಗಳ ಈ ಟೂರ್ನಿಯಲ್ಲಿ ಕೊನೆಯ ಎರಡು ದಿನ ಒಟ್ಟು 18 ಸುತ್ತಿನ ಬ್ಲಿಟ್ಜ್ ಪಂದ್ಯಗಳು ನಡೆಯಲಿದ್ದು, ನಂತರ ವಿಜೇತರ ನಿರ್ಧಾರವಾಗಲಿದೆ.

ಭಾರತದ ಪ್ರಜ್ಞಾನಂದ ಆರ್. ಅವರು ಸತತ ಮೂರನೇ ದಿನವೂ ನಿರಾಶೆ ಅನುಭವಿಸಿ ಕೊನೆಯ ಸ್ಥಾನದಲ್ಲೇ ಮುಂದುವರಿದರು. ಬುಧವಾರ ನಡೆದ ಮೂರು ಪಂದ್ಯಗಳಲ್ಲಿ ಅವರು ಒಂದನ್ನು ಡ್ರಾ ಮಾಡಿ ಎರಡರಲ್ಲಿ ಸೋಲುಕಂಡರು. ಅವರು ಒಟ್ಟು ನಾಲ್ಕು ಅಂಕ ಗಳಿಸಲಷ್ಟೇ ಶಕ್ತರಾಗಿದ್ದಾರೆ.

ಬುಧವಾರ ನಡೆದ ಮೂರು ಪಂದ್ಯಗಳಲ್ಲಿ ಭಾರತದ ಗ್ರ್ಯಾಂಡ್ ಮಾಸ್ಟರ್ ಎರಡು ಸೋತು, ಒಂದನ್ನು ಡ್ರಾ ಮಾಡಿಕೊಂಡರು. ಏಳನೇ ಸುತ್ತಿನಲ್ಲಿ


ಇಯಾನ್ ನಿಪೊಮ್‌ನಿಷಿ ಎಎಫ್‌ಪಿ ಚಿತ್ರ

ಕ್ಯೂಬಾ–ಅಮೆರಿಕನ್ ಗ್ರ್ಯಾಂಡ್ ಮಾಸ್ಟರ್ ಡೊಮಿಂಜೆಝ್ ಪೆರೆಝ್ ಅವರಿಗೆ ಸೋತರೆ, ಎಂಟನೇ ಸುತ್ತಿನಲ್ಲಿ ಅಲಿರೇಜಾ ಅವರ ಜೊತೆ ಪಾಯಿಂಟ್ ಹಂಚಿಕೊಂಡರು. ಅಂತಿಮ ಸುತ್ತಿನ ಪಂದ್ಯದಲ್ಲಿ ಹಿಕಾರು ನಕಾಮುರ ಎದುರು ಸೋಲನುಭವಿಸಿದರು.

ಅಮೆರಿಕದ ಲೆವೊನ್ ಅರೋನಿಯನ್ (10), ವೆಸ್ಲಿ ಸೊ (9), ಹಿಕಾರು ನಕಾಮುರ (9), ಡೊಮಿಂಗೆಜ್ ಫೆರೆಝ್ (9), ಉಜ್ಬೇಕಿಸ್ತಾನದ ನಾಡಿರ್ಬೆಕ್ ಅಬ್ದುಸತ್ತಾರೊವ್ (8), ಅಮೆರಿಕದ ಫ್ಯಾಬಿಯಾನೊ ಕರುವಾನ (8) ಅವರು ನಾಲ್ಕರಿಂದ ಒಂಬತ್ತರವರೆಗಿನ ಸ್ಥಾನಗಳನ್ನು ಪಡೆದಿದ್ದಾರೆ. ಕಳೆದ ವರ್ಷ ಕರುವಾನಾ ಅವರು ಚಾಂಪಿಯನ್ ಪಟ್ಟ ಅಲಂಕರಿಸಿದ್ದರು.

ನ್ಯೂಜಿಲೆಂಡ್ ಕೇಂದ್ರ ಗುತ್ತಿಗೆ ನಿರಾಕರಿಸಿದ ಕಾನ್ವೆ, ಫಿನ್

ಆಕ್ಲೆಂಡ್ (ಪಿಟಿಐ): ಅಗ್ರ ಕ್ರಮಾಂಕದ ಬ್ಯಾಟರ್‌ಗಳಾದ ಡೆವೊನ್ ಕಾನ್ವೆ ಮತ್ತು ಫಿನ್ ಅಲೆನ್ ಅವರು ನ್ಯೂಜಿಲೆಂಡ್ ಕ್ರಿಕೆಟ್ ಕೇಂದ್ರ ಗುತ್ತಿಗೆಯಲ್ಲಿ ಉಳಿಯಲು ನಿರಾಕರಿಸಿದ್ದಾರೆ. ಅವರು ಫ್ರ್ಯಾಂಚೈಸಿ ಕ್ರಿಕೆಟ್‌ನತ್ತ ಒಲವು ತೋರಿಸಿದ್ದಾರೆ.

ಗುರುವಾರ ತಮ್ಮ ನಿರ್ಧಾರವನ್ನು ಈ ಇಬ್ಬರೂ ಆಟಗಾರರು ಪ್ರಕಟಿಸಿದ್ದಾರೆ.

'ನ್ಯೂಜಿಲೆಂಡ್ ಕ್ರಿಕೆಟ್ ನನಗೆ ನೀಡಿರುವ ಪ್ರೋತ್ಸಾಹಕ್ಕೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಕಿವೀಸ್ ತಂಡದಲ್ಲಿ ಆಡುವುದಕ್ಕೆ ನನ್ನ ಆದ್ಯತೆ ಇದೆ. ಅಂತರರಾಷ್ಟ್ರೀಯ ಮಟ್ಟದಲ್ಲಿ ದೇಶದ ತಂಡವನ್ನು ಗೆಲ್ಲಿಸುವುದು ಮುಖ್ಯ' ಎಂದು ಕಾನ್ವೆ ಅವರು 'ಎಕ್ಸ್'ನಲ್ಲಿ ಹಾಕಿರುವ ವಿಡಿಯೊದಲ್ಲಿ ಹೇಳಿದ್ದಾರೆ.

'ಗಂಭೀರವಾಗಿ ಯೋಚಿಸಿಯೇ ನಾನು ಕೇಂದ್ರ ಗುತ್ತಿಗೆಯನ್ನು ಕೈಬಿಟ್ಟಿದ್ದೇನೆ. ನಾನು ಮತ್ತು ನನ್ನ ಕುಟುಂಬದ ಹಿತಾಸಕ್ತಿ ಇದರಲ್ಲಿದೆ' ಎಂದು ಕಾನ್ವೆ ಹೇಳಿದ್ದಾರೆ.

ಈಚೆಗಷ್ಟೇ ಕೇನ್ ವಿಲಿಯಮ್ಸನ್ ಅವರು ಶ್ರೀಲಂಕಾ ಎದುರಿನ ಸೀಮಿತ ಓವರ್‌ಗಳ ಸರಣಿಯಿಂದ ದೂರ ಉಳಿದಿದ್ದರು. ಎಸ್‌ಎ ಟಿ20 ಲೀಗ್‌ನಲ್ಲಿ ಆಡಲು ಈ ನಿರ್ಧಾರ ಮಾಡಿದ್ದರು. ವೇಗಿಗಳಾದ ಆ್ಯಡಂ ಮಿಲ್ನೆ ಮತ್ತು ಲಾಕಿ ಫರ್ಗ್ಯುಸನ್ ಅವರು ಕೂಡ ಇಂತಹದೇ ನಿರ್ಧಾರವನ್ನು ಕೈಗೊಂಡಿದ್ದರು.


ಡೆವೊನ್ ಕಾನ್ವೆ

ಕಾನ್ವೆ ಅವರು ಐಪಿಎಲ್‌ನಲ್ಲಿ ಚೆನ್ನೈ ಸೂಪರ್ ಕಿಂಗ್ಸ್ ತಂಡದಲ್ಲಿ ಆಡುತ್ತಾರೆ.

25 ವರ್ಷದ ಫಿನ್ ಅಲೆನ್ ಅವರು ಮೇಜರ್ ಲೀಗ್ ಕ್ರಿಕೆಟ್‌ನಲ್ಲಿ ಸ್ಯಾನ್ ಫ್ರಾನ್ಸಿಸ್ಕೊ ಯುನಿಕಾರ್ನ್ಸ್ ಮತ್ತು ದ ಹಂಡ್ರೆಡ್ ಟೂರ್ನಿಯ ಸದರ್ನ್ ಬ್ರೇವ್ ಹಾಗೂ ಬರ್ಮಿಂಗ್‌ಹ್ಯಾಮ್ ಫಿನಿಕ್ಸ್ ತಂಡಗಳಲ್ಲಿದ್ದಾರೆ. ಐಪಿಎಲ್‌ನಲ್ಲಿ ಕೆಲವು ಕಾಲ ಆಡಿದ್ದಾರೆ.

ಅಮೆರಿಕ ಓಪನ್ ಟೆನಿಸ್ ಟೂರ್ನಿ • ಇದೇ ತಿಂಗಳ 26ರಂದು ಆರಂಭ

ನವೊಮಿ, ವಾವ್ರಿಂಕಾ, ಥೀಮ್‌ಗೆ ವೈಲ್ಡ್‌ಕಾರ್ಡ್

ನ್ಯೂಯಾರ್ಕ್ (ಎಪಿ): ಎರಡು ಬಾರಿಯ ಚಾಂಪಿಯನ್ ನವೊಮಿ ಒಸಾಕಾ, ಮಾಜಿ ಚಾಂಪಿಯನ್ನರಾದ ಸ್ಟಾನ್ ವಾವ್ರಿಂಕಾ, ಡೊಮಿನಿಕ್ ಥೀಮ್ ಮತ್ತು ಬಿಯಾಂಕಾ ಆಂಡ್ರೀಸ್ಕು ಅವರಿಗೆ ಈ ವರ್ಷದ ಅಮೆರಿಕ ಓಪನ್ ಟೆನಿಸ್ ಚಾಂಪಿಯನ್‌ಷಿಪ್‌ಗೆ ವೈಲ್ಡ್ ಕಾರ್ಡ್ ನೀಡಲಾಗಿದೆ. ಟೂರ್ನಿ ಇದೇ ತಿಂಗಳ 26ರಂದು ಆರಂಭವಾಗಲಿದೆ.

2018ರಲ್ಲಿ ಒಸಾಕಾ ಅವರು ಫ್ಲಷಿಂಗ್ ಮಿಡೋಸ್‌ನಲ್ಲಿ ತಮ್ಮ ವೃತ್ತಿಜೀವನದ ನಾಲ್ಕು ಗ್ರ್ಯಾನ್‌ಸ್ಲಾಮ್ ಪ್ರಶಸ್ತಿಗಳಲ್ಲಿ ಮೊದಲನೆಯದನ್ನು ಗೆದ್ದುಕೊಂಡಿದ್ದರು. 2020ರಲ್ಲಿ ಮತ್ತೊಮ್ಮೆ ಅಮೆರಿಕ ಓಪನ್ ಕಿರೀಟ ಧರಿಸಿದ್ದರು. ಜೊತೆಗೆ ಎರಡು ಬಾರಿ ಆಸ್ಟ್ರೇಲಿಯನ್ ಓಪನ್‌ನಲ್ಲೂ ಚಾಂಪಿಯನ್ ಆಗಿದ್ದರು.

ಒಸಾಕಾ ಅವರು ಸಾಕಷ್ಟು ಟೂರ್ನಿಗಳನ್ನು ಆಡದ ಕಾರಣ ರ್‍ಯಾಂಕಿಂಗ್ ಗಣನೀಯವಾಗಿ ಕುಸಿದಿದ್ದು, ನೇರವಾಗಿ ಟೂರ್ನಿಗೆ ಅರ್ಹತೆ ಪಡೆಯುವ ಸ್ಥಿತಿಯಲ್ಲಿರಲಿಲ್ಲ. ಕಳೆದ ವರ್ಷ ಹೆಣ್ಣುಮಗುವಿಗೆ ಜನ್ಮನೀಡಿದ ನಂತರ ಅವರು ವಿರಾಮ ತೆಗೆದುಕೊಂಡಿದ್ದು, ಈ ವರ್ಷ ಸ್ಪರ್ಧಾಕಣಕ್ಕೆ ಮರಳಿದ್ದಾರೆ.


ನವೊಮಿ ಒಸಾಕಾ –ಎಎಫ್‌ಪಿ ಚಿತ್ರ

ಮಾನಸಿಕ ಆರೋಗ್ಯದ ಕಾರಣ ನೀಡಿಯೂ ಅವರು ಟೂರ್ನಿಗಳನ್ನು ತಪ್ಪಿಸಿಕೊಂಡಿದ್ದರು.

ಕೆನಡಾದ ಬಿಯಾಂಕಾ ಅವರು 2019ರ ಅಮೆರಿಕ ಓಪನ್ ಫೈನಲ್‌ನಲ್ಲಿ ಸೆರೆನಾ ವಿಲಿಯಮ್ಸ್ ಅವರನ್ನು ಮಣಿಸಿ ಟ್ರೋಫಿ ಎತ್ತಿದ್ದರು. ಬೆನ್ನುನೋವಿನ ಕಾರಣ ಅವರು ಕಳೆದ ವರ್ಷ ಹೆಚ್ಚಿನ ಅವಧಿಗೆ ಆಡಿರಲಿಲ್ಲ.

ವರ್ಷದ ಕೊನೆಯ ಗ್ರ್ಯಾನ್‌ಸ್ಲಾಮ್ ಟೂರ್ನಿಯಲ್ಲಿ ಥೀಮ್ ಆಡುವ ಅವಕಾಶ ಪಡೆದಿದ್ದಾರೆ. ಈ ವರ್ಷದ ಕೊನೆಯಲ್ಲಿ ಟೆನಿಸ್‌ಗೆ ವಿದಾಯ ಹೇಳುವುದಾಗಿ 30 ವರ್ಷ ವಯಸ್ಸಿನ ಥೀಮ್ ಈ ಮೊದಲೇ ತಿಳಿಸಿದ್ದರು. ಅವರು ತಮ್ಮ ಏಕೈಕ ಗ್ರ್ಯಾನ್‌ಸ್ಲಾಮ್ ಪ್ರಶಸ್ತಿಯಾಗಿ 2020ರಲ್ಲಿ ಅಮೆರಿಕ ಓಪನ್ ಚಾಂಪಿಯನ್ ಆಗಿದ್ದರು. ಆದರೆ ಮಣಿಕಟ್ಟಿನ ನೋವು ಕಾಡತೊಡಗಿದ ಮೇಲೆ ಅವರು ಮೂರು ವರ್ಷಗಳಿಂದ ಸಕ್ರಿಯವಾಗಿ ಟೂರ್ನಿಗಳಲ್ಲಿ ಭಾಗವಹಿಸುತ್ತಿಲ್ಲ.

39 ವರ್ಷದ ವಾವ್ರಿಂಕಾ ಅವರು 2016ರಲ್ಲಿ ಅಮೆರಿಕ ಓಪನ್ ಚಾಂಪಿಯನ್ ಆಗಿದ್ದಾರೆ. ಇದರ ಜೊತೆಗೆ ಅವರು ಇನ್ನೆರಡು ಪ್ರಮುಖ ಪ್ರಶಸ್ತಿಗಳನ್ನು ವೃತ್ತಿಜೀವನದಲ್ಲಿ ಗಳಿಸಿದ್ದಾರೆ. ಒಂದು ಹಂತದಲ್ಲಿ ಅವರು ವಿಶ್ವ ಕ್ರಮಾಂಕದಲ್ಲಿ ಮೂರನೇ ಸ್ಥಾನಕ್ಕೆ ಏರಿದ್ದರು. ಆದರೆ ನಂತರ ಕುಸಿತಕಂಡು ಟಾಪ್ 100 ರಿಂದ ಹೊರಬಿದ್ದಿದ್ದಾರೆ.

ಅಮೆರಿಕದ ಅಮಂಡಾ ಅನಿಸಿಮೊವಾ, ಮೆಕ್‌ಕಾರ್ಟ್ನಿ ಕೆಸ್ಲರ್, ಅಲೆಕ್ಸಾ ನೊಯೆಲ್ ಮತ್ತು ಇವಾ ಜೋವಿಕ್ ಅವರು ಮಹಿಳೆಯರ ಮುಖ್ಯ ರೌಂಡ್‌ಗೆ ವೈಲ್ಡ್ ಕಾರ್ಡ್ ಪಡೆದಿದ್ದಾರೆ.

ಪುರುಷರ ವಿಭಾಗದಲ್ಲಿ ಅಮೆರಿಕದ ಕ್ರಿಸ್ ಯುಬ್ಯಾಂಕ್ಸ್, ಲರ್ನರ್ ಟೀನ್, ಝುಕಾರಿ ಸ್ವಾಯ್ಡ ಮತ್ತು ಮ್ಯಾಥ್ಯೂ ಫೋರ್ಬ್ಸ್, ಫ್ರಾನ್ಸ್‌ನ ಅಲೆಕ್ಸಾಂಡರ್ ಮುಲ್ಲರ್ ಮತ್ತು ಆಸ್ಟ್ರೇಲಿಯಾದ ಟ್ರಿಸ್ಟನ್ ಸ್ಕೂಲ್‌ಕೇಟ್ ಅವರು ವೈಲ್ಡ್ ಕಾರ್ಡ್ ಪಡೆದ ಇತರರು.

ಫುಟ್‌ಬಾಲ್ ತಾರೆ ಲಮಿನ್ ಯಮಲ್ ತಂದೆಗೆ ಇರಿತ: ಮೂವರ ಬಂಧನ

ಬಾರ್ಸಿಲೋನಾ (ಎಎಫ್‌ಪಿ): ಸ್ಪೇನ್‌ನ ಯುವ ಫುಟ್‌ಬಾಲ್ ತಾರೆ ಲಮಿನ್ ಯಮಲ್ ಅವರ ತಂದೆಯ ಮೇಲೆ ಚಾಕುವಿನಿಂದ ದಾಳಿ ಮಾಡಿದ ಮೂವರನ್ನು ಪೊಲೀಸರು ಬಂಧಿಸಿದ್ದು, ಮತ್ತೊಬ್ಬನಿಗೆ ಶೋಧ ನಡೆಯುತ್ತಿದೆ.

ಇಲ್ಲಿಂದ 30 ಕಿ.ಮೀ. ದೂರವಿರುವ ಕೆಟಲಾನ್ ಪಟ್ಟಣ ಮತಾರೊದಲ್ಲಿ ಸಂಜೆ 7.10ರ ಸುಮಾರಿಗೆ ಕಾರ್ ಪಾರ್ಕ್‌ನಲ್ಲಿ ಈ ದಾಳಿ ನಡೆದಿದೆ ಎಂದು ಕೆಟಲಾನ್ ಪ್ರಾಂತ್ಯ ಪೊಲೀಸ್ ಪಡೆಯ ವಕ್ತಾರ ಮೊಸೊಸ್ ಡಿ' ಎಸ್ಕ್ವಾಂಡ್ರ ತಿಳಿಸಿದ್ದಾರೆ. ಇಲ್ಲಿಯ ರೊಕಾಫೊಂಡಾ ಯಮಲ್ ಅವರ ಹುಟ್ಟೂರು. ಯಮಲ್ ತಂದೆ ಮುನಿರ್ ನಸ್ರೋಯಿ ಅವರಿಗೆ ಹಲವು ಬಾರಿ ಇರಿಯಲಾಗಿದೆ. ಅವರಿಗೆ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ. ಅವರನ್ನು ಸಂಪರ್ಕಿಸಲು ಸುದ್ದಿಸಂಸ್ಥೆ ನಡೆಸಿದ ಯತ್ನ ಸಫಲವಾಗಲಿಲ್ಲ. ಗಂಭೀರ ಗಾಯಗೊಂಡ ನಸ್ರೋಯಿ ಅವರ ಸ್ಥಿತಿ ಈಗ ಸ್ಥಿರವಾಗಿದೆ ಎಂದು ಅವರಿಗೆ ಸಮೀಪದ ಮೂಲಗಳು ತಿಳಿಸಿವೆ.

ದಾಳಿಗೆ ಕಾರಣವಾದ ಅಂಶಗಳ ಬಗ್ಗೆ ಪೊಲೀಸರು ಮಾಹಿತಿ ಕಲೆಹಾಕುತ್ತಿದ್ದಾರೆ. ತನಿಖಾಧಿಕಾರಿಗಳು ಯಮಲ್ ಅವರ ತಂದೆಯಿಂದ ಮಾಹಿತಿ ಪಡೆಯಲಿದ್ದಾರೆ. ಯಮಲ್ ತಂದೆ ಅವರು ನಾಯಿ ಜೊತೆ ವಿಹಾರ ನಡೆಸುತ್ತಿದ್ದಾಗ, ಅವರಿಗೆ ಕೆಲವರ ಜೊತೆ ವಾಗ್ವಾದ ನಡೆದಿದೆ. ಅವರು ಮರಳಿ ಬಂದು ದಾಳಿ ನಡೆಸಿದ್ದಾರೆ ಎಂದು ಲಾ ವಾನ್‌ಗಾರ್ಡಿಯಾ ಪತ್ರಿಕೆ ತಿಳಿಸಿದೆ.

ಯಮಲ್ ಅವರು 15ನೇ ವಯಸ್ಸಿನಲ್ಲಿ ಬಾರ್ಸಿಲೋನಾ ಎಫ್‌ಸಿಗೆ ಪದಾರ್ಪಣೆ ಮಾಡಿದ್ದರು. ಕೆಲವೇ ತಿಂಗಳಲ್ಲಿ ತಂಡದ ಪ್ರಮುಖ ಆಟಗಾರನಾಗಿ ಬೆಳೆದರು. ಯುರೊ ಕಪ್‌ನಲ್ಲೂ ಈ ಫಾರ್ವರ್ಡ್ ಆಟಗಾರ ಗಮನ ಸೆಳೆದಿದ್ದರು. ನಸ್ರೋಯಿ ಅವರು ಯುರೋಪಿಯನ್ ಚಾಂಪಿಯನ್‌ಷಿಪ್ ವೇಳೆ ಸಾಮಾಜಿಕ ಜಾಲತಾಣಗಳಲ್ಲಿ, ಮಾಧ್ಯಮ ಸಂದರ್ಶನಗಳಲ್ಲಿ ಕಾಣಿಸಿ ಪ್ರಸಿದ್ಧಿಗೆ ಬಂದಿದ್ದರು.

ಎಂಎಸ್‌ಪಿಗೆ ಕಾನೂನು ಖಾತರಿಗೆ ಒತ್ತಾಯ

ರೈತರಿಂದ ಟ್ರ್ಯಾಕ್ಟರ್ ರ್‍ಯಾಲಿ

ಚಂಡೀಗಢ (ಪಿಟಿಐ): ಬೆಳೆಗಳಿಗೆ ನೀಡುವ ಎಂಎಸ್‌ಪಿಗೆ ಕಾನೂನು ಖಾತರಿ ನೀಡುವುದೂ ಸೇರಿದಂತೆ ತಮ್ಮ ವಿವಿಧ ಬೇಡಿಕೆಗಳನ್ನು ಈಡೇರಿಸಬೇಕು ಎಂದು ಒತ್ತಾಯಿಸಿ ಸ್ವಾತಂತ್ರ್ಯೋತ್ಸದ ಸಂದರ್ಭದಲ್ಲಿ ಪಂಜಾಬ್ ಹಾಗೂ ಹರಿಯಾಣದಲ್ಲಿ ಅಲ್ಲಿನ ರೈತರು ವಿವಿದೆಢೆ ಟ್ರ್ಯಾಕ್ಟರ್ ರ್‍ಯಾಲಿ ನಡೆಸಿದರು. ಶಂಭು ಗಡಿಯಲ್ಲಿಯೂ ರ್‍ಯಾಲಿ ನಡೆಸಲಾಯಿತು.

ಸಂಯುಕ್ತ ಕಿಸಾನ್ ಮೋರ್ಚಾ (ರಾಜಕೀಯೇತರ), ಕಿಸಾನ್ ಮಜ್ದೂರ್ ಮೋರ್ಚಾ (ಕೆಎಂಎಂ) ಈ ರ್‍ಯಾಲಿಗೆ ಕರೆ ನೀಡಿದ್ದವು. ಟ್ರ್ಯಾಕ್ಟರ್‌ಗಳಿಗೆ ತ್ರಿವರ್ಣ ಧ್ವಜ ಹಾಗೂ ರೈತ ಸಂಘಟನೆಗಳ ಧ್ವಜಗಳನ್ನು ಹಾಕಲಾಗಿತ್ತು.

ಪಂಜಾಬ್‌ನ ಅಮೃತಸರದಲ್ಲಿ ಸುಮಾರು 600 ಟ್ರ್ಯಾಕ್ಟರ್‌ಗಳೊಂದಿಗೆ ರೈತರು ಪಾಲ್ಗೊಂಡಿದ್ದರು. ಇಲ್ಲಿನ ಅಟ್ಟರಿಯಿಂದ ಆರಂಭಗೊಂಡ ರ್‍ಯಾಲಿ 30 ಕಿ.ಮೀ ದೂರದ ಗೋಲ್ಡನ್ ಗೇಟ್ ಬಳಿ ಮುಕ್ತಾಯವಾಯಿತು. ಭಟಿಂಡಾದಲ್ಲಿಯೂ ರ್‍ಯಾಲಿ ನಡೆಯಿತು. ಹರಿಯಾಣದ ಅಂಬಾಲದಿಂದ ರ್‍ಯಾಲಿ ಆರಂಭಗೊಂಡು ಬಾಲಾನ, ಶಹಜಾದ್‌ಪುರ ಹಾಗೂ ನಾರಾಯಣಗಢದಲ್ಲಿ ಮುಕ್ತಾಯಗೊಂಡಿತು.


ರೈತ ನಾಯಕರು ಗುರುವಾರ ಅಮೃತಸರದಲ್ಲಿ ಟ್ರ್ಯಾಕ್ಟರ್ ರ್‍ಯಾಲಿ ನಡೆಸಿದರು –ಪಿಟಿಐ ಚಿತ್ರ

ಕ್ರಿಮಿನಲ್ ಕಾನೂನುಗಳಿಗೆ ವಿರೋಧ: ನೂತನ ಮೂರು ಕ್ರಿಮಿನಲ್ ಕಾನೂನುಗಳ ವಿರುದ್ಧವೂ ರೈತರು ತಮ್ಮ ಆಕ್ರೋಶವನ್ನು ಹೊರಹಾಕಿದರು. ಭಾರತೀಯ ನ್ಯಾಯ ಸಂಹಿತೆ (ಬಿಎನ್‌ಎಸ್), ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ (ಬಿಎನ್‌ಎಸ್‌ಎಸ್) ಹಾಗೂ ಭಾರತೀಯ ಸಾಕ್ಷ್ಯ ಅಧಿನಿಯಮದ (ಬಿಎಸ್‌ಎ) ಪ್ರತಿಗಳನ್ನು ರೈತರು ಸುಟ್ಟು ಹಾಕಿದರು.

> **'ದೆಹಲಿ ಚಲೊ' 200 ದಿನ ಪೂರೈಸಿದೆ. ಇದಕ್ಕಾಗಿ ಆಗಸ್ಟ್ 31ರಂದು ಶಂಭು, ಖನೌರಿ ಗಡಿಯಲ್ಲಿ ಮಹಾಪಂಚಾಯಿತಿಗಳನ್ನು ನಡೆಸಲಾಗುವುದು**
> **ರೈತ ನಾಯಕರು**

ಒಡಿಶಾ: ಮುಟ್ಟಿನ ರಜೆ ಘೋಷಣೆ

ಭುವನೇಶ್ವರ (ಪಿಟಿಐ): ಒಡಿಶಾ ಸರ್ಕಾರವು 78ನೇ ಸ್ವಾತಂತ್ರ್ಯೋತ್ಸವದ ದಿನ ಮಹಿಳೆಯರಿಗೆ ವೇತನ ಸಹಿತ (ಪಿಎಂಎಲ್) ಮುಟ್ಟಿನ ರಜೆಯನ್ನು ಘೋಷಿಸಿದೆ.

'ಈ ರಜೆಯನ್ನು ಮುಟ್ಟಿನ ಮೊದಲ ಅಥವಾ ಎರಡನೇ ದಿನದಂದು ತೆಗೆದುಕೊಳ್ಳಬಹುದು. ಈ ರಜೆಯು ಸಂಪೂರ್ಣ ಐಚ್ಛಿಕವಾಗಿರಲಿದೆ. ಮಹಿಳೆಯರು ಈ ರಜೆಯನ್ನು ತೆಗೆದುಕೊಳ್ಳದೆಯೂ ಇರಬಹುದು' ಎಂದು ಕಟಕ್‌ನಲ್ಲಿ ನಡೆದ ಸಮಾರಂಭವೊಂದರಲ್ಲಿ ಉಪ ಮುಖ್ಯಮಂತ್ರಿ ಪ್ರವ್ತಿ ಪರಿದಾ ಅವರು ಹೇಳಿದರು. ಪ್ರವ್ತಿ ಅವರು ರಾಜ್ಯದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆಯೂ ಆಗಿದ್ದಾರೆ.

ಕೀನ್ಯಾದಲ್ಲಿ ವಿಶ್ವ ಸಂಸ್ಥೆಯ 'ಸಿವಿಲ್ ಸೊಸೈಟಿ ಕಾನ್ಫರೆನ್ಸ್ 2024'ರಲ್ಲಿ ಭಾಗವಹಿಸಿದ್ದ ಒಡಿಶಾದ ಬಾಲಕಿಯೊಬ್ಬಳು, ವೇತನ ಸಹಿತ ಮುಟ್ಟಿನ ರಜೆ ನೀಡಬೇಕು ಎಂಬುದರ ಕುರಿತು ಮಾತನಾಡಿದ್ದಳು. ಮಹಿಳಾಪರ ಹೋರಾಟಗಾರ್ತಿ ಒಡಿಶಾದ ರಂಜಿತಾ ಪ್ರಿಯದರ್ಶಿನಿ ಅವರು ಕೂಡ ಅಂತರರಾಷ್ಟ್ರೀಯ ಮಟ್ಟದಲ್ಲಿ ಈ ಬಗ್ಗೆ ಧ್ವನಿ ಎತ್ತಿದ್ದರು.

ಜೀವನಸಮೃದ್ಧಿಯ ಲಕ್ಷ್ಮೀಪೂಜೆ

• ಎಸ್. ಸೂರ್ಯಪ್ರಕಾಶ ಪಂಡಿತ್

ಇತ್ತೀಚಿನ ದಿನಗಳಲ್ಲಿ ನಮ್ಮ ಸಮಾಜದಲ್ಲಿ ಲಕ್ಷ್ಮಿಯ ಪೂಜೆ ತುಂಬ ಜೋರಾಗಿ ನಡೆಯುತ್ತಿದೆ. ನಮ್ಮ ಸುಖವನ್ನು 'ಲಕ್ಷ್ಮಿ'ಯ ಮೂಲಕವೇ ನಾವು ಈಗ ಅಳೆಯುತ್ತಿರುವುದರಿಂದ ಅವಳ ಪೂಜೆಗೆ ಹೆಚ್ಚಿನ ಪ್ರಾಶಸ್ತ್ಯ! 'ಸರಸ್ವತಿ' ಒಲಿಯುವುದು ಕೂಡ 'ಲಕ್ಷ್ಮಿ'ಯ ಮೂಲಕವೇ ಎಂಬ ಎಣಿಕೆ ನಮ್ಮದಲ್ಲವೆ?

ನಮ್ಮ ಸಂಸ್ಕೃತಿಯಲ್ಲಿ ಶ್ರಾವಣದಲ್ಲಿಯ ವರಮಹಾಲಕ್ಷ್ಮೀವ್ರತ ಮತ್ತು ದೀಪಾವಳಿಯ ಸಮಯದಲ್ಲಿಯ ಲಕ್ಷ್ಮೀಪೂಜೆ – ಹೀಗೆ ಎರಡು ಸಂದರ್ಭಗಳಲ್ಲಿ ಲಕ್ಷ್ಮಿಯ ಪೂಜೆಗೆ ಪ್ರಧಾನವಾದ ಸ್ಥಾನ ದಕ್ಕಿದೆ. ಆದರೆ ನಾವು ನಮ್ಮ ಪರಂಪರೆಯ ಎಷ್ಟೋ ಆಚಾರ–ವಿಚಾರಗಳನ್ನು ತಪ್ಪಾಗಿಯೇ ತಿಳಿದುಕೊಂಡಿದ್ದೇವೆ. ಇದು ಲಕ್ಷ್ಮೀಪೂಜೆಯ ಸಂದರ್ಭದಲ್ಲೂ ಎದ್ದುಕಾಣುತ್ತದೆ. 'ಲಕ್ಷ್ಮಿ'ಯನ್ನು ನಾವಿಂದು ಹಣ–ಸಂಪತ್ತು ಎಂಬುದಕ್ಕೆ ಸಮೀಕರಿಸಿಕೊಂಡಿದ್ದೇವೆ. ಹೀಗಾಗಿ ನಮಗೆ ಹೇರಳ ದುಡ್ಡು ಸಿಗಲಿ, ರಾಶಿ ಸಂಪತ್ತು ಒಲಿಯಲಿ – ಎಂಬ ಮಹಾದಾಸೆಯಿಂದಲೇ ಲಕ್ಷ್ಮಿಯ ಪೂಜೆಗೆ ತೊಡಗುತ್ತೇವೆ. ಹಣವನ್ನಾಗಲೀ ಐಶ್ವರ್ಯವನ್ನಾಗಲೀ ಬಯಸುವುದು ತಪ್ಪಲ್ಲ. ಆದರೆ ಲಕ್ಷ್ಮಿ ಎಂದರೆ ಇಷ್ಟೇ ಅಲ್ಲ. ಸುಖ ಎಂಬುದು ಕೇವಲ ದುಡ್ಡಿನಿಂದ ಮಾತ್ರವೇ ಸಿಗುವಂಥದ್ದೇ? ನಮ್ಮ ಪರಂಪರೆಯಲ್ಲಿ ಲಕ್ಷ್ಮೀತತ್ತ್ವಕ್ಕಿರುವ ವ್ಯಾಪ್ತಿ ತುಂಬ ದೊಡ್ಡದು. ನಮ್ಮನ್ನು ಸುಖವಾಗಿಯೂ ಸಂತೋಷವಾಗಿಯೂ ನೆಲೆನಿಲ್ಲಿಸಬಲ್ಲ ವಿವರಗಳೆಲ್ಲವೂ ಲಕ್ಷ್ಮಿಯ ಸ್ವರೂಪವೇ ಹೌದು. ಈ ವಿವರಗಳ ಸಂಕೇತವಾಗಷ್ಟೆ ಹಣವನ್ನು ಕಾಣಿಸಲಾಗಿದೆ. ಆದರೆ ನಮಗೆ ಇಂದು ಹಣವೊಂದು ಹೊರತುಪಡಿಸಿ ಮತ್ತೇನೂ ಲಕ್ಷ್ಮಿಯ ಸ್ವರೂಪದಲ್ಲಿ ಕಾಣುತ್ತಿಲ್ಲ! ವಿದ್ಯೆ, ಬುದ್ಧಿ, ಧಾನ್ಯ, ಸಂತಾನ, ಧೈರ್ಯ, ಬಲ – ಹೀಗೆ ಜೀವನಸಮೃದ್ಧಿಗೆ ಕಾರಣವಾಗುವ ಎಲ್ಲವೂ ಲಕ್ಷ್ಮಿಯೇ ಎನ್ನುವುದನ್ನು ನಾವು ಮರೆಯುತ್ತಿದ್ದೇವೆ.

ನಮ್ಮ ಜೀವನದ ನೆಮ್ಮದಿಗೆ ಒದಗುವ ಎಲ್ಲ ಬಗೆಯ ಸಂಪತ್ತುಗಳನ್ನು ಪಡೆಯಬೇಕೆಂಬ ಉದ್ದೇಶದಿಂದ ಮಾಡುವ ಪೂಜೆಯೇ ವರಮಹಾಲಕ್ಷ್ಮೀವ್ರತ. ಒಬ್ಬೊಬ್ಬರಿಗೆ ಒಂದೊಂದು ಬಗೆಯ ಸಂಪತ್ತು ಬೇಕಿರುತ್ತದೆ. ಕೆಲವರಿಗೆ ವಿದ್ಯೆ, ಕೆಲವರಿಗೆ ದುಡ್ಡು, ಕೆಲವರಿಗೆ ಆರೋಗ್ಯ, ಕೆಲವರಿಗೆ ಉದ್ಯೋಗ, ಕೆಲವರಿಗೆ ಶಕ್ತಿ, ಕೆಲವರಿಗೆ ಮೋಕ್ಷ – ಹೀಗೆ. ನಮಗೆ ಏನು ಬೇಕು – ಎಂಬ ಅರಿವು ನಮ್ಮಲ್ಲಿ ಮೊದಲಿಗೆ ಮೂಡಬೇಕು. ಅದನ್ನು ಕೊಡುವಂತೆ ಆ ದೇವಿಯನ್ನು ಪ್ರಾರ್ಥಿಸಬೇಕು, ಪೂಜಿಸಬೇಕು. ಹೀಗಲ್ಲದೆ ಕೇವಲ ದುಡ್ಡಿನ ಆಸೆಗಾಗಿ ಮಾತ್ರವೇ ಲಕ್ಷ್ಮಿಯನ್ನು ಪೂಜಿಸಿದರೆ ಅದು ಸಾರ್ಥಕವೆನಿಸದು. ಅರಿವನ್ನು ಕೊಡಬಲ್ಲವಳೂ ಲಕ್ಷ್ಮಿಯೇ ಹೌದೆನ್ನಿ!

ವರಮಹಾಲಕ್ಷ್ಮಿಯ ಪೂಜೆಯನ್ನು ಮುಖ್ಯವಾಗಿ ಹೆಣ್ಣುಮಕ್ಕಳೇ ಆಚರಿಸುವುದು ರೂಢಿ. ಇದರಲ್ಲೂ ವಿಶೇಷತೆಯುಂಟು. ಸುಖ–ಬಲ–ನೆಮ್ಮದಿ ಮುಂತಾದ ಸುಖ–ಸಮೃದ್ಧಿಗಳನ್ನು ನಾವು ಶಕ್ತಿಸ್ವರೂಪದಲ್ಲಿಯೇ ಆರಾಧಿಸುತ್ತೇವೆ. ಶಕ್ತಿ ಎಂದರೆ ಸ್ತ್ರೀ ತಾನೆ? ಪೂಜೆಯನ್ನು ಹೇಗೆ ಮಾಡಬೇಕು – ಎಂಬುದು ಕೂಡ ಬಹಳ ಮುಖ್ಯವಾದ ಸಂಗತಿ. ಭಕ್ತಿ–ಶ್ರದ್ಧೆಗಳೇ ಪ್ರಮುಖವಾದ ಸಲಕರಣೆಗಳು. ಹೀಗಲ್ಲದೆ ಸುಮ್ಮನೆ ಆಡಂಬರವಷ್ಟೆ ಪೂಜೆಯ ಅಂಗವಾದರೆ ಫಲವಿರದು. ಲಕ್ಷ್ಮಿಯು ವಿಷ್ಣುವಿನ ಪತ್ನಿ. ವಿಷ್ಣು ಎಂದರೆ ಎಲ್ಲೆಲ್ಲೂ ಇರುವ ತತ್ತ್ವ. ವಿಷ್ಣು ಎಲ್ಲೆಲ್ಲೂ ಇದ್ದಮೇಲೆ ಅವನ ಜೊತೆಯಲ್ಲಿ ಲಕ್ಷ್ಮಿಯೂ ಇರಬೇಕಷ್ಟೆ. ಜೀವನದ ಒಂದೊಂದು ವಿವರದಲ್ಲೂ ನಮ್ಮ ಸುಖ–ಸಂತೋಷಗಳು ನೆಲೆಯಾಗಿವೆ ಎಂದು ಅರಿತು, ಪೂಜೆಯಲ್ಲಿ ತೊಡಗಬೇಕು. ಆಲಸ್ಯ, ಆಗ್ರಹ, ಕೊಳಕುತನ, ಸಣ್ಣತನಗಳು ಇರುವ ಕಡೆ ಲಕ್ಷ್ಮಿಯು ಇರಲಾರಳು. 'ಉತ್ಸಾಹದಿಂದ ಕೂಡಿದವನೂ, ಸೋಮಾರಿಯಲ್ಲದವನೂ, ಕೆಲಸಮಾಡುವ ರೀತಿಯನ್ನು ಅರಿತವನೂ, ಕೆಟ್ಟ ಅಭ್ಯಾಸಗಳಲ್ಲಿ ಆಸಕ್ತಿ ಇಲ್ಲದವನೂ, ಶೂರನೂ, ಕೃತಜ್ಞನೂ, ಸ್ಥಿರವಾದ ಸೌಹಾರ್ದವುಳ್ಳವನೂ ಆದವನಲ್ಲಿ ನೆಲೆಸಲು ಲಕ್ಷ್ಮಿ ತಾನಾಗಿಯೇ ಬರುತ್ತಾಳೆ.' ಇದು ನಮ್ಮ ಸಂಸ್ಕೃತಿಯ ಶ್ರದ್ಧೆ–ನಂಬಿಕೆ. ಇಂಥ ಶ್ರದ್ಧೆಗೆ ಭಂಗ ಬಾರದಂತೆ ನಮ್ಮ ವ್ರತದ ಆಚರಣೆ ಇರಲಿ. ❖



ಇಂದು ವರಮಹಾಲಕ್ಷ್ಮೀ ಹಬ್ಬ

ಸ್ವಾತಂತ್ರ್ಯೋತ್ಸವಕ್ಕೆ ಅತಿಥಿಯಾಗಿ ಆಹ್ವಾನ; ಭಾವುಕರಾದ ಧನುಜಾ

ಪೌರ ಕಾರ್ಮಿಕರೊಬ್ಬರ ಪುಸ್ತಕ ವಿ.ವಿ ಪಠ್ಯ

ಪ್ರಜಾವಾಣಿ ವಾರ್ತೆ

ತಿರುವನಂತಪುರ: ಅರ್ಧಕ್ಕೆ ಶಾಲೆ ಬಿಟ್ಟಿದ್ದ ಪೌರ ಕಾರ್ಮಿಕ ಮಹಿಳೆಯೊಬ್ಬರು ತಮ್ಮ ಜೀವಾನುಭವದ ಕುರಿತು ಬರೆದ ಪುಸ್ತಕವು ಕೇರಳದ ಎರಡು ವಿಶ್ವವಿದ್ಯಾಲಯಗಳ ಪದವಿ ಹಾಗೂ ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಪಠ್ಯದ ಭಾಗವಾಗಿದೆ.

ರಾಜಧಾನಿ ತಿರುವನಂತಪುರದ ಸಚಿವಾಲಯದ ಸಮೀಪದಲ್ಲಿರುವ 'ಚೆಂಕಲ್ ಚೂಳ ಕಾಲೊನಿ' ಎಂದೇ ಖ್ಯಾತಿ ಪಡೆದಿರುವ ರಾಜಾಜಿನಗರದ ನಿವಾಸಿ ಧನುಜಾ ಕುಮಾರಿ ಅವರು ಬರೆದ 'ಚೆಂಕಲ್ ಚೂಳಿಯೇ ಎಂಟೆ ಜೀವಿತಂ' (ಚೆಂಕಲ್ ಚೂಳದಲ್ಲಿ ನನ್ನ ಜೀವನ) ಕೃತಿಯು ಅವರ ಜೀವನದ ಅನುಭವಗಳನ್ನು ಒಳಗೊಂಡಿದೆ. ಈ ಕೃತಿಯನ್ನು ಕ್ಯಾಲಿಕಟ್ ವಿಶ್ವವಿದ್ಯಾಲಯದ ಎಂ.ಎ ಹಾಗೂ ಕಣ್ಣೂರು ವಿಶ್ವವಿದ್ಯಾಲಯದ ಬಿ.ಎ ವಿದ್ಯಾರ್ಥಿಗಳಿಗೆ ಪಠ್ಯಕ್ರಮದ ಭಾಗವಾಗಿದೆ.

ಸ್ವಾತಂತ್ರ್ಯೋತವದ ದಿನದ ಅಂಗವಾಗಿ ಗುರುವಾರ ಧನುಜಾ ಹಾಗೂ ಕುಟುಂಬ ಸದಸ್ಯರನ್ನು ಕೇರಳ ರಾಜ್ಯಪಾಲ ಆರಿಫ್ ಮೊಹಮ್ಮದ್ ಖಾನ್ ಅವರು ರಾಜಭವನಕ್ಕೆ ಅತಿಥಿಯಾಗಿ ಆಹ್ವಾನಿಸಿದ್ದರು.

ರಾಜ್ಯಪಾಲರ ಭೇಟಿ ವೇಳೆ ಭಾವುಕರಾದ ಧನುಜಾ, 'ಅತ್ಯಂತ ಹಿಂದುಳಿದ ಪರಿಸ್ಥಿತಿಯಲ್ಲಿರುವ ನಾನು ಜೀವನದಲ್ಲಿ ಇಂತಹ ಕ್ಷಣವನ್ನು ಊಹಿಸಲು ಸಾಧ್ಯವಿಲ್ಲ' ಎಂದು 'ಪ್ರಜಾವಾಣಿ' ಜೊತೆ ಅನುಭವ ಹಂಚಿಕೊಂಡರು.


ಕೇರಳದ ರಾಜಭವನದಲ್ಲಿ ಗುರುವಾರ ರಾಜ್ಯಪಾಲ ಆರಿಫ್ ಮೊಹಮ್ಮದ್ ಖಾನ್ ಅವರನ್ನು ಧನುಜಾಕುಮಾರಿ ಭೇಟಿಯಾದರು. ಈ ವೇಳೆ ಅವರ ಪತಿ ಸತೀಶ್ ಜೊತೆಗಿದ್ದರು –ಪ್ರಜಾವಾಣಿ ಚಿತ್ರ

ಈ ಪ್ರದೇಶದಲ್ಲಿರುವ ಅನೇಕರಂತೆ ಧನುಜಾ ಅವರು ಕೂಡ ಶಾಲೆಯನ್ನು ಅರ್ಧಕ್ಕೆ ಬಿಟ್ಟಿದ್ದಾರೆ. ಈ ಕಾಲೊನಿಯಲ್ಲಿ ಅನೇಕರು ಅಪರಾಧ ಕೃತ್ಯಗಳಿಂದ ಭಾಗಿಯಾಗಿದ್ದರಿಂದ ಈ ಪ್ರದೇಶವು ಕುಖ್ಯಾತಿ ಪಡೆದಿದೆ.

ಧನುಜಾ ಕುಮಾರಿ ಅವರು ಈಗ 'ಹರಿತಾ ಕರ್ಮಾ ಸೇನಾ'ದಲ್ಲಿ ಕೆಲಸ ಮಾಡುತ್ತಿದ್ದಾರೆ. ಈ ತಂಡವು ಪ್ರತಿ ಮನೆಗಳಿಂದಲೂ ತ್ಯಾಜ್ಯ ಸಂಗ್ರಹಿಸುವ ಕೆಲಸ ಮಾಡುತ್ತಿದೆ.

ತಮ್ಮ ಕಾಲೊನಿಯಲ್ಲಿ ಅನುಭವಿಸಿದ ಜೀವನದ ಅನುಭವಗಳನ್ನೇ ಧನುಜಾ ಅವರು ಬರೆಯಲು ಆರಂಭಿಸಿದರು. 2014ರಲ್ಲಿ ಸಾಂಸ್ಕೃತಿಕ ಕಲಾವಿದರ ತಂಡವೊಂದು ಇಲ್ಲಿಗೆ ಭೇಟಿ ನೀಡಿದ್ದ ವೇಳೆ ಇವರ ಬರವಣಿಗೆಯನ್ನು ಗುರುತಿಸಿ, ಲೇಖಕಿ ವಿಜಿಲಾ ಅವರಿಗೆ ಪರಿಚಯಿಸಿದರು. ಇವರ ಬರವಣಿಗೆ ಓದಿ ವಿಜಿಲಾ ಅವರು ಪುಸ್ತಕ ಬರೆದು, ಮುದ್ರಿಸಲು ಪ್ರೋತ್ಸಾಹಿಸಿದರು.

ಮುಖ್ಯಾಂಶಗಳು

- ನೈರ್ಮಲ್ಯ ಕೆಲಸದ ಜೊತೆಗೆ ಬರವಣಿಗೆಯಲ್ಲಿ ತೊಡಗಿದ್ದ ಧನುಜಾ
- ಕಾಲೊನಿ ಇತಿಹಾಸದ ಪುಸ್ತಕ ಬರೆಯಲು ಸಿದ್ಧತೆ
- ಕುಟುಂಬಸ್ಥರಿಂದಲೂ ಪ್ರೋತ್ಸಾಹ

ಕಾಲೊನಿಯಲ್ಲಿ ಸಮುದಾಯದವರು ಎದುರಿಸುತ್ತಿರುವ ತಾರತಮ್ಯವನ್ನೂ ಕೃತಿಯು ಒಳಗೊಂಡಿದೆ. ಅವರ ಮಗ ಕೇರಳ ಸರ್ಕಾರದ ಸ್ವಾಯತ್ತ ಸಂಸ್ಥೆ 'ಕಲಾಮಂಡಲಂ'ನಲ್ಲಿ ಕಲಿಯುತ್ತಿದ್ದ ವೇಳೆ ಕೂಡ ಸಾಕಷ್ಟು ಅವಮಾನಕ್ಕೆ ಒಳಗಾಗಿದ್ದರು.

ಧನುಜಾ ಅವರ ಬರವಣಿಗೆಗೆ ಕುಟುಂಬದಿಂದಲೂ ಸಾಕಷ್ಟು ಬೆಂಬಲ ಸಿಕ್ಕಿದೆ. ಅವರ ಪತಿ ಚೆಂಡೆ ವಾದಕರಾಗಿದ್ದು, ಮಕ್ಕಳಾದ ನಿಧೀಶ್, ಸುಧೀಶ್ ಅವರು ಕಲಾವಿದರಾಗಿದ್ದಾರೆ.

ಮೊದಲ ಪುಸ್ತಕಕ್ಕೆ ಸಿಕ್ಕ ಪ್ರೋತ್ಸಾಹದಿಂದ 'ಚೆಂಕಲ್ ಚೂಳ ಹಿಸ್ಟರಿ' ಪುಸ್ತಕ ಬರೆಯಲು ಸಿದ್ಧತೆ ನಡೆಸಿದ್ದಾರೆ. ಕಾಲೊನಿಯಲ್ಲಿ ಗ್ರಂಥಾಲಯ ತೆರೆಯಲು ಮುಂದಾಗಿದ್ದಾರೆ.

ಅಸ್ಸಾಂ: ಸಂಶಯಾಸ್ಪದ ವಸ್ತುಗಳು ವಶಕ್ಕೆ

ಪ್ರಜಾವಾಣಿ ವಾರ್ತೆ

ಗುವಾಹಟಿ: ಸ್ವಾತಂತ್ರ್ಯ ದಿನಾಚರಣೆಯ ದಿನವಾದ ಗುರುವಾರ ಗುವಾಹಟಿ ಸೇರಿದಂತೆ ಅಸ್ಸಾಂನ 24 ಕಡೆಗಳಲ್ಲಿ ಬಾಂಬ್ ಇಡಲಾಗಿದ್ದು, ತಾಂತ್ರಿಕ ಕಾರಣಗಳಿಂದ ನಿಗದಿತ ಸಮಯಕ್ಕೆ ಅವುಗಳನ್ನು ಸ್ಫೋಟಿಸಲು ಸಾಧ್ಯವಾಗಿಲ್ಲ ಎಂದು ನಿಷೇಧಿತ 'ಉಲ್ಫಾ-ಐ' ಸಂಘಟನೆ ತಿಳಿಸಿದೆ.

ಈ ಕುರಿತು ಉಗ್ರ ಸಂಘಟನೆಯಿಂದ ಇ-ಮೇಲ್ ಸಂದೇಶ ಬಂದ ಬೆನ್ನಲ್ಲೇ, ರಾಜ್ಯದ ವಿವಿಧೆಡೆ ತಪಾಸಣೆ ನಡೆಸಿದ ಭದ್ರತಾ ಪಡೆಗಳು ಸಂಶಯಾಸ್ಪದ ವಸ್ತುಗಳನ್ನು ವಶಕ್ಕೆ ಪಡೆದಿವೆ. ಇದರಿಂದ ಕೆಲಕಾಲ ರಾಜ್ಯದಲ್ಲಿ ಆತಂಕದ ಸ್ಥಿತಿ ನಿರ್ಮಾಣವಾಗಿತ್ತು.

ಗುವಾಹಟಿಯಲ್ಲಿ ಮುಖ್ಯಮಂತ್ರಿ ಹಿಮಂತ ಬಿಸ್ವಾ ಶರ್ಮಾ ಅವರು ತ್ರಿವರ್ಣ ಧ್ವಜಾರೋಹಣ ನಡೆಸಿದ ನಂತರ ಉಗ್ರ ಸಂಘಟನೆ ಈ ಕುರಿತು ಇ-ಮೇಲ್ ಸಂದೇಶ ಕಳುಹಿಸಿದೆ.

ಬೆಳಿಗ್ಗೆ 11.15ಕ್ಕೆ 'ಡೆಕ್ಕನ್ ಹೆರಾಲ್ಡ್' ಕಚೇರಿಯ ಇಮೇಲ್‌ಗೂ ಈ ಸಂದೇಶ ಬಂದಿದೆ. ಅದರ ಪ್ರಕಾರ, 'ಬೆಳಿಗ್ಗೆ 6ರಿಂದ ಮಧ್ಯಾಹ್ನ 12 ಗಂಟೆಯೊಳಗೆ ಸ್ಫೋಟಿಸಲು ಸಮಯ ನಿಗದಿ ಮಾಡಲಾಗಿತ್ತು. ಸ್ವಾತಂತ್ರ್ಯ ದಿನಾಚರಣೆ ದಿನ ಸಶಸ್ತ್ರ ಪ್ರತಿಭಟನೆಯ ಸೂಚಕವಾಗಿ ಈ ಸ್ಫೋಟ ನಡೆಸಲು ಉದ್ದೇಶಿಸಲಾಗಿತ್ತು' ಎಂದು ಅದರಲ್ಲಿ ತಿಳಿಸಲಾಗಿದೆ.

ಬಾಂಬ್‌ಗಳನ್ನು ಭದ್ರತಾ ಪಡೆಗಳ ನಿಷ್ಕ್ರಿಯಗೊಳಿಸುವವರೆಗೂ ಸಾರ್ವಜನಿಕರು ಸಹಕರಿಸಬೇಕು ಎಂದು ಸಂದೇಶದಲ್ಲಿ ಕೋರಲಾಗಿದೆ.

ಗುವಾಹಟಿಯ ಎರಡು, ಲಖಿಂಪುರ, ಶಿವಸಾಗರ, ನಲ್ಬರಿ, ನಾಗಾನ್ ಜಿಲ್ಲೆಗಳಲ್ಲಿ ಸಂಶಯಾಸ್ಪದ ವಸ್ತುಗಳನ್ನು ವಶಕ್ಕೆ ಪಡೆದಿದ್ದು, ಅವುಗಳನ್ನು ವಿಧಿವಿಜ್ಞಾನ ಪರೀಕ್ಷೆಗೆ ಕಳುಹಿಸಲಾಗಿದೆ ಎಂದು ಪೊಲೀಸ್ ಮಹಾನಿರ್ದೇಶಕ ಜಿ.ಪಿ.ಸಿಂಗ್ ತಿಳಿಸಿದ್ದಾರೆ.


ಆಂಧ್ರಪ್ರದೇಶದಲ್ಲಿ ಬಡವರಿಗೆ ₹5ಕ್ಕೆ ಊಟ ಒದಗಿಸುವ 100 ಅಣ್ಣಾ ಕ್ಯಾಂಟೀನ್‌ಗಳ ಪುನರಾರಂಭಕ್ಕೆ ಗುರುವಾರ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ಮರುಚಾಲನೆ ನೀಡಿದರು. ಟಿಡಿಪಿ ಹಿಂದೆ ಅಧಿಕಾರದಲ್ಲಿದ್ದಾಗ ಜಾರಿಗೊಳಿಸಿದ್ದ ಈ ಯೋಜನೆಯನ್ನು ಕಳೆದ ಬಾರಿಯ ವೈಎಸ್‌ಆರ್‌ಸಿಪಿ ಸರ್ಕಾರ ಸ್ಥಗಿತಗೊಳಿಸಿತ್ತು –ಪ್ರಜಾವಾಣಿ ಚಿತ್ರ

ಉಪಾಹಾರ ಕೂಟದಲ್ಲಿ ಸ್ಟಾಲಿನ್ ಭಾಗಿ

ಚೆನ್ನೈ: ತಮಿಳುನಾಡು ರಾಜ್ಯಪಾಲ ಆರ್.ಎನ್. ರವಿ ಅವರು ಆಯೋಜಿಸಿದ್ದ ಉಪಾಹಾರ ಕೂಟದಲ್ಲಿ ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಹಾಗೂ ಅವರ ಸಂಪುಟದ ಕೆಲ ಸಹೋದ್ಯೋಗಿಗಳು ಗುರುವಾರ ಭಾಗವಹಿಸಿದರು. ಈ ಕೂಟಕ್ಕೆ ಪಕ್ಷದಿಂದ ಯಾರೂ ಭಾಗವಹಿಸಬಾರದು ಎಂದು ಡಿಎಂಕೆ ಸೇರಿ ಮೈತ್ರಿಕೂಟದ ಇತರ ಪಕ್ಷಗಳು ನಿರ್ಣಯ ಕೈಗೊಂಡಿದ್ದವು. ರಾಜ್ಯಪಾಲರು ರಾಜ್ಯದ ಹಿತಾಸಕ್ತಿಗೆ ವಿರುದ್ಧವಾಗಿ ಕೆಲಸ ಮಾಡುತ್ತಾರೆ ಎಂದು ಆರೋಪಿಸಿ ಡಿಎಂಕೆ, ಕಾಂಗ್ರೆಸ್, ಸಿಪಿಎಂ, ಎಂಡಿಎಂಕೆ ಹಾಗೂ ಎಂಎಂಕೆ ಕೂಟದಲ್ಲಿ ಪಾಲ್ಗೊಳ್ಳಬಾರದು ಎಂದು ನಿರ್ಧರಿಸಿದ್ದವು. ಆದರೆ, ಸ್ಟಾಲಿನ್, ಸ್ಪೀಕರ್ ಎಂ. ಅಪ್ಪಾವು, ಸಚಿವ ದೊರೆ ಮುರುಗನ್ ಕೂಟದಲ್ಲಿ ಭಾಗವಹಿಸಿದರು.

ಪ್ರೊ ಕಬಡ್ಡಿ ಲೀಗ್ ಹರಾಜು: ₹2.07 ಕೋಟಿ ಗಿಟ್ಟಿಸಿದ ಮೊಹಮ್ಮದ್ ಶಾಡ್ಲುಯಿ

ಸಚಿನ್ ತನ್ವರ್‌ಗೆ ₹2.15 ಕೋಟಿ

ಪ್ರಜಾವಾಣಿ ವಾರ್ತೆ

ಮುಂಬೈ: ರಾಜಸ್ಥಾನದ ರೈಡರ್ ಸಚಿನ್ ತನ್ವರ್ ಅವರು ಪ್ರೊ ಕಬಡ್ಡಿ ಲೀಗ್ 11ನೇ ಆವೃತ್ತಿಗೆ ನಡೆದ ಆಟಗಾರರ ಹರಾಜು ಪ್ರಕ್ರಿಯೆಯ ಮೊದಲ ದಿನವಾದ ಗುರುವಾರ 'ಎ' ಕೆಟಗರಿ ಆಟಗಾರರ ಪೈಕಿ ಅತಿ ಹೆಚ್ಚಿನ ಮೊತ್ತಕ್ಕೆ, ₹2.15 ಕೋಟಿಗೆ ತಮಿಳು ತಲೈವಾಸ್ ಪಾಲಾದರು. ಅವರು ಇರಾನ್‌ನ ಮೊಹಮ್ಮದ್‌ರೇಝಾ ಶಾಡ್ಲುಯಿ ಚಿಯೆನ್ನ, ಪವನ್ ಸೆಹ್ರಾವತ್ ಅಂಥವರನ್ನು ಹಿಂದೆಹಾಕಿದರು.

ಪಿಕೆಎಲ್‌ನಲ್ಲಿ 22 ಪಂದ್ಯಗಳನ್ನು ಆಡಿರುವ ಅವರು ಹಿಂದೆ ಪಟ್ನಾ ಪೈರೇಟ್ಸ್ ತಂಡದಲ್ಲಿದ್ದರು. ಇರಾನ್‌ನ ಆಲ್‌ರೌಂಡರ್ ಮೊಹಮ್ಮದ್‌ರೇಝಾ ಅವರನ್ನು ಹರಾಜಿನಲ್ಲಿ ಮೊದಲನೆಯವರಾಗಿ ₹2.07 ಕೋಟಿ ಮೊತ್ತಕ್ಕೆ ಹರಿಯಾಣ ಸ್ಟೀಲರ್ಸ್ ತನ್ನದಾಗಿಸಿಕೊಂಡಿತು. ಹತ್ತನೇ ಸೀಸನ್ ಹರಾಜಿನಲ್ಲಿ ಅವರು ಅತಿ ಹೆಚ್ಚು ಮೊತ್ತಕ್ಕೆ (₹2.35 ಕೋಟಿ) ಪುಣೇರಿ ಪಲ್ಟನ್ಸ್ ಪಾಲಾಗಿದ್ದರು. ಆ ಋತುವಿನಲ್ಲಿ 99 ಟ್ಯಾಕಲ್ ಪಾಯಿಂಟ್ಸ್ ಪಡೆದು ತಮ್ಮ ಆಯ್ಕೆ ಸಮರ್ಥಿಸಿಕೊಂಡಿದ್ದರು.

ರೈಡರ್ ಗುಮನ್ ಸಿಂಗ್ ₹1.97 ಕೋಟಿ ಮೊತ್ತಕ್ಕೆ ಗುಜರಾತ್ ಜೈಂಟ್ಸ್ ಪಾಲಾದರು. ಅವರು ಕಳೆದ ಋತುವಿನಲ್ಲಿ ಯು ಮುಂಬಾ ತಂಡಕ್ಕೆ ಆಡಿದ್ದರು.

ಸ್ಟಾರ್ ರೈಡರ್ ಪವನ್ ಸೆಹ್ರಾವತ್ ಅವರನ್ನು ತೆಲುಗು ಟೈಟನ್ಸ್ ₹1.725 ಕೋಟಿ ಮೊತ್ತಕ್ಕೆ ಎಫ್‌ಬಿಎಂ (ಫೈನಲ್ ಬಿಡ್ ಮ್ಯಾಚ್ ಕಾರ್ಡ್) ಬಳಸಿ ತನ್ನಲ್ಲೇ ಉಳಿಸಿಕೊಂಡಿತು. ಮೂರು ವರ್ಷ ಹಿಂದೆ ಬೆಂಗಳೂರು ಬುಲ್ಸ್‌ಗೆ ಆಡಿದ್ದ ಅವರು ನಂತರ ತಮಿಳ್ ತಲೈವಾಸ್‌ಗೆ ಒಂದು ಋತು ಆಡಿ, ಕಳೆದ ಬಾರಿ ₹2 ಕೋಟಿಗೂ ಹೆಚ್ಚು ಮೊತ್ತಕ್ಕೆ ತೆಲುಗು ಟೈಟನ್ಸ್ ಪಾಲಾಗಿದ್ದರು.

ಇನ್ನೊಬ್ಬ ಪ್ರಮುಖ ರೈಡರ್ ಮಣಿಂದರ್ ಸಿಂಗ್ ಅವರನ್ನು ಬೆಂಗಾಲ್ ವಾರಿಯರ್ಸ್ ₹1.15 ಕೋಟಿ ಮೊತ್ತಕ್ಕೆ ಎಫ್‌ಬಿಎಂ ಮೂಲಕ ತನ್ನಲ್ಲೇ ಉಳಿಸಿಕೊಂಡಿತು.ರಕ್ಷಣೆ ವಿಭಾಗದಲ್ಲಿ ಸುನೀಲ್ ಕುಮಾರ್ ಮಲಿಕ್ ಅವರು ಅತಿ ಹೆಚ್ಚು ಮೊತ್ತಕ್ಕೆ, ₹1.015 ಕೋಟಿ) ಯು ಮುಂಬಾ ಪಾಲಾದರು. ಈ ಹಿಂದೆ ಜೈಪುರ ಪಿಂಕ್ ಪ್ಯಾಂಥರ್ಸ್ ನಾಯಕರಾಗಿ ಆಡಿದ್ದ ಅವರನ್ನು ಪಡೆಯಲು ಮುಂಬಾ ಮತ್ತು ಬುಲ್ಸ್ ನಡುವೆ ಪೈಪೋಟಿ ಏರ್ಪಟ್ಟಿತ್ತು.

ಇರಾನ್‌ನ ಡಿಫೆಂಡರ್ ಫಜಲ್ ಅತ್ರಾಚೆಲಿ ₹50 ಲಕ್ಷಕ್ಕೆ ಬೆಂಗಾಲ್ ವಾರಿಯರ್ಸ್ ತೆಕ್ಕೆಗೆ ಸೇರಿದರು. ಕಳೆದ ಸಲ ಅವರು ಗುಜರಾತ್ ಟೈಟನ್ಸ್ ಪರ ಆಡಿದ್ದರು. ರೈಟ್ ಕಾರ್ನರ್ ಡಿಫೆಂಡರ್ ಕೃಷ್ಣನ್ 'ಎ' ಕೆಟಗರಿಯಲ್ಲಿ ₹70 ಲಕ್ಷಕ್ಕೆ ತೆಲುಗು ಟೈಟನ್ಸ್ ಪಾಲಾದರು.

'ಬಿ' ಕೆಟಗರಿ: ಆಲ್‌ರೌಂಡರ್ ಭರತ್ ಈ ವಿಭಾಗದಲ್ಲಿ ₹1.30 ಕೋಟಿಗೆ ಯುಪಿ ಯೋಧಾಸ್ ಸೇರ್ಪಡೆಗೊಂಡರು.

ಬಿ ಕೆಟಗರಿಯಲ್ಲಿರುವ ರೈಡರ್ ಅಜಿಂಕ್ಯ ಪವಾರ್ ಅವರು ₹1.107 ಕೋಟಿ ಮೊತ್ತಕ್ಕೆ ಬೆಂಗಳೂರು ಬುಲ್ಸ್ ಪಾಲಾದರು. ಅನುಭವಿ ರೈಡರ್ ಪ್ರದೀಪ್ ನರ್ವಾಲ್ ಕೂಡ ₹70 ಲಕ್ಷಕ್ಕೆ ಬುಲ್ಸ್ ಪಾಲಾದರು.

ಮೊದಲ ದಿನ ಎಂಟು ಆಟಗಾರರು ಕೋಟಿಗೂ ಹೆಚ್ಚು ಮೊತ್ತ ಪಡೆದರು.



ರೈಡರ್ ಸಚಿನ್ ತನ್ವರ್ (ಹಸಿರು ಧಿರಿಸು)

ಅತಿ ಹೆಚ್ಚಿನ ಮೊತ್ತಕ್ಕೆ ಬಿಡ್ ಆದವರು

ಕೆಟಗರಿ	ಆಟಗಾರರು	ಬಿಡ್ ಮೊತ್ತ	ಪಡೆದ ತಂಡ
ಎ	ಸಚಿನ್ ತನ್ವರ್	₹2.15 ಕೋಟಿ	ತಮಿಳು ತಲೈವಾಸ್
ಎ	ಮೊಹಮ್ಮದ್‌ರೇಝಾ ಶಾಡ್ಲುಯಿ	₹2.07 ಕೋಟಿ	ಹರಿಯಾಣ ಸ್ಟೀಲರ್ಸ್
ಎ	ಗುಮನ್ ಸಿಂಗ್	₹1.97 ಕೋಟಿ	ಗುಜರಾತ್ ಜೈಂಟ್ಸ್
ಎ	ಪವನ್ ಸೆಹ್ರಾವತ್	₹1.725 ಕೋಟಿ	ತೆಲುಗು ಟೈಟನ್ಸ್
ಬಿ	ಭರತ್	₹1.30 ಕೋಟಿ	ಯು.ಪಿ. ಯೋಧಾಸ್
ಎ	ಮಣಿಂದರ್ ಸಿಂಗ್	₹1.15 ಕೋಟಿ	ಬೆಂಗಾಲ್ ವಾರಿಯರ್ಸ್
ಎ	ಅಜಿಂಕ್ಯ ಪವಾರ	₹ 1.107 ಕೋಟಿ	ಬೆಂಗಳೂರು ಬುಲ್ಸ್
ಎ	ಸುನೀಲ್ ಮಲಿಕ್	₹ 1.015 ಕೋಟಿ	ಯು ಮುಂಬಾ

ಮುಖ್ಯಾಂಶಗಳು

- ರೈಡರ್ ಗುಮನ್ ಸಿಂಗ್ ₹1.97 ಕೋಟಿ ಮೊತ್ತಕ್ಕೆ ಗುಜರಾತ್ ಜೈಂಟ್ಸ್ ಪಾಲು
- ₹1.725 ಕೋಟಿ ಮೊತ್ತ ಕೊಟ್ಟು ಪವನ್ ಉಳಿಸಿ ಕೊಂಡ ತೆಲುಗು ಟೈಟನ್ಸ್

ಬಿಡ್ ಪಡೆದ ಇತರ ಆಟಗಾರರು: ವಿಜಯ್ ಮಲಿಕ್ (ಆಲ್‌ರೌಂಡರ್, ₹20 ಲಕ್ಷ, ತೆಲುಗು ಟೈಟನ್ಸ್); ಆಶಿಷ್ (ಆಲ್‌ರೌಂಡರ್, ₹23.50 ಲಕ್ಷ, ದಬಾಂಗ್ ಡೆಲ್ಲಿ ಕೆಸಿ), ಸೋಮ್‌ವೀರ್ (ಡಿಫೆಂಡರ್, ₹20ಲಕ್ಷ, ಗುಜರಾತ್ ಜೈಂಟ್ಸ್), ಸಾಹುಲ್ ಕುಮಾರ್ (ಡಿಫೆಂಡರ್, ₹30 ಲಕ್ಷ, ಯುಪಿ ಯೋಧಾಸ್), ಶುಭಂ ಶಿಂಧೆ (ಡಿಫೆಂಡರ್ ರೈಟ್ ಕಾರ್ನರ್, ₹70 ಲಕ್ಷ, ಪಟ್ನಾ ಪೈರೇಟ್ಸ್), ಸುರ್ಜೀತ್ ಸಿಂಗ್, (ಡಿಫೆಂಡರ್, ₹60 ಲಕ್ಷ, ಜೈಪುರ ಪಿಂಕ್‌ಪ್ಯಾಂಥರ್ಸ್), ಮೋಹಿತ್ (ಡಿಫೆಂಡರ್ ಲೆಫ್ಟ್ ಕಾರ್ನರ್, ₹20 ಲಕ್ಷ, ಪುಣೇರಿ ಪಲ್ಟನ್), ಸಿದ್ಧಾರ್ಥ ಶಿರೀಶ್ ದೇಸಾಯಿ (ರೈಡರ್, ₹26 ಲಕ್ಷ, ದಬಾಂಗ್ ಡೆಲ್ಲಿ ಕೆಸಿ), ಅಜಿಂಕ್ಯ ಪವಾರ್ (ರೈಡರ್, 1.107 ಕೋಟಿ, ಬೆಂಗಳೂರು ಬುಲ್ಸ್).

ಆಯ್ಕೆ ಸಮಿತಿ ಮುಖ್ಯಸ್ಥರಾಗಿ ಅಭಿರಾಮ್

ಕರ್ನಾಟಕ ಕ್ರಿಕೆಟ್ ತಂಡಕ್ಕೆ ಯರೇಗೌಡ ಮುಖ್ಯ ಕೋಚ್

ಬೆಂಗಳೂರು: ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಯು ಸೀನಿಯರ್ ಹಾಗೂ ಜೂನಿಯರ್ ಕ್ರಿಕೆಟ್ ತಂಡಗಳ ತರಬೇತುದಾರರು ಮತ್ತು ಆಯ್ಕೆಗಾರರ ನೇಮಕವನ್ನು ಗುರುವಾರ ಪ್ರಕಟಿಸಿದೆ.

ಕರ್ನಾಟಕ ರಣಜಿ ಕ್ರಿಕೆಟ್ ತಂಡದ ಮುಖ್ಯ ಕೋಚ್ ಆಗಿ ಕೆ. ಯರೇಗೌಡ ನೇಮಕವಾಗಿದ್ದಾರೆ. ಕಳೆದ ಋತುವಿನಲ್ಲಿ ಅವರು ರಾಜ್ಯ 23 ವರ್ಷದೊಳಗಿನವರ ತಂಡದ ಕೋಚ್ ಆಗಿದ್ದರು. ಅವರ ಅವಧಿಯಲ್ಲಿ ತಂಡವು ಉತ್ತಮ ಫಲಿತಾಂಶ ಸಾಧನೆ ಮಾಡಿತ್ತು.

ಯರೇಗೌಡ ಅವರು 2022ರವರೆಗೆ ಕರ್ನಾಟಕ ತಂಡದ ಮುಖ್ಯ ಕೋಚ್ ಆಗಿದ್ದರು. ಕಳೆದೆರಡು ವರ್ಷಗಳಲ್ಲಿ ಪಿ.ವಿ. ಶಶಿಕಾಂತ್ ಅವರು ಕೋಚ್ ಆಗಿ ಕಾರ್ಯನಿರ್ವಹಿಸಿದ್ದರು. ಇದೀಗ ಮತ್ತೆ ಯರೇಗೌಡ ಸೀನಿಯರ್ ತಂಡಕ್ಕೆ ಮರಳಿದ್ದಾರೆ. ಮನ್ಸೂರ್ ಅಲಿ ಖಾನ್ ಬೌಲಿಂಗ್ ಕೋಚ್ ಆಗಿದ್ದಾರೆ. ಶಬರೀಶ್ ಮೋಹನ್ ಫೀಲ್ಡಿಂಗ್ ಕೋಚ್ ಆಗಿದ್ದಾರೆ.

23 ವರ್ಷದೊಳಗಿನವರ ತಂಡಕ್ಕೆ ಸೋಮಶೇಖರ್ ಎನ್. ಶಿರಗುಪ್ಪಿ ಅವರನ್ನು ಮುಖ್ಯ ಕೋಚ್ ಆಗಿ ನೇಮಕ ಮಾಡಲಾಗಿದೆ. ಸೀನಿಯರ್ ಮತ್ತು ಜೂನಿಯರ್ ತಂಡಗಳ ಆಯ್ಕೆ ಸಮಿತಿಯ ಮುಖ್ಯಸ್ಥರಾಗಿ ಜೆ. ಅಭಿರಾಮ್ ಮುಂದುವರಿದಿದ್ದಾರೆ. ಮಹಿಳಾ ತಂಡದ ಮುಖ್ಯ ಕೋಚ್ ಆಗಿ ಕರುಣಾ ಜೈನ್ ಅವರನ್ನು ಆಯ್ಕೆ ಮಾಡಲಾಗಿದೆ ಎಂದು ಕೆಎಸ್‌ಸಿಎ ಪ್ರಕಟಣೆಯಲ್ಲಿ ತಿಳಿಸಲಾಗಿದೆ.



ಯರೇಗೌಡ

ಸಮಿತಿಗಳು ಇಂತಿವೆ: ರಾಜ್ಯ ಸೀನಿಯರ್ ಕ್ರಿಕೆಟ್ ತಂಡ: ಕೆ.ಯರೇಗೌಡ (ಮುಖ್ಯ ಕೋಚ್), ಮನ್ಸೂರ್ ಅಲಿ ಖಾನ್ (ಬೌಲಿಂಗ್ ಕೋಚ್), ಶಬರೀಶ್ ಪಿ ಮೋಹನ್ (ಫೀಲ್ಡಿಂಗ್ ಕೋಚ್), ರಮೇಶ್ ರಾವ್ (ಮ್ಯಾನೇಜರ್)

23 ವರ್ಷದೊಳಗಿನವರು: ಸೋಮಶೇಖರ ಎನ್. ಶಿರಗುಪ್ಪಿ (ಮುಖ್ಯ ಕೋಚ್), ರೋಹಿತ್ ಸಬರವಾಲ್ (ಫೀಲ್ಡಿಂಗ್ ಕೋಚ್)

19 ವರ್ಷದೊಳಗಿನವರು: ಕೆ.ಬಿ. ಪವನ್ (ಮುಖ್ಯ ಕೋಚ್), ಎಸ್.ಎಲ್. ಅಕ್ಷಯ್ (ಬೌಲಿಂಗ್ ಕೋಚ್)

16 ಮತ್ತು 14 ವರ್ಷದೊಳಗಿನವರು: ಕುನಾಲ್ ಕಪೂರ್ (ಮುಖ್ಯ ಕೋಚ್), ಆದಿತ್ಯ ಬಿ ಸಾಗರ್ (ಸಹಾಯಕ ಕೋಚ್). ಆಯ್ಕೆ ಸಮಿತಿ: ಸೀನಿಯರ್ ತಂಡ: ಜೆ. ಅಭಿರಾಮ್ (ಮುಖ್ಯಸ್ಥ), ಕೆ.ಎಲ್. ಅಶ್ವಥ್, ಸಿ. ರಘು, ಎನ್.ಸಿ. ಅಯ್ಯಪ್ಪ (ಆಯ್ಕೆಗಾರರು).

ಜೂನಿಯರ್ ತಂಡಗಳು: ಜೆ. ಅಭಿರಾಮ್ (ಮುಖ್ಯಸ್ಥ), ಎಂ.ವಿ. ಪ್ರಶಾಂತ್, ಕೆ.ಎಂ. ಅಯ್ಯಪ್ಪ, ಉದಿತ್ ಪಟೇಲ್, ರಘೋತ್ತಮ ನವಲಿ (ಆಯ್ಕೆಗಾರರು)

ಮಹಿಳೆಯರ ವಿಭಾಗ: ಸೀನಿಯರ್ ಮತ್ತು 23 ವರ್ಷದೊಳಗಿನವರು: ಕರುಣಾ ಜೈನ್ (ಮುಖ್ಯ ಕೋಚ್).

19 ವರ್ಷದೊಳಗಿವನರು: ರಕ್ಷಿತಾ ಕೃಷ್ಣಪ್ಪ (ಮುಖ್ಯ ಕೋಚ್)

15 ವರ್ಷದೊಳಗಿನವರು: ರಾಖಿ ಗಂಗಲ್ (ಮುಖ್ಯ ಕೋಚ್)

ಆಯ್ಕೆ ಸಮಿತಿ: ಸೀನಿಯರ್ ಸಮಿತಿ: ಸುನಿತಾ ಅನಂತಕೃಷ್ಣನ್ (ಮುಖ್ಯಸ್ಥರು), ಮುಕ್ತಾ ಆರ್ ಅಳಗೇರಿ, ಅರುಣಾ ರೆಡ್ಡಿ, ಡಾ. ನಿವೇದಿತಾ ರೇಶ್ಮೆ (ಆಯ್ಕೆಗಾರರು.

ಜೂನಿಯರ್ ಸಮಿತಿ: ಶರ್ಮಿಳಾ ಸಿದ್ದೋಧನನ್ (ಮುಖ್ಯಸ್ಥರು), ರಂಜಿನಿ ಕುಮಾರ್, ಸಬಾ ಸಿದ್ಧಿಕಿ, ಮೀನಾ ಕುಮಾರಿ (ಆಯ್ಕೆಗಾರರು).

ಮುಖ್ಯಾಂಶಗಳು

- 23 ವರ್ಷದೊಳಗಿನವರ ತಂಡಕ್ಕೆ ಸೋಮಶೇಖರ ಶಿರಗುಪ್ಪಿ ಮುಖ್ಯ ಕೋಚ್
- 19 ವರ್ಷದೊಳಗಿನವರ ತಂಡಕ್ಕೆ ಕೆ.ಬಿ. ಪವನ್ ಮುಖ್ಯ ತರಬೇತುದಾರ
- 16 ಮತ್ತು 14 ವರ್ಷದೊಳಗಿನವರ ಕುನಾಲ್ ಕಪೂರ್ ಮುಖ್ಯ ಕೋಚ್

ಮಹಾರಾಜ ಟ್ರೋಫಿ ಕ್ರಿಕೆಟ್: ನವೀನ್, ಚೇತನ್ ಉತ್ತಮ ಆಟ

ಬೆಂಗಳೂರು ಬ್ಲಾಸ್ಟರ್ಸ್ ಶುಭಾರಂಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉತ್ತಮ ಬೌಲಿಂಗ್ ಮಾಡಿದ ಎಂ.ಜಿ. ನವೀನ್ ಮತ್ತು ಅರ್ಧಶತಕ ಸಿಡಿಸಿದ ಆರ್.ಎಲ್. ಚೇತನ್ ಅವರ ಬಲದಿಂದ ಬೆಂಗಳೂರು ಬ್ಲಾಸ್ಟರ್ಸ್ ತಂಡವು ಮಹಾರಾಜ ಟ್ರೋಫಿ ಕ್ರಿಕೆಟ್ ಟೂರ್ನಿಯಲ್ಲಿ ಶುಭಾರಂಭ ಮಾಡಿತು.

ಎಂ. ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಗುರುವಾರ ನಡೆದ ಮೊದಲ ಪಂದ್ಯದಲ್ಲಿ ಬೆಂಗಳೂರು ತಂಡವು 9 ವಿಕೆಟ್‌ಗಳಿಂದ ಗುಲ್ಬರ್ಗ ಮಿಸ್ಟಿಕ್ಸ್ ವಿರುದ್ಧ ಸುಲಭ ಜಯ ಸಾಧಿಸಿತು.

ಮಧ್ಯಾಹ್ನ ಆರಂಭವಾದ ಪಂದ್ಯದಲ್ಲಿ ಟಾಸ್ ಗೆದ್ದ ಬೆಂಗಳೂರು ತಂಡದ ನಾಯಕ ಮಯಂಕ್ ಅಗರವಾಲ್ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡರು. ನವೀನ್ (8ಕ್ಕೆ2) ಮತ್ತು ಆದಿತ್ಯ ಗೋಯಲ್ (43ಕ್ಕೆ3) ಅವರ ಅಮೋಘ ಬೌಲಿಂಗ್ ಮುಂದೆ ಗುಲ್ಬರ್ಗ ತಂಡವು 16.4 ಓವರ್‌ಗಳಲ್ಲಿ 116 ರನ್ ಗಳಿಸಿ ಎಲ್ಲ ವಿಕೆಟ್ ಕಳೆದುಕೊಂಡಿತು. ನಾಯಕ ದೇವದತ್ತ ಪಡಿಕ್ಕಲ್ (20; 9ಎ, 4X4, 6X1) ಮತ್ತು ಪ್ರವೀಣ ದುಬೆ (19; 23ಎ, 4X2) ಅವರು ಒಂದಿಷ್ಟು ಹೋರಾಟ ನಡೆಸಿದರು.

ಆದರೆ ಉಳಿದ ಬ್ಯಾಟರ್‌ಗಳು ಹೆಚ್ಚು ರನ್ ಗಳಿಸಲಿಲ್ಲ. ಇದರಿಂದಾಗಿ ತಂಡವು ಸಾಧಾರಣ ಮೊತ್ತ ಗಳಿಸಿತು.

ಗುರಿ ಬೆನ್ನಟ್ಟಿದ ಬೆಂಗಳೂರು ತಂಡವು 11.2 ಓವರ್‌ಗಳಲ್ಲಿ 1 ವಿಕೆಟ್ ನಷ್ಟಕ್ಕೆ 117 ರನ್ ಗಳಿಸಿ ಜಯಿಸಿತು. ಚೇತನ್ (53; 34ಎ, 4X5, 6X3) ಮತ್ತು ಮಯಂಕ್ ಅಗರವಾಲ್ (ಔಟಾಗದೆ 47; 29ಎ, 4X6, 6X1) ಅವರ ಶತಕದ ಜೊತೆಯಾಟದಿಂದಾಗಿ ತಂಡವು ಬೇಗನೆ ಗುರಿ ಮುಟ್ಟಿತು. ಆರಂಭಿಕ ಜೋಡಿಯು 59 ಎಸೆತಗಳಲ್ಲಿ 101 ರನ್ ಸೇರಿಸಿದರು.

ಸಂಕ್ಷಿಪ್ತ ಸ್ಕೋರು: ಗುಲ್ಬರ್ಗ ಮಿಸ್ಟಿಕ್ಸ್: 16.4 ಓವರ್‌ಗಳಲ್ಲಿ 116 (ಲವನೀತ್ ಸಿಸೊಡಿಯಾ 14, ದೇವದತ್ತ ಪಡಿಕ್ಕಲ್ 20, ಪ್ರವೀಣ ದುಬೆ 19, ಲವೀಶ್ ಕೌಶಲ್ 22ಕ್ಕೆ2, ಆದಿತ್ಯ ಗೋಯಲ್ 43ಕ್ಕೆ3, ಎಂ.ಜಿ. ನವೀನ್ 8ಕ್ಕೆ2, ಮೊಹಸಿನ್ ಖಾನ್ 8ಕ್ಕೆ2) ಬೆಂಗಳೂರು ಬ್ಲಾಸ್ಟರ್ಸ್: 11.2 ಓವರ್‌ಗಳಲ್ಲಿ 1 ವಿಕೆಟ್‌ಗೆ 117 (ಎಲ್.ಆರ್. ಚೇತನ್ 53, ಮಯಂಕ್ ಅಗರವಾಲ್ ಔಟಾಗದೆ 47, ಭುವನ್ ರಾಜು ಔಟಾಗದೆ 7, ವೈಶಾಖ ವಿಜಯಕುಮಾರ್ 44ಕ್ಕೆ1) ಫಲಿತಾಂಶ: ಬೆಂಗಳೂರು ಬ್ಲಾಸ್ಟರ್ಸ್ ತಂಡಕ್ಕೆ 9 ವಿಕೆಟ್‌ಗಳ ಜಯ. ಪಂದ್ಯದ ಆಟಗಾರ: ಎಂ.ಜಿ. ನವೀನ್.

ಇಂದಿನ ಪಂದ್ಯಗಳು: ಮಂಗಳೂರು ಡ್ರ್ಯಾಗನ್ಸ್ –ಹುಬ್ಬಳ್ಳಿ ಟೈಗರ್ಸ್ (ಮಧ್ಯಾಹ್ನ 3ರಿಂದ)

ಬೆಂಗಳೂರು ಬ್ಲಾಸ್ಟರ್ಸ್–ಮೈಸೂರು ವಾರಿಯರ್ಸ್ (ರಾತ್ರಿ 7ರಿಂದ)

ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್.



ಅರ್ಧಶತಕ ಗಳಿಸಿದ ಎಲ್. ಆರ್. ಚೇತನ್ ಬ್ಯಾಟ್ ಎತ್ತಿ ಸಂಭ್ರಮಿಸಿದರು

ಮೈಸೂರು ವಾರಿಯರ್ಸ್‌ಗೆ ಜಯ

ಬೆಂಗಳೂರು: ಮನೋಜ್ ಭಾಂಡಗೆ ಬೀಸಾಟದ ಬಲದಿಂದ ಮೈಸೂರು ವಾರಿಯರ್ಸ್ ತಂಡವು ಮಹಾರಾಜ ಟ್ರೋಫಿ ಟಿ20 ಕ್ರಿಕೆಟ್ ಟೂರ್ನಿಯ ಪಂದ್ಯದಲ್ಲಿ ಜಯಿಸಿತು.

ಗುರುವಾರ ರಾತ್ರಿ ನಡೆದ ಪಂದ್ಯಕ್ಕೆ ಮಳೆಯಿಂದಾಗಿ ವ್ಯತ್ಯಯ ಉಂಟಾಗಿತ್ತು. ಆದ್ದರಿಂದ ವಿ.ಜಯದೇವನ್ ನಿಯಮದನ್ವಯ ಫಲಿತಾಂಶವನ್ನು ನಿರ್ಧರಿಸಿಲಾಯಿತು. ಇದರಲ್ಲಿ ಮೈಸೂರು ತಂಡವು ಶಿವಮೊಗ್ಗ ಲಯನ್ಸ್ ವಿರುದ್ಧ 7 ರನ್‌ಗಳಿಂದ ಜಯಿಸಿತು. ಟಾಸ್ ಗೆದ್ದ ಶಿವಮೊಗ್ಗ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಮೈಸೂರು ತಂಡಕ್ಕೆ ಅಗ್ರ ಮತ್ತು ಮಧ್ಯಮ ಕ್ರಮಾಂಕದ ಬ್ಯಾಟರ್‌ಗಳಿಂದ ಉತ್ತಮ ಕಾಣಿಕೆ ಲಭಿಸಲಿಲ್ಲ. ಕೆಳಕ್ರಮಾಂಕದಲ್ಲಿ ಮನೋಜ್ ಭಾಂಡಗೆ (ಔಟಾಗದೆ 42; 16ಎ, 6X4) ಮತ್ತು ಕೆ. ಗೌತಮ್ (21; 19ಎ, 4X1, 6X1) ಉತ್ತಮ ಬ್ಯಾಟಿಂಗ್‌ನಿಂದ ಮೈಸೂರು 20 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 159 ರನ್ ಗಳಿಸಿತು.

ಆದರೆ ಮಳೆ ಬಂದ ಕಾರಣ ಶಿವಮೊಗ್ಗ ತಂಡಕ್ಕೆ 9 ಓವರ್‌ಗಳಲ್ಲಿ 88 ರನ್‌ಗಳ ಗೆಲುವಿನ ಗುರಿ ನಿಗದಿಪಡಿಸಲಾಯಿತು. ಅಭಿನವ್ ಮನೋಹರ್ (ಔಟಾಗದೆ 52; 29ಎ, 4X8, 6X2) ಮಿಂಚಿನ ಬ್ಯಾಟಿಂಗ್ ಮಾಡಿದರು. ಆದರೂ ತಂಡಕ್ಕೆ ಗೆಲುವು ಸಾಧ್ಯವಾಗಲಿಲ್ಲ. 9 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 80 ರನ್ ಗಳಿಸಿತು. ಮೈಸೂ ರಿನ ಸ್ಪಿನ್ನರ್ ಜೆ. ಸುಚಿತ್ (15ಕ್ಕೆ2) ಉತ್ತಮ ಬೌಲಿಂಗ್ ಮಾಡಿದರು.

ಸಂಕ್ಷಿಪ್ತ ಸ್ಕೋರು: ಮೈಸೂರು ವಾರಿಯರ್ಸ್: 20 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 159 (ಕೆ. ಗೌತಮ್ 21, ಮನೋಜ್ ಭಾಂಡಗೆ ಔಟಾಗದೆ 42, ಕರುಣ್ ನಾಯರ್ 18, ಹಾರ್ದಿಕ್ ರಾಜ್ 32ಕ್ಕೆ2, ಟಿ. ಪ್ರದೀಪ್ 46ಕ್ಕೆ2, ಡಿ. ಅವಿನಾಶ್ 44ಕ್ಕೆ2) ಶಿವಮೊಗ್ಗ ಲಯನ್ಸ್: 9 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 80 (ಅಭಿನವ್ ಮನೋಹರ್ ಔಟಾಗದೆ 52, ಜೆ. ಸುಚಿತ್ 15ಕ್ಕೆ2) ಫಲಿತಾಂಶ: ಮೈಸೂರು ವಾರಿಯರ್ಸ್‌ಗೆ 7 ರನ್‌ಗಳ ಜಯ (ವಿಜೆಡಿ ಪದ್ಧತಿ)